ಶುಕ್ರವಾರ, ಮೇ 6, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 125 | ಪುಟ 16
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಸಾಯಿಕುಮಾರ್ ಅವರ ಬಣ್ಣದ ಪಯಣದ ಸುವರ್ಣ ಹೆಜ್ಜೆಯ ಹೊತ್ತಿನಲ್ಲಿ 'ಅವತಾರ'ಗಳ ಮೆಲುಕು



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,702 ▲	16,682 ▲	₹53,500 (ಬೆಂಗಳೂರು) ▲	₹65,400 (ಬೆಂಗಳೂರು) ▲	76.35 ▲



ಡಿವೈಎಸ್ಪಿ, ಸಿಪಿಐ ಸೇರಿ ಆರು ಮಂದಿ ಬಂಧನ ● ಇನ್ನಷ್ಟು ಅಧಿಕಾರಿಗಳಿಗೆ ನೋಟಿಸ್?

ಪಿಎಸ್‌ಐ: 20 ಕೇಂದ್ರಗಳಲ್ಲಿ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮದ ಸಂಬಂಧ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ರಾಜಧಾನಿ ಬೆಂಗಳೂರಿನ 20 ಕೇಂದ್ರಗಳಲ್ಲಿ ಅಕ್ರಮ ನಡೆದಿರುವುದನ್ನು ಪತ್ತೆ ಮಾಡಿದ್ದಾರೆ. ಈ ಮಧ್ಯೆಯೇ ಡಿವೈಎಸ್ಪಿ ಹಾಗೂ ಸಿಪಿಐ ಸೇರಿದಂತೆ ಆರು ಮಂದಿಯನ್ನು ಗುರುವಾರ ಬಂಧಿಸಲಾಗಿದೆ.

'ಕಲಬುರ್ಗಿ ಚೌಕ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ರಾಯಚೂರು ಜಿಲ್ಲೆಯ ಲಿಂಗಸುಗೂರು ಡಿವೈಎಸ್ಪಿ ಮಲ್ಲಿಕಾರ್ಜುನ ಸಾಲಿ, ಕಲಬುರಗಿ ಬೆರಳಚ್ಚು ವಿಭಾಗದ ಸಿಪಿಐ ಆನಂದ ವಿಜಯಕುಮಾರ ಮೇತ್ರಿ ಹಾಗೂ ಬೆಂಗಳೂರು ಹೈಗ್ರೌಂಡ್ಸ್ ಠಾಣೆ ಪ್ರಕರಣದಲ್ಲಿ ಅಭ್ಯರ್ಥಿಗಳಾದ ಸಿ.ಎಸ್. ನಾಗೇಶ್ ಗೌಡ, ಜಿ.ಸಿ. ರಾಘವೇಂದ್ರ, ಸೋಮನಾಥ್ ಮಲ್ಲಿಕಾರ್ಜುನಯ್ಯ ಹಿರೇಮಠ ಹಾಗೂ ಜಿ.ಸಿ. ರಘುವೀರ್ ಅವರನ್ನು ಬಂಧಿಸಲಾಗಿದೆ. ಈ ಮೂಲಕ ಎರಡೂ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 47ಕ್ಕೆ ಏರಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಬಂಧಿತ ಆನಂದ ಮೇತ್ರಿ, ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಪಡನೂರ ಗ್ರಾಮದವರು. 2009ನೇ ಸಾಲಿನಲ್ಲಿ ಬೆರಳಚ್ಚು ವಿಭಾಗದ ಪಿಎಸ್‌ಐ ಆಗಿ ನೇಮಕಗೊಂಡಿದ್ದರು. ಇನ್‌ಸ್ಪೆಕ್ಟರ್ ಹುದ್ದೆಗೆ ಪದೋನ್ನತಿ ಹೊಂದಿ, 12 ವರ್ಷಗಳಿಂದ ಕಲಬುರಗಿಯಲ್ಲಿ ಕೆಲಸ ಮಾಡುತ್ತಿದ್ದರು' ಎಂದೂ ಮೂಲಗಳು ತಿಳಿಸಿವೆ.

ಕೇಂದ್ರದ ಸಿಬ್ಬಂದಿಗೆ ನೋಟಿಸ್: ಅಕ್ರಮ ನಡೆದಿರುವ ಬೆಂಗಳೂರಿನ 20 ಕೇಂದ್ರಗಳಲ್ಲಿ ಕೆಲಸ ಮಾಡಿದ್ದ ಸಿಬ್ಬಂದಿ ಹಾಗೂ ಭದ್ರತೆ ನೀಡಿದ್ದ ಪೊಲೀಸರಿಗೆ ನೋಟಿಸ್ ನೀಡಲು ಸಿಐಡಿ ತಯಾರಿ ನಡೆಸಿದೆ.

'ಕೇಂದ್ರದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಲಾಗುತ್ತಿದೆ. ಕೇಂದ್ರದಲ್ಲಿ ಕೆಲಸ ಮಾಡಿದ್ದ ಸಿಬ್ಬಂದಿ, ಮೇಲ್ವಿಚಾರಕರು ಹಾಗೂ ಭದ್ರತೆ ಕರ್ತವ್ಯದಲ್ಲಿದ್ದ ಪೊಲೀಸರ ಬಗ್ಗೆ ಮಾಹಿತಿ ಪಡೆಯಲಾಗುತ್ತಿದೆ. ಅವರೆಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ. ಪರೀಕ್ಷೆ ದಿನದಂದು ಏನಾಯಿತು? ಎಂಬುದನ್ನು ತಿಳಿಯಬೇಕಿದೆ' ಎಂದೂ ಮೂಲಗಳು ವಿವರಿಸಿವೆ.

10ನೇ ರ್‍ಯಾಂಕ್ ಪಡೆದಿದ್ದ ಕಾನ್‌ಸ್ಟೆಬಲ್: 'ನೆಲಮಂಗಲ ಸಂಚಾರ ಠಾಣೆಯಲ್ಲಿ ಕಾನ್‌ಸ್ಟೆಬಲ್ ಆಗಿದ್ದ ನಾಗೇಶ್ ಗೌಡ, 545 ಪಿಎಸ್‌ಐ ನೇಮಕಾತಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ 10ನೇ ರ್‍ಯಾಂಕ್ ಪಡೆದಿದ್ದ. ಈತನ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು' ಎಂದು ಸಿಐಡಿ ಮೂಲಗಳು ಹೇಳಿವೆ.

6ನೇ ಪುಟ ನೋಡಿ


ಅಮ್ರಿತ್ ಪೌಲ್


ಮಲ್ಲಿಕಾರ್ಜುನ ಸಾಲಿ


ಆನಂದ ಮೇತ್ರಿ

ಎಡಿಜಿಪಿ ಅಮ್ರಿತ್ ಪೌಲ್‌ಗೆ ನೋಟಿಸ್ ?

ಪಿಎಸ್‌ಐ ನೇಮಕಾತಿ ಅಕ್ರಮ ದಿನಕ್ಕೊಂದು ತಿರುವು ಪಡೆಯುತ್ತಿದ್ದು, ಪ್ರಕರಣದಲ್ಲಿ ಭಾಗಿಯಾಗಿರುವ ಪೊಲೀಸ್ ಅಧಿಕಾರಿಗಳನ್ನು ಸಿಐಡಿ ಪೊಲೀಸರು ಬಂಧಿಸುತ್ತಿದ್ದಾರೆ. ನೇಮಕಾತಿ ವಿಭಾಗದ ಅಧಿಕಾರಿಗಳೂ ಪೊಲೀಸರನ್ನು ಬಳಸಿಕೊಂಡು ವ್ಯವಸ್ಥಿತವಾಗಿ ಅಕ್ರಮ ನಡೆಸಿರುವ ಶಂಕೆ ಸಿಐಡಿಗೆ ಬಂದಿದೆ.

ನೇಮಕಾತಿ ವಿಭಾಗದ ಮೇಲೆ ಕಣ್ಣಿಟ್ಟಿರುವ ಸಿಐಡಿ, ಮಾಹಿತಿ ಕಲೆಹಾಕುತ್ತಿದೆ. ನೇಮಕಾತಿ ವಿಭಾಗದ ಎಡಿಜಿಪಿ ಆಗಿ ಕೆಲಸ ಮಾಡಿದ್ದ ಅಮ್ರಿತ್ ಪೌಲ್ ಅವರಿಗೂ ನೋಟಿಸ್ ನೀಡಲು ಸಿದ್ಧತೆ ಮಾಡಿಕೊಳ್ಳುತ್ತಿರುವುದಾಗಿ ಗೊತ್ತಾಗಿದೆ.

'ಅಮ್ರಿತ್ ಪೌಲ್ ಅಧೀನದಲ್ಲಿ ಕೆಲಸ ಮಾಡಿದ್ದ ಡಿವೈಎಸ್ಪಿ ಶಾಂತಕುಮಾರ್ ಹಾಗೂ ಇತರೆ ಸಿಬ್ಬಂದಿ ಅಕ್ರಮದಲ್ಲಿ ಭಾಗಿಯಾಗಿರುವ ಅನುಮಾನವಿದೆ. ಆದರೆ, ಪುರಾವೆಗಳು ಸಿಕ್ಕಿಲ್ಲ. ರಾಜ್ಯ ಪೊಲೀಸ್ ಮಹಾನಿರ್ದೇಶಕ ಹಾಗೂ ಗೃಹ ಇಲಾಖೆಗೆ ಮಾಹಿತಿ ನೀಡಿ, ಎಲ್ಲರನ್ನೂ ವಿಚಾರಣೆ ನಡೆಸಬೇಕಿದೆ' ಎಂದೂ ಮೂಲಗಳು ಹೇಳಿವೆ.

'ಕಲಬುರಗಿಯಲ್ಲಿ ಬಂಧಿಸಲಾಗಿರುವ ಆರೋಪಿಗಳಿಗೂ ಎಡಿಜಿಪಿ ಅಮ್ರಿತ್ ಪೌಲ್ ಅವರಿಗೂ ಒಡನಾಟವಿರುವ ಶಂಕೆಯೂ ಇದೆ' ಎಂದೂ ತಿಳಿಸಿವೆ.

'ಪಿಎಸ್‌ಐ' ಸಮವಸ್ತ್ರ: ಕಾನ್‌ಸ್ಟೆಬಲ್ ಅಮಾನತು

ಪಿಎಸ್‌ಐ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ 27ನೇ ರ್‍ಯಾಂಕ್ ಪಡೆಯುತ್ತಿದ್ದಂತೆ ಎರಡು ಸ್ಟಾರ್ ಸಮೇತ ಸಮವಸ್ತ್ರ ಧರಿಸಿದ್ದ ಆರೋಪದಡಿ ಬೆಂಗಳೂರಿನ ವಿವೇಕನಗರ ಠಾಣೆ ಕಾನ್‌ಸ್ಟೆಬಲ್ ಬಸನಗೌಡ ಟಿ. ಕರೇಗೌಡರ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಪಿಎಸ್‌ಐ ನೇಮಕಾತಿ ಆದೇಶಕ್ಕೂ ಮುನ್ನವೇ ಬಸನಗೌಡ, ಸಮವಸ್ತ್ರ ಧರಿಸಿ ತಮ್ಮೂರಿನ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಈ ಬಗ್ಗೆ ಪರಿಶೀಲನೆ ನಡೆಸಿದ್ದ ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್, ಕಾನ್‌ಸ್ಟೆಬಲ್ ಬಸನಗೌಡ ಅವರನ್ನು ಅಮಾನತು ಮಾಡಿದ್ದಾರೆ.

ಅಕ್ರಮದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ಬಸನಗೌಡ ಅವರನ್ನೂ ವಿಚಾರಣೆ ಮಾಡಿದ್ದರು. ಒಎಂಆರ್ ಪ್ರತಿ ಹಾಗೂ ಇತರೆ ದಾಖಲೆಗಳನ್ನು ಪಡೆದಿದ್ದರು. ವಿಚಾರಣೆ ಎದುರಿಸಿದ್ದ ಬಸನಗೌಡ, ನಂತರ ಕರ್ತವ್ಯಕ್ಕೆ ಹಾಜರಾಗಿದ್ದರು.

ಇನ್ನಷ್ಟು ಸುದ್ದಿಗಳು 6

ಮನವರಿಕೆ ಮಾಡಲಾಗದೆ ರೆಪೊ ಏರಿಕೆ ತೀರ್ಮಾನ?

ಮುಂಬೈ (ಪಿಟಿಐ): ಹಣದುಬ್ಬರವನ್ನು ನಿಯಂತ್ರಿಸಲು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ತಗ್ಗಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನದಟ್ಟು ಮಾಡಲು ಸಾಧ್ಯವಾಗದ ಕಾರಣದಿಂದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹಠಾತ್ತನೆ ರೆಪೊ ದರ ಹೆಚ್ಚಿಸುವ ತೀರ್ಮಾನ ಕೈಗೊಂಡಿರಬಹುದು ಎಂದು ಮೂಲಗಳು ತಿಳಿಸಿವೆ.

ಅಲ್ಲದೆ, ಹಣದುಬ್ಬರ ನಿಯಂತ್ರಿಸಲು ಪೂರೈಕೆ ವ್ಯವಸ್ಥೆಗೆ ಸಂಬಂಧಿಸಿದಂತೆ ಕೆಲವು ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ಸರ್ಕಾರಕ್ಕೆ ಮನದಟ್ಟು ಮಾಡಲು ಕೂಡ ಆರ್‌ಬಿಐಗೆ ಸಾಧ್ಯವಾದ್ದಕ್ಕೆ ರೆಪೊ ದರ ಹೆಚ್ಚಿಸಿರಬಹುದು ಎನ್ನಲಾಗಿದೆ.

ಮಾರ್ಚ್ 22ರಿಂದ 10 ದಿನಗಳ ಅವಧಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರಿಗೆ ತಲಾ ₹ 10ರಷ್ಟು ಹೆಚ್ಚಿಸಲಾಗಿದೆ. ಅದಾಗಲೇ ದುಬಾರಿ ಮಟ್ಟದಲ್ಲಿದ್ದ ಕೆಲವು ಅಗತ್ಯ ವಸ್ತುಗಳ ಬೆಲೆ ಇನ್ನಷ್ಟು ಹೆಚ್ಚಾಗಲು ಇದು ಕಾರಣವಾಯಿತು.

ಚಿಲ್ಲರೆ ಹಣದುಬ್ಬರ ದರವು ಶೇ 6ಕ್ಕಿಂತ ಕಡಿಮೆ ಇರುವಂತೆ ನೋಡಿಕೊಳ್ಳುವ ಹೊಣೆ ಆರ್‌ಬಿಐ ಮೇಲಿದೆ. 'ಪರಿಸ್ಥಿತಿ ತೀರಾ ಕಷ್ಟಕರವಾಗಿರುವ ಹೊತ್ತಿನಲ್ಲಿ ಆರ್‌ಬಿಐ ಒಬ್ಬಂಟಿಯಾಗಿದೆ. ಈಗಿನ ಸಂದರ್ಭವನ್ನು ಈ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಕು' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಎಕ್ಸೈಸ್ ಸುಂಕವನ್ನು ಇನ್ನಷ್ಟು ತಗ್ಗಿಸುವಂತಹ ಕ್ರಮ ಕೈಗೊಳ್ಳುವಂತೆ ಆರ್‌ಬಿಐ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿತು, ಬೇಡಿಕೊಂಡಿತು, ಕಿವಿಮಾತು ಹೇಳಿತು. ಆದರೆ ಪ್ರತಿಕ್ರಿಯೆ ಸಿಗಲಿಲ್ಲ. ಇದೇ ರೀತಿ ಮಾಡುವಂತೆ ರಾಜ್ಯ ಸರ್ಕಾರಗಳನ್ನೂ ಕೇಳಿಕೊಂಡಿತು. ಆದರೆ ಪರಿಣಾಮ ಆಗಲಿಲ್ಲ' ಎಂದು ಮೂಲಗಳು ಹೇಳಿವೆ.

ಈಗ ಹಣದುಬ್ಬರದ ವಿರುದ್ಧದ ಹೋರಾಟವನ್ನು ಆರ್‌ಬಿಐ ಏಕಾಂಗಿಯಾಗಿ ನಡೆಸಲಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು. ಹಿಂದಿನ ವರ್ಷ ಕೇಂದ್ರ ಸರ್ಕಾರವು ಪೆಟ್ರೋಲ್ ಮೇಲಿನ ಎಕ್ಸೈಸ್ ಸುಂಕವನ್ನು ಲೀಟರಿಗೆ ₹ 5ರಷ್ಟು, ಡೀಸೆಲ್ ಮೇಲಿನ ಸುಂಕವನ್ನು ಲೀಟರಿಗೆ ₹ 10ರಷ್ಟು ತಗ್ಗಿಸಿತ್ತು.

ಆರ್‌ಬಿಐ ರೆಪೊ ದರ ಹೆಚ್ಚಿಸಿರುವ ಪರಿಣಾಮವಾಗಿ ಸಾಲವು ದುಬಾರಿ ಆಗಲಿದೆ. ಇದರಿಂದಾಗಿ ಅರ್ಥ ವ್ಯವಸ್ಥೆಯ ಬೆಳವಣಿಗೆಗೆ ಪೆಟ್ಟು ಬೀಳುವ ಸಾಧ್ಯತೆ ಇದೆ ಎಂಬ ಅಭಿಪ್ರಾಯ ಕೂಡ ಇದೆ.

ಸರ್ಕಾರದ ಪರವಾಗಿ ₹ 14 ಲಕ್ಷ ಕೋಟಿ ಮೊತ್ತದ ಸಾಲ ಸಂಗ್ರಹಿಸುವ ಕಾರ್ಯಕ್ರಮಕ್ಕೆ ಯಾವ ಅಡ್ಡಿಗಳೂ ಎದುರಾಗದಂತೆ ಆರ್‌ಬಿಐ ನೋಡಿಕೊಳ್ಳಲಿದೆ ಎಂದು ಮೂಲಗಳು ಖಚಿತಪಡಿಸಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶಾಸಕ ಜಿಗ್ನೇಶ್‌ಗೆ 3 ತಿಂಗಳ ಜೈಲು ಶಿಕ್ಷೆ


ಜಿಗ್ನೇಶ್ ಮೇವಾನಿ

ಮೆಹ್ಸಾನಾ, ಗುಜರಾತ್ (ಪಿಟಿಐ): ಗುಜರಾತ್‌ನ ಪಕ್ಷೇತರ ಶಾಸಕ ಜಿಗ್ನೇಶ್ ಮೇವಾನಿ ಮತ್ತು ಇತರ ಒಂಬತ್ತು ಮಂದಿಗೆ ಅನುಮತಿ ಪಡೆಯದೇ 'ಆಜಾದಿ ಮಾರ್ಚ್' ನಡೆಸಿದ ಪ್ರಕರಣದಲ್ಲಿ ಇಲ್ಲಿನ ಮ್ಯಾಜಿಸ್ಟೀರಿಯಲ್ ನ್ಯಾಯಾಲಯ ಗುರುವಾರ ಮೂರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ. ಇದು ಐದು ವರ್ಷಗಳ ಹಿಂದಿನ ಪ್ರಕರಣ.

ಕಾನೂನುಬಾಹಿರವಾಗಿ ಸಭೆ ನಡೆಸಿದ್ದಕ್ಕಾಗಿ ಜಿಗ್ನೇಶ್ ಮೇವಾನಿ, ಎನ್‌ಸಿಪಿ ಕಾರ್ಯಾಧ್ಯಕ್ಷೆ ರೇಷ್ಮಾ ಪಟೇಲ್ ಹಾಗೂ ಮೇವಾನಿಯವರ ರಾಷ್ಟ್ರೀಯ ದಲಿತ ಅಧಿಕಾರ್ ಮಂಚ್‌ನ ಕೆಲವು ಸದಸ್ಯರು ಸೇರಿ ಒಟ್ಟು ಹತ್ತು ಮಂದಿ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 143ರ ಅಡಿ ತಪ್ಪಿತಸ್ಥರೆಂದು ಹೆಚ್ಚುವರಿ ಮುಖ್ಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಜೆ.ಎ. ಪರ್ಮಾರ್ ತೀರ್ಪು ನೀಡಿದರು.

ನ್ಯಾಯಾಲಯವು ಎಲ್ಲ 10 ಅಪರಾಧಿಗಳಿಗೆ ತಲಾ ₹ 1,000 ದಂಡವನ್ನೂ ವಿಧಿಸಿದೆ.

2017ರ ಜುಲೈನಲ್ಲಿ ಮೆಹ್ಸಾನಾದಿಂದ ಬನಸ್ಕಾಂತ ಜಿಲ್ಲೆಯ ಧನೇರಾಗೆ ಅನುಮತಿಯಿಲ್ಲದೆ 'ಆಜಾದಿ ಮೆರವಣಿಗೆ' ಕೈಗೊಂಡಿದ್ದಕ್ಕಾಗಿ ಮೆಹ್ಸಾನಾ 'ಎ' ವಿಭಾಗದ ಪೊಲೀಸರು ಮೇವಾನಿ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದರು.

ಎಫ್‌ಐಆರ್‌ನಲ್ಲಿ ಹೆಸರಿಸಲಾದ ಒಟ್ಟು 12 ಆರೋಪಿಗಳಲ್ಲಿ ಒಬ್ಬರು ಸಾವನ್ನಪ್ಪಿದ್ದರೆ, ಇನ್ನೊಬ್ಬರು ತಲೆಮರೆಸಿಕೊಂಡಿದ್ದಾರೆ. ರೇಷ್ಮಾ ಪಟೇಲ್ ಆಗ ಯಾವುದೇ ರಾಜಕೀಯ ಪಕ್ಷದ ಸದಸ್ಯರಾಗಿರಲಿಲ್ಲ. ಆದರೆ, ಪಾಟೀದಾರ್ ಸಮುದಾಯ ನಡೆಸುತ್ತಿದ್ದ ಮೀಸಲಾತಿ ಚಳವಳಿಯನ್ನು ಬೆಂಬಲಿಸುತ್ತಿದ್ದರು.

ಎರಡೇ ದಿನಕ್ಕೆ ಎಲ್ಲ ಷೇರುಗಳಿಗೆ ಬಿಡ್

ನವದೆಹಲಿ (ಪಿಟಿಐ): ಎಲ್‌ಐಸಿ ಐಪಿಒಗೆ ಎರಡನೇ ದಿನವೇ ಪೂರ್ಣ ಪ್ರಮಾಣದಲ್ಲಿ ಬಿಡ್ ಸಲ್ಲಿಕೆ ಆಗಿದೆ. 16.20 ಕೋಟಿ ಷೇರುಗಳಿಗೆ ಬಿಡ್ ಆಹ್ವಾನಿಸಲಾಗಿತ್ತು. 16.68 ಕೋಟಿ ಷೇರುಗಳಿಗೆ ಬಿಡ್ ಸಲ್ಲಿಕೆ ಆಗಿದೆ.

ಪಾಲಿಸಿದಾರರಿಗೆ ನಿಗದಿಪಡಿಸಿದ್ದ ಷೇರುಗಳ ಸಂಖ್ಯೆಗಿಂತ ಮೂರು ಪಟ್ಟು ಹೆಚ್ಚು ಷೇರುಗಳಿಗೆ ಅರ್ಜಿಗಳು ಸಲ್ಲಿಕೆ ಆಗಿವೆ. ಉದ್ಯೋಗಿಗಳಿಗೆ ಮೀಸಲಿಟ್ಟಿದ್ದ ಪಾಲಿಗಿಂತ 2.21ರಷ್ಟು ಹೆಚ್ಚು ಷೇರುಗಳಿಗೆ ಅರ್ಜಿ ಸಲ್ಲಿಕೆ ಆಗಿದೆ.

ರಿಟೇಲ್ ಹೂಡಿಕೆದಾರರಿಗೆ 6.9 ಕೋಟಿ ಷೇರುಗಳನ್ನು ಮೀಸಲಿಡಲಾಗಿದೆ. ಈ ಪೈಕಿ ಶೇ 93ರಷ್ಟಕ್ಕೆ ಅರ್ಜಿಗಳು ಸಲ್ಲಿಕೆಯಾಗಿವೆ. ಅರ್ಹ ಸಾಂಸ್ಥಿಕ ಹೂಡಿಕೆದಾರರು (ಕ್ಯುಐಬಿ) ಶೇ 40ರಷ್ಟು ಮತ್ತು ಸಾಂಸ್ಥಿಕೇತರ ಹೂಡಿಕೆದಾರರು ಶೇ 47ರಷ್ಟು ಷೇರುಗಳಿಗೆ ಅರ್ಜಿ ಸಲ್ಲಿಸಿದ್ದಾರೆ.

ಸೋಮವಾರದವರೆಗೆ ಬಿಡ್ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

‘ಅನುಭವ ಮಂಟಪ ಕಾಮಗಾರಿಗೆ ಒಪ್ಪಿಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವಕಲ್ಯಾಣದಲ್ಲಿ ₹ 532 ಕೋಟಿ ವೆಚ್ಚದಲ್ಲಿ ‘ಅನುಭವ ಮಂಟಪ’ ನಿರ್ಮಾಣ ಯೋಜನೆಯ ಕಾಮಗಾರಿ ಕೈಗೊಳ್ಳಲು ರಾಜ್ಯ ಸರ್ಕಾರ ಗುರುವಾರ ಒಪ್ಪಿಗೆ ನೀಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಯ ಸಭೆ ಗುರುವಾರ ನಡೆಯಿತು. ಮೂರು ವರ್ಷಗಳ ಒಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಮುಖ್ಯಮಂತ್ರಿ ಸೂಚಿಸಿದರು.

‘ಅನುಭವ ಮಂಟಪ ಬಸವಣ್ಣನವರ ಕ್ರಾಂತಿಕಾರಿ ವೇದಿಕೆ. ಈ ಮಂಟಪದ ಮೂಲಕ ಸಮಾಜದ ಓರೆಕೋರೆಗಳನ್ನು ತಿದ್ದುವ ಕೆಲಸವನ್ನು ಅವರು ಮಾಡಿದ್ದಾರೆ. ಅವರು ಮಾಡಿರುವ ಸಾಮಾಜಿಕ ಕ್ರಾಂತಿಯನ್ನು ಪ್ರತಿಬಿಂಬಿಸುವ ರೂಪದಲ್ಲಿ ಅನುಭವ ಮಂಟಪ ನಿರ್ಮಾಣ ಆಗಬೇಕು. 12ನೇ ಶತಮಾನದಲ್ಲಿ ಇದ್ದಂಥ ವಚನಕಾರರು, ದಾರ್ಶನಿಕ ಪುರುಷರ ಕುರಿತು ಮಾಹಿತಿ ನೀಡುವಂಥ ಕಿರುಚಿತ್ರಗಳ ಪ್ರದರ್ಶನ, ಬಸವಣ್ಣನವರ ಜೀವನ ಸಾಧನೆ ಬಿಂಬಿಸುವ ಮಾಹಿತಿಗಳನ್ನು ಅನುಭವ ಮಂಟಪ ವೀಕ್ಷಿಸಲು ಬರುವ ಎಲ್ಲರಿಗೂ ವಿವರಿಸುವ ವ್ಯವಸ್ಥೆಯೂ ಇರಬೇಕು’ ಎಂದು ಅವರು ಸಭೆಗೆ ತಿಳಿಸಿದರು.

ಕಂದಾಯ ಸಚಿವ ಆರ್. ಅಶೋಕ, ಪಶು ಸಂಗೋಪನೆ ಸಚಿವ ಪ್ರಭು ಚವ್ಹಾಣ, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಬಸವರಾಜ ಪಾಟೀಲ ಸೇಡಂ, ರಘುನಾಥ ರಾವ್ ಮಲ್ಕಾಪುರೆ, ಅಮರನಾಥ ಪಾಟೀಲ, ಈಶ್ವರ ಖಂಡ್ರೆ, ಶಶೀಲ್ ಜಿ. ನಮೋಶಿ, ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ವಿಶೇಷ ಅಧಿಕಾರಿ, ಬೀದರ್ ಜಿಲ್ಲಾಧಿಕಾರಿ ಗೋವಿಂದರೆಡ್ಡಿ, ಬಸವಕಲ್ಯಾಣ ಅವೃದ್ಧಿ ಮಂಡಳಿಯ ಆಯುಕ್ತ ಶಿವಕುಮಾರ್ ಶೀಲವಂತ ಇದ್ದರು.

ಶಾಲೆ ಆರಂಭ ಮುಂದೂಡಿ: ಹೊರಟ್ಟಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡು ಬೇಸಿಗೆಯಲ್ಲಿ ಶಾಲೆಗಳನ್ನು ಪುನರಾರಂಭಿಸುವುದು ಸರಿಯಾದ ಕ್ರಮವಲ್ಲ. ಹೀಗಾಗಿ, ಜೂನ್ 1ರಿಂದ ಶಾಲೆ ಆರಂಭಿಸುವ ಬಗ್ಗೆ ಸರ್ಕಾರ ಪರಿಷ್ಕೃತ ಆದೇಶ ಹೊರಡಿಸಬೇಕು ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಹಿಂದೆಂದೂ ಕಂಡರಿಯದ ಬಿರು ಬಿಸಿಲಿನ ಬೇಗೆಯು ಈ ವರ್ಷ ದೇಶದಾದ್ಯಂತ ಇದೆ. ರಾಜ್ಯದಲ್ಲೂ ಕೂಡಾ ಬಿಸಿಲಿನ ಬೇಗೆಯಲ್ಲಿ ಜನ ಹಾಗೂ ಜಾನುವಾರುಗಳು ತೊಂದರೆ ಪಡುತ್ತಿರುವುದು ತಮಗೂ ಗೊತ್ತಿದೆ. ಅದರಲ್ಲಿಯೂ ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉರಿ ಬಿಸಿಲು ಮಧ್ಯಾಹ್ನದ ಹೊತ್ತಿನಲ್ಲಿ ನೆತ್ತಿಯನ್ನು ಸುಡುತ್ತಲಿದೆ ಎಂದು ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ.

ಇಂತಹ ಕಡು ಬೇಸಿಗೆಯಲ್ಲಿ ರಾಜ್ಯದಲ್ಲಿನ ಪ್ರಾಥಮಿಕ ಶಾಲೆಗಳನ್ನು ಮೇ 16 ರಿಂದ ಪ್ರಾರಂಭಿಸಲು ಶಿಕ್ಷಣ ಇಲಾಖೆ ಆದೇಶಿಸಿರುವುದು ಎಳೆಯ ಮಕ್ಕಳ ಪಾಲಕರಿಗೆ ನುಂಗಲಾರದ ತುತ್ತಾಗಿದೆ. ಆರಂಭಿಸಿದರೂ ಮಕ್ಕಳನ್ನು ಕಳುಹಿಸಲು ಪೋಷಕರು ಸಿದ್ಧರಿಲ್ಲ. ಶಾಲೆ ಆರಂಭವಾದರೆ ಉತ್ತರ ಭಾರತದಂತೆ ಮಕ್ಕಳು ಸನ್ ಸ್ಟ್ರೋಕ್‌ಗೆ ಒಳಗಾಗುವ ಸ್ಥಿತಿ ಇರುತ್ತದೆ. ಮಕ್ಕಳ ಹಿತದೃಷ್ಟಿಯಿಂದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಜೂನ್ 1ರಿಂದ ಆರಂಭಿಸುವಂತೆ ಪರಿಷ್ಕೃತ ಆದೇಶ ಹೊರಡಿಸಬೇಕು ಎಂದು ಅವರು ಪ್ರತಿಪಾದಿಸಿದ್ದಾರೆ.

ರಜೆ ಅವಧಿ ವಿಸ್ತರಿಸಿದಲ್ಲಿ ಕಡಿಮೆ ಬೀಳುವ ಶೈಕ್ಷಣಿಕ ದಿನಗಳನ್ನು ಪ್ರತಿ ಶನಿವಾರ ಹೆಚ್ಚುವರಿ ತರಗತಿಗಳನ್ನು ತೆಗೆದುಕೊಳ್ಳುವ ಮೂಲಕ ಸರಿಪಡಿಸಬಹುದು ಎಂದೂ ಅವರು ಹೇಳಿದ್ದಾರೆ.

‘ಪಿಎಸ್‌ಐ ಅಕ್ರಮ: ಗಾಳಿಯಲ್ಲಿ ಗುಂಡು ಹೊಡೆಯುತ್ತಿಲ್ಲ’

ಕೋಲಾರ: ‘ಪಿಎಸ್‌ಐ ನೇಮಕಾತಿ ಅಕ್ರಮದ ವಿಚಾರದಲ್ಲಿ ವಿರೋಧ ಪಕ್ಷದವರು ಗಾಳಿಯಲ್ಲಿ ಗುಂಡು ಹೊಡೆಯುತ್ತಿಲ್ಲ. ನಡೆದಿರುವ ಅಕ್ರಮ ಬಗ್ಗೆ ಬಿಚ್ಚಿಡುತ್ತಿದ್ದೇವೆ. ಅಕ್ರಮ ನಡೆದಿಲ್ಲ ಎಂದಾದರೆ ಸರ್ಕಾರ ಆಯ್ಕೆಪಟ್ಟಿ ಏಕೆ ರದ್ದುಪಡಿಸಿತು?’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಇಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಪಿಎಸ್‌ಐ ಅಕ್ರಮದ ಬಗ್ಗೆ ಸರ್ಕಾರಕ್ಕೆ ಮೊದಲು ನಾನು ಪತ್ರ ಬರೆದಿಲ್ಲ. ಸರ್ಕಾರದ ಭಾಗವಾಗಿರುವ ಪಶು ಸಂಗೋಪನಾ ಸಚಿವ ಪ್ರಭು ಚೌಹಾಣ್ ಅವರೇ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಪತ್ರ ಬರೆದವರು. ಈಗಿರುವಾಗ ಅಕ್ರಮ ನಡೆದಿಲ್ಲವೆಂದು ಸಮಜಾಯಿಷಿ ನೀಡುವುದರಲ್ಲಿ ಅರ್ಥವಿಲ್ಲ’ ಎಂದರು.

‘ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಕಾರಣಕ್ಕಾಗಿಯೇ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗುತ್ತಿದೆ. ಅಕ್ರಮಕ್ಕೆ ಗೃಹ ಸಚಿವ ಆರಗ ಜ್ಞಾನೇಂದ್ರ ಅವರೇ ಜವಾಬ್ದಾರಿ. ಅವರು ಮಂತ್ರಿಯಾಗಿರುವುದಕ್ಕೆ ನಾಲಾಯಕ್. ನಮ್ಮ ಪಕ್ಷದ ಆಡಳಿತಾವಧಿಯಲ್ಲಿ ಅಕ್ರಮ ನಡೆದಿದ್ದರೆ ಈಗ ಬಿಜೆಪಿಯದೇ ಸರ್ಕಾರವಿದ್ದು, ತನಿಖೆ ನಡೆಸಲಿ. ಅವರ ಕೈಯಲ್ಲೇ ಅಧಿಕಾರವಿದೆ’ ಎಂದು ಸವಾಲು ಹಾಕಿದರು.

‘ಸಚಿವ ಮುನಿರತ್ನ ಅವರ ಸಿಲ್ಲಿ ಹೇಳಿಕೆಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಅವರ ರೀತಿ ಹಣ ತೆಗೆದುಕೊಂಡು ಬೇರೆ ಪಕ್ಷಕ್ಕೆ ಓಡಿ ಹೋಗುವುದಿಲ್ಲ’ ಎಂದು ಲೇವಡಿ ಮಾಡಿದರು.







ಆರ್‌ಎಂವಿ 2ನೇ ಹಂತದ ಪಟೇಲಪ್ಪ ಬಡಾವಣೆಯ ಕೆಳಸೇತುವೆಯಲ್ಲಿ ಗುರುವಾರ ನೀರಿನಲ್ಲೇ ಮಹಿಳೆಯೊಬ್ಬರು ತಳ್ಳುಗಾಡಿಯ ಜೊತೆ ಸಾಗಿದರು (ಎಡಚಿತ್ರ). ಸಿಲ್ಕ್ ಬೋರ್ಡ್ ವೃತ್ತದಲ್ಲಿ ನಿಂತ ನೀರಿನಲ್ಲಿ ಜನರು ಓಡಾಡಲು ಪ್ರಯಾಸಪಟ್ಟರು (ಮಧ್ಯದ ಚಿತ್ರ). ವೈಟ್‌ಫೀಲ್ಡ್ ಮುಖ್ಯ ರಸ್ತೆಯಲ್ಲಿ ನೀರು ನಿಂತಿರುವುದು – ಪ್ರಜಾವಾಣಿ ಚಿತ್ರಗಳು

ಗುರುವಾರವೂ ನಗರದ ಹಲವೆಡೆ ಮಳೆ, ಸಂಚಾರ ವ್ಯತ್ಯಯ • ನಿವಾಸಿಗಳ ಪರದಾಟ

ಮಳೆ: ಅಪಾರ್ಟ್‌ಮೆಂಟ್‌ಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಗುರುವಾರವೂ ಹಲವೆಡೆ ಮಳೆ ಆಯಿತು. ಸರ್ಜಾಪುರದಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯವೊಂದಕ್ಕೆ ನೀರು ನುಗ್ಗಿತ್ತು.

ಕೆಲದಿನಗಳಿಂದ ಬಿಡುವು ಕೊಡುತ್ತಲೇ ಸುರಿಯುತ್ತಿತ್ತು, ಅದರ ಜೊತೆ ಜೋರು ಗಾಳಿಯೂ ಬೀಸುತ್ತಿದೆ. ಮಂಗಳವಾರ ಬೆಳಿಗ್ಗೆ ಹಲವೆಡೆ ಬಿಸಿಲು ಕಂಡುಬಂತು. ಮಧ್ಯಾಹ್ನದ ನಂತರ, ಮೋಡ ಕವಿದ ವಾತಾವರಣವೂ ಹೆಚ್ಚಾಯಿತು.

ನಂದಿನಿ ಲೇಔಟ್, ಮಹಾಲಕ್ಷ್ಮಿ ಲೇಔಟ್, ರಾಜಾಜಿನಗರ, ಬಸವೇಶ್ವರನಗರ, ಕುರುಬರಹಳ್ಳಿ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಮಧ್ಯಾಹ್ನವೇ ಜೋರು ಮಳೆ ಸುರಿಯಿತು.

ಗಾಂಧಿನಗರ, ಮೆಜೆಸ್ಟಿಕ್, ಎಂ.ಜಿ. ರಸ್ತೆ, ಶಿವಾಜಿನಗರ, ಅಶೋಕನಗರ, ಕೋರಮಂಗಲ, ಆಡುಗೋಡಿ, ಹೆಬ್ಬಾಳ ಹಾಗೂ ಸುತ್ತಮುತ್ತಲೂ ಸಂಜೆ ಮಳೆ ಆಯಿತು.



ಸಿಲ್ಕ್ ಬೋರ್ಡ್ ವೃತ್ತದಲ್ಲಿ ಹರಿಯುತ್ತಿದ್ದ ನೀರಿನಲ್ಲೇ ವಾಹನಗಳು ಸಂಚರಿಸಿದವು

ಮೆಜೆಸ್ಟಿಕ್ ರೈಲ್ವೆ ಕೆಳ ಸೇತುವೆ, ಶಿವಾನಂದ ವೃತ್ತ, ಓಕಳಿಪುರ ಕೆಳ ಸೇತುವೆಯಲ್ಲಿ ನೀರು ಹರಿಯಿತು. ಅದರಲ್ಲೇ ವಾಹನಗಳು ಸಂಚರಿಸಿದವು.

ಸಿಲ್ಕ್ ಬೋರ್ಡ್ ವೃತ್ತ, ಆರ್‌ಎಂವಿ 2ನೇ ಹಂತದ ಹಾಗೂ ಇತರೆ ಪ್ರಮುಖ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ಗಾಂಧಿನಗರ, ರಾಜಾಜಿನಗರ, ವಿಜಯನಗರದ ಕೆಲವೆಡೆ ಮರದ ಕೊಂಬೆಗಳು ನೆಲಕ್ಕುರುಳಿದ್ದವು.

ಸರ್ಜಾಪುರ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದಕ್ಕೆ ನೀರು ನುಗ್ಗಿದ್ದರಿಂದ ನಿವಾಸಿಗಳು ತೊಂದರೆ ಅನುಭವಿಸಿದರು. ಹೊರಗೆ ಬರಲಾರದೇ ಫ್ಲ್ಯಾಟ್‌ಗಳಲ್ಲಿ ಸಿಲುಕಿದ್ದರು. ಬಿಬಿಎಂಪಿ, ಅಗ್ನಿಶಾಮಕ ದಳದ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸಿ ನೀರು ತೆರವು ಮಾಡಿದರು.

ಬೊಮ್ಮನಹಳ್ಳಿ, ಮಹದೇವಪುರ, ಯಲಹಂಕ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ 7 ಸೆಂ.ಮೀ ಮಳೆ ಆಗಿರುವುದಾಗಿ ಹವಾಮಾನ ಇಲಾಖೆ ತಿಳಿಸಿದೆ.

ನೆಲಕ್ಕುರುಳಿದ ವಿದ್ಯುತ್ ಕಂಬಗಳು: ಜೆ.ಪಿ.ನಗರ 8ನೇ ಹಂತದಲ್ಲಿ ಬನ್ನೇರುಘಟ್ಟ ಮತ್ತು ಕೊತ್ತನೂರು ದಿಣ್ಣೆ ಮುಖ್ಯರಸ್ತೆಯಲ್ಲಿ ಆರು ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದವು. ಟ್ರಾನ್ಸ್‌ಫಾರ್ಮರ್, ಪಕ್ಕದಲ್ಲಿ ನಿಲ್ಲಿಸಿದ್ದ ಕಾರು ಹಾಗೂ ಆಟೊ ಮೇಲೆ ಮೇ ತೆಂಗಿನ ಮರವೊಂದು ಬಿದ್ದಿತ್ತು. ಇದರಿಂದಾಗಿ ವಿದ್ಯುತ್ ವ್ಯತ್ಯಯ ಉಂಟಾಯಿತು. ಬೆಸ್ಕಾಂ ಸಿಬ್ಬಂದಿ ದುರಸ್ತಿ ಕಾರ್ಯದಲ್ಲಿ ತೊಡಗಿದ್ದರು.

ಮಾಜಿ ಮೇಯರ್ ಶಾರದಮ್ಮ ಜೆಡಿಎಸ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮೇಯರ್ ಶಾರದಮ್ಮ, ಮಾಜಿ ಉಪಮೇಯರ್ ಪದ್ಮಾವತಿ ನರಸಿಂಹಮೂರ್ತಿ, ನಗರಸಭೆಯ ಮಾಜಿ ಸದಸ್ಯ ರಾಮಾಂಜಿನಪ್ಪ, ಚಿಕ್ಕಬಾಣಾವಾರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹನುಮಂತಪ್ಪ ಸೇರಿದಂತೆ ಹಲವು ಮುಖಂಡರು ಜೆಡಿಎಸ್‌ಗೆ ಸೇರಿದರು.

ನಗರದ ಜೆಡಿಎಸ್ ಕಚೇರಿಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಕುಮಾರಸ್ವಾಮಿ ಅವರು ಮಾತನಾಡಿ, 'ದಾಸರಹಳ್ಳಿ ಕ್ಷೇತ್ರದಲ್ಲಿ ಜೆಡಿಎಸ್‌ಗೆ ಒಳ್ಳೆಯ ನೆಲೆ ಇದೆ. ಮುಂದಿನ ಚುನಾವಣೆಯಲ್ಲಿ ಸಹ ಪಕ್ಷವು ಕ್ಷೇತ್ರದಲ್ಲಿ ಗೆಲುವು ಸಾಧಿಸಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು. 'ಪಕ್ಷಕ್ಕೆ ಸೇರ್ಪಡೆಯಾದ ಮುಖಂಡರಿಗೆ ಸೂಕ್ತ ಸ್ಥಾನಮಾನ ನೀಡಲಾಗುವುದು' ಎಂದು ಅವರು ಈ ವೇಳೆ ಭರವಸೆ ನೀಡಿದರು.

ಜೆಡಿಎಸ್ ಶಾಸಕ ಆರ್. ಮಂಜುನಾಥ್ ಮತ್ತು ಪಕ್ಷದ ಇತರ ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಶಾರದಮ್ಮ ಅವರನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಪಕ್ಷಕ್ಕೆ ಬರಮಾಡಿಕೊಂಡರು. ಶಾಸಕ ಆರ್‌. ಮಂಜುನಾಥ್ ಇದ್ದಾರೆ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

WEEKEND CORNER ಕ್ಲಾಸಿಫೈಡ್ಸ್

JOB OPPORTUNITIES

Multiple Vacancy

MODERN PUBLIC ENGLISH SCHOOL Ganganagar, Bangalore-32 Requires MATHEMATICS TEACHER for HIGH SCHOOL(SSLC) Candidates with M.Sc,B.Ed, 5-10years' Experience Contact:7899296839 / 9448684419 Email CV: mpes.ganganagar@gmail.com

GREEN VISION WASTE MANAGEMENT PVT LTD
www.gvwm.in udays@gvwm.in
Requires candidates for the following position
- MBA Graduates - HR
- MBA Graduates - Marketing
- Digital Marketing
- Accounts Manager - (CFO)
- B E Graduates in Civil/Mechanical/Electrical
- Environmental Engineers
- MSW - Master of Social Works

WE'RE HIRING
Walk-in for an interview on 08th May 2022 Sunday from 9:00 AM to 2:00 PM
Salary Best in Industry
9980037604
No. 66, Vivanta - Residency Road Bengaluru - 560 025

WANTED EXPERIENCED TALLY OPERATOR/ ACCOUNTANT for Part Time Office Work in Vasant Nagar, Bangalore- 9980646588.

General

WANTED EXPERIENCED, Efficient Retired officials andEntrepreneurs Male /Female for INDIA'S MOST TRUSTED BRAND 9886326012

Teachers/ Professors

WANTED TEACHERS for Physical education and Hindi for High School. Contact 9379191544. Yeswanthpura, Bangalore.

WANTED EXPERIENCED High School Science, Primary Maths Teacher and B.Ped teacher for School at Electronic City. Call: 8197984094/ 7406532264.

MSF
WANTED SECURITY PERSON FOR BANGALORE AIRPORT
Security Supervisor Rs. 20000/-.
Security Guard / Lady Guard - Rs. 19000/-
Duty 8hrs 26 Days With Weekly Off. Qualification – 10 +2 Or Degree. Attractive Salary, PF, ESI, Accommodation, Bus Service, Intime Salary And Other Benefits.
Contact Office: Modern V R Security Force India Pvt Ltd. Mylanahalli (Near Banglore Airport). Mobile: 9113932721, 9066424868, 7760095242 9449119114, 8884542811,

PROSPECTIVE CAREER, Retired, VRS, Professionals, Senior Citizens, Business People, Substantial Income. International Recognition. 97400-90431/ 8884445665

Marketing & Sales

WANTED IMMEDIATELY EXPERIENCED MARKETING EXECUTIVES (WITH TWO WHEELER PREFERABLE) TO PROMOTE OUR JEE/NEET BOOKS IN EDUCATIONAL INSTITUTIONS. SEND YOUR CV TO gsnpublishers@gmail.com. Ph:9440615689.

PUBLIC TV
ದಿನಾಂಕ: 7 ಮತ್ತು 8ನೇ ಮೇ ರಂದು ಮಲ್ಲೇಶ್ವರಂ ಗ್ರೌಂಡ್‌ನಲ್ಲಿ ನಡೆಯುವ ಪಬ್ಲಿಕ್ ಟಿವಿ ಪ್ರಾಪರ್ಟಿ ಎಕ್ಸ್‌ಪೋದಲ್ಲಿ ನಮ್ಮ ಸ್ಟಾಲ್‌ಗೆ ಬಂದು ಪ್ಲಾಟ್ ಬುಕ್ ಮಾಡಿದ ಗ್ರಾಹಕರಿಗೆ ರಿಜಿಸ್ಟ್ರೇಷನ್ ಉಚಿತ
Ready to Move in FARMPLOTS for Sale
• Ready to Registration • Ready to Construction • Ready to Farming
MANGO Grove Kanchanahalli, Channapatna
~~35 Lakhs~~ Offer Price: 30 Lakhs 5.25 Gunta
0% EMI Available
*Terms & Conditions Apply
Our Happy Customers
www.motherearthfarmland.com
MOTHER EARTH BUILDERS & DEVELOPERS
9845667339, 6366174040

FUN HOURS AT FUNWORLD
FUN WORLD & RESORTS INDIA PVT LTD
Get 30% discount on dry rids after 4PM
WEEKDAYS 899/- CHILD 999/- ADULT
WEEKENDS 999/- CHILD 1199/- ADULT
- College students Rs.100/- OFF.
- Army personnel Rs.100/- OFF.
- Make reels tag us @funworld.blr & get 2 free passes for next visit.
FUNWORLD.BLR
08431110000 Palace Grounds, Jayamahal Main Rd, Opposite TV Tower, J.C.Nagar, Bengaluru, Karnataka 560006 www.funworldblr.com

Security & Detectives

WANTED FIELD Officer for Security Agency in Bangalore. Min. 5 years exp. as Field Officer. Must have a two- wheeler, extensive traveling required. Company has a reputation for high work- ethic & rapid growth through employee recognition. Salary as per industry norms. Get in touch at 8108107819/ 04

Wanted

WANTED FEMALE Office Assistant Qualification any Degree, Good Communication Skills: Kannada, English, Hindi. in around Rajajinagar Contact: 23307910/ 9108458798

REAL ESTATE SELLING

House

Nagarabhavi

NAGARABAVI 40X42 E/S Corner House Near BDA Complex 30X40 East Site Near Ambedkar College: 9449121380

Sites

Vishweshwariah Layout

VISHWESHWARAIAH LAYOUT 1st Block, Site No.722, 50x80 west facing 100ft road, commercial good location immediate construction 13,000/- negotiable, 9845132011/ 9663554448

Flat

Frazer Town

RS. 30 Lakhs and 62 Lakhs, 1 & 2 BHK Ready to move/ Register with A khata, Power & Water 2kms from Frazer Town, last Flats Call Sterling Directly: 9886142864

RENTAL PROPERTIES

Accommodation Available

Commercial

SHOWROOM SPACE 6000 Sqft Ground Floor R.V. Road next to Indian Oil Petrol Bunk along with 6000 Sqft open space parking suitable for Jewellery Showrooms, Super Markets, Hotels. Contact Owner : 9342819739, 9740854716

House

RENT ABSHOT Layout, Sadhashivnagar, Basaweshwarnagar, RMV Dollars colony Sahakarnagar, Manyata, Gangamma circle. 3/4 BHK. 1 month commission. 9845004307

BUSINESS

Business to Business

Business

START_THREAD Business at Home_forTassels,Machine Embroideries.Dealer_enquiry solicited.Gemini Rayon_Embroidery Threads.Call:8095809223

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

General

EARN 65,000/- to 90,000/- per-month. Setup Paper-bags, Tea-cups, LED-Bulbs unit. We provide free raw material. Buyback Agreement. Contact: 9958628785.

TOURS & TRAVEL

Travel

SEND YOUR Parents to NEPAL MUKTINATH. We take care of them. We do Muktinath every month. NALANDA TRAVELS, Kundapura, Mobile: 8310028157

PUBLIC NOTICE

PUBLIC NOTICE

The Public are hereby notified that may client Sr Girish Raj and R Girish Raj are one and the same and (R Stands for Rangappa) and son of Late N R D Rangappa who died on 07/12/1996. Girish Raj succeeded to the Schedule Properties of Late N R D Rangappa as his legal heir, Neither NRD Rangappa nor Girish Raj have **not** transferred/ mortagaged/ escrowed the schedule Properties in any manner to anybody. The Original title deeds regarding the schedule properties have been stolen. The Computer, Mobile, Sims and Email id's, Pan card and Aadhaar card have been hacked. These documents are apprehended to be misused. A private family trust has been formed with the family members. Thus, two criminal cases have been filed.1. Cyber crime 2. Theft of documents in the respective police stations. My client is presently Life Member for Deen Dayal Sewa Prathishtan at H. O Lucknow. and EX National Secretary. His letterheads may be misused in his name Public are hereby cautoned Public/ Financial institutions are hereby cautioned not to deal with the schedule properties of N R D Rangappa/ Girish Raj without contacting personally. The Central Covernment and UIDAI have been informed of the Hacked Aadhaar card bearing number -xxxxxxxx-6445 and so also the state and local revenue authorties cautioning them aginst any illegal authentication or mutation for which my client will not be responsible,

SCHEDULE

Survey No 415/A-16.34 acres, 415/7-10 acres 415/Q-4acres situated in Belakavadi village malvalli taluk Mandya district and 10/B situated in M K Halli Hosahalli and other properties Hosahalli or anywhere.

Sd/- Advocate Appajigowda KAR472/77
Dated: 5.5.2022
Place: Malvalli

PUBLIC NOTICE
To Place your Classified Ads Contact: 9880856233

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

EDUCATIONAL

Admission

DIRECT FINAL: LLB (Can Practice) B.Tech/M.Tech Diploma, MBA/MSc, BCA, BBA, BSc, B.Com, D.Pharm/ B.Pharm, PU/ SSLC. Recognised Govt /UGC. Asha Academy, Bangalore. Ph: 9448460103/ 08026699786

PERSONAL

Missing

MISSING



Missing Tubby, a 16 year old Indian dog. He is from Sairagh Garden Apartments, Akshay Nagar, TC Palya, Ramamurthy Nagar. Tubby left at around 11:45 am on the 3rd of May. He is old, deaf, blind and walks slowly.
Reward will be given.
Contact : Mallika Fernandez, Mobile No. 9986499266/9886954881

Lost

ಕಳೆದುಹೋಗಿದೆ

ಶ್ರೀ ಈಶ್ವರ ರೆಡ್ಡಿ. ಟಿ, ವಯಸ್ಸು 48 ವರ್ಷ, S/o ಟಿ.ಕೊಂಡ ರೆಡ್ಡಿ, ಡೋರ್ ನಂ.956/36, ಮಾತೃಶ್ರೀ ನಿಲಯ, 1ನೇ ಕ್ರಾಸ್, ಗೌರಮ್ಮ ಎಕ್ಸ್‌ಟೆನ್ಷನ್, ಗ್ರೀನ್ ಡಾಟ್ ಸ್ಕೂಲ್ ಎದುರು, ಆನೇಕಲ್ ರಸ್ತೆ, ಚಂದಾಪುರ ಸರ್ಕಲ್, ಬೆಂಗಳೂರು – 560 099 ರಲ್ಲಿ ವಾಸವಿರುವ ನಾನು, ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ನೇರಳೂರು ಗ್ರಾಮದ ಸರ್ವೆ ನಂ.230/1, ಡಾಕ್ಯುಮೆಂಟ್ ನಂ.2463 /2001-02 ಶಿವಪ್ರಿಯ ಬಡಾವಣೆಯ ನಿವೇಶನ ಸಂಖ್ಯೆ 18ಇ, ಖಾತಾ ನಂ.1941/18ಇ ಮತ್ತು ಇ–ಸ್ವತ್ತು ನಂ.150200101500602090, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 39'1.5 ಅಡಿಗಳು, ಒಟ್ಟು 1174 ಚದರ ಅಡಿಗಳುಳ್ಳ ಡಾಕ್ಯುಮೆಂಟ್ ನಂ. ABL-1-06181/2021-22 ದಿನಾಂಕ 18.11.2021 ಸಬ್–ರಿಜಿಸ್ಟ್ರಾರ್, ಅತ್ತಿಬೆಲೆ, ಚಂದಾಪುರ ಪ್ರದೇಶದ ಕಛೇರಿಯಲ್ಲಿ ನೋಂದಾಯಿಸಲಾದ ಶ್ರೀ ಹರೀಶ್ ರವರ ಧರ್ಮಪತ್ನಿಯಾದ ಶ್ರೀಮತಿ ಚಿತ್ರಾವತಿ ಅವರ ಶುದ್ಧಕ್ರಯದ ಪತ್ರವನ್ನು ಕಳೆದುಕೊಂಡಿದ್ದೇನೆ. ಈ ನಿಟ್ಟಿನಲ್ಲಿ, ನಾನು ಕಳೆದುಹೋದ ಲೇಖನ ವರದಿ ಉಲ್ಲೇಖ ಸಂಖ್ಯೆ.PO2144220600186 ದಿನಾಂಕ 30.03.2022 ರಲ್ಲಿ ಕಳೆದುಕೊಂಡ ಬಗ್ಗೆ ದೂರನ್ನು ದಾಖಲಿಸಿದ್ದೇನೆ.
ಮೇಲೆ ತಿಳಿಸಿದ ಪತ್ರಗಳು ಯಾರಿಗಾದರೂ ಸಿಕ್ಕಿದ್ದಲ್ಲಿ 9663698172 ಸಂಖ್ಯೆಗೆ ಕರೆ ಮಾಡಿ

Change of Name

I, ARCHANA W/o. Ananthappa K.L R/a#1482, Further Extention 8th Block Sri MV Layout Gidadakonenahalli Bangalore- 560091 After Marriage Have Changed My Name From ARCHANA KOTUR to ARCHANA vide Affidavit Dated 29-04-2022 Before Notary Devaraja E. Bengaluru

I, VENKATESH PRASAD S/o.Rajagopala R/o.#148, 72nd cross, Kumaraswamy Layout, J.P.Nagar, Bangalore-78 have changed my name to R. VENKATESH PRASAD, S/o Rajagopal B, affidavit dated 11.03.2022 Notary R.Basavaraja, Bangalore.

I, M. MANJUNATHA S/o. A. Muniswamy R/a #114, 2nd Main Road, Nanjappa Layout, Vidyaranyapura Post Bangalore- 560097 Have Changed My Name to MANJUNATH vide Affidavit Dated 25-4-2022 Before Notary G.R. Ravichandra Reddy, Bangalore.

I, MUTHULAKSHMI, R/o Ganegarapalya Thalaghattapura, Bangalore-62, have changed my son's name from ULLAS.S. to UTHSAV .S. vide affidavit dated-05.05.2022 before Notary Ambareshappa, Bangalore.

ಕೋವಿಡ್ ಕರ್ತವ್ಯ: 141 ಹೊರಗುತ್ತಿಗೆ ವೈದ್ಯರ ವೇತನ ಹೆಚ್ಚಿಸುವಂತೆ ಕೋರಿಕೆ

ಗುತ್ತಿಗೆ ವೈದ್ಯರ ವೇತನ ಶೇ 50ರಷ್ಟು ಕಡಿತ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣ ಚಟುವಟಿಕೆ ಸಲುವಾಗಿ ಬಿಬಿಎಂಪಿಯು ತನ್ನ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒಟ್ಟು 141 ವೈದ್ಯರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿದೆ. ಆದರೆ, ಇವರಿಗೆ ಈ ಸಲ ಈ ಹಿಂದಿಗಿಂತ ಅರ್ಧದಷ್ಟು ಗೌರವ ಧನವನ್ನು ಮಾತ್ರ ನಿಗದಿಪಡಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸೋಂಕಿತರ ಪತ್ತೆ ಕಾರ್ಯ, ಕೋವಿಡ್ ಪರೀಕ್ಷೆ ನಡೆಸುವುದು, ಸೋಂಕಿತರಿಗೆ ಚಿಕಿತ್ಸೆ ನೀಡುವುದು, ಮನೆಯಲ್ಲೇ ಪ್ರತ್ಯೇಕವಾಸಕ್ಕೆ ಒಳಗಾಗಿ ಚಿಕಿತ್ಸೆ ಪಡೆಯುವವರ ಆರೋಗ್ಯದ ಮೇಲೆ ನಿಗಾ ಇಡುವುದು, ಸಂಚಾರ ಟ್ರಯಾಜಿಂಗ್ ಹಾಗೂ ಲಸಿಕಾಕರಣ ಕಾರ್ಯಗಳನ್ನು ಕೈಗೊಳ್ಳಲು ತಲಾ 141 ವೈದ್ಯರು, ಗಂಟಲ/ ಮೂಗಿನ ದ್ರವದ ಮಾದರಿ ಸಂಗ್ರಾಹಕರು ಹಾಗೂ ಡೇಟಾ ಎಂಟ್ರಿ ಸಿಬ್ಬಂದಿಯನ್ನು ಒಂದು ತಿಂಗಳ ಅವಧಿಗೆ ಹೊರ ಗುತ್ತಿಗೆ ಆಧಾರದಲ್ಲಿ ನಿಯೋಜಿಸಲಾಗಿದೆ.

ಎರಡು ವರ್ಷಗಳ ಹಿಂದೆ ಇದೇ ಉದ್ದೇಶಕ್ಕಾಗಿ ಪಿಎಚ್‌ಸಿಗಳಿಗೆ ವೈದ್ಯರನ್ನು ನೇಮಿಸಿಕೊಂಡಾಗ ಬಿಬಿಎಂಪಿಯು ಅವರಿಗೆ ₹ 45,000 ಮಾಸಿಕ ವೇತನ ಹಾಗೂ ₹ 15,000 ಪ್ರೋತ್ಸಾಹಕ ಭತ್ಯೆ ಸೇರಿ ತಿಂಗಳಿಗೆ ₹ 60,000 ನೀಡಿತ್ತು. ಆದರೆ, ಬುಧವಾರ (ಇದೇ 4ರಂದು) ಹೊರಡಿಸಿರುವ ನೇಮಕಾತಿ ಆದೇಶದ ಪ್ರಕಾರ ವೈದ್ಯರಿಗೆ ತಿಂಗಳಿಗೆ ₹ 30,000 ವೇತನ ನಿಗದಿಪಡಿಸಲಾಗಿದೆ. ಇತರೆ ವೆಚ್ಚ ಕಡಿತಗೊಳಿಸಿದ ಬಳಿಕ ಅವರ ಕೈಸೇರುವುದು ₹ 27,000 ಮಾತ್ರ.

ವೈದ್ಯರ ನೇಮಕ: ವಲಯವಾರು ವಿವರ

ವಲಯ	ವೈದ್ಯರ ಸಂಖ್ಯೆ
ಪೂರ್ವ	27
ಪಶ್ಚಿಮ	29
ದಕ್ಷಿಣ	27
ಬೊಮ್ಮನಹಳ್ಳಿ	13
ಮಹದೇವಪುರ	16
ಯಲಹಂಕ	10
ಆರ್.ಆರ್.ನಗರ	12
ದಾಸರಹಳ್ಳಿ	07


ಗಂಟಲ/ ಮೂಗಿನ ದ್ರವದ ಮಾದರಿ ಸಂಗ್ರಾಹಕರಿಗೆ ಮತ್ತು ಹಾಗೂ ಡೇಟಾ ಎಂಟ್ರಿ ಸಿಬ್ಬಂದಿಗೆ ತಿಂಗಳಿಗೆ ತಲಾ ₹ 17 ಸಾವಿರ ವೇತನ ನಿಗದಿಪಡಿಸಲಾಗಿದೆ. ಅವರಿಗೆ ಈ ಹಿಂದೆ ₹ 2 ಸಾವಿರ ಪ್ರೋತ್ಸಾಹಧನ ಸೇರಿ ತಿಂಗಳಿಗೆ ₹ 19 ಸಾವಿರ ನೀಡಲಾಗುತ್ತಿತ್ತು. ಈ ಸಲ ಪ್ರೋತ್ಸಾಹ ಧನವನ್ನು ಕೈಬಿಡಲಾಗಿದೆ.

'ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಅಗತ್ಯ ವಸ್ತುಗಳ ದರ ಹೆಚ್ಚಾಗಿದೆ. ಜೀವನ ನಿರ್ವಹಣೆ ವೆಚ್ಚ ದುಬಾರಿಯಾಗಿರುವ ಈ ಸಂದರ್ಭದಲ್ಲಿ ವೇತನವನ್ನು ಹೆಚ್ಚಿಸುವ ಬದಲು ಅರ್ಧದಷ್ಟು ಕಡಿಮೆ ಮಾಡಿರುವುದು ಸರಿಯಲ್ಲ. ವೈದ್ಯರ ಶ್ರಮಕ್ಕೆ ಬೆಲೆ ಇಲ್ಲದಂತಾಗಿದೆ. ಆದ್ದರಿಂದ ವೈದ್ಯರಿಗೆ ಕಳೆದ ಸಾಲಿನಲ್ಲಿ ನೀಡುತ್ತಿದ್ದಷ್ಟೇ ವೇತನ ನೀಡುವ ಮೂಲಕ ಅವರ ವೃತ್ತಿ ಗೌರವಕ್ಕೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು' ಎಂದು ಚಾಮರಾಜಪೇಟೆಯ ಚಂದ್ರಶೇಖರ ಪುಟ್ಟಪ್ಪ ಅವರು ಬಿಬಿಎಂಪಿಯನ್ನು ಒತ್ತಾಯಿಸಿದ್ದಾರೆ.

'ಕೋವಿಡ್ ತೀವ್ರತೆ ಎರಡು ವರ್ಷಗಳ ಹಿಂದೆ ಇದ್ದಷ್ಟು ಈಗ ಇಲ್ಲ. ಬಿಬಿಎಂಪಿಯ ಹಣಕಾಸಿನ ಸ್ಥಿತಿಗತಿ ನೋಡಿಕೊಂಡು ಹಿರಿಯ ಅಧಿಕಾರಿಗಳು ವೈದ್ಯರ ವೇತನ ನಿಗದಿಪಡಿಸಿದ್ದಾರೆ. ಕಡಿಮೆ ವೇತನ ನಿಗದಿಪಡಿಸಿದರೂ ವೈದ್ಯರ ಕೊರತೆ ಆಗಿಲ್ಲ' ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಾಲಸುಂದರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಪೌರತ್ವ ಕಾಯ್ದೆ ಜಾರಿ ಖಚಿತ: ಶಾ

ಸಿಲಿಗುರಿ (ಪಶ್ಚಿಮ ಬಂಗಾಳ) (ಪಿಟಿಐ): ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು (ಸಿಎಎ) ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಜಾರಿಗೆ ತರಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಹೇಳಿದ್ದಾರೆ. ವಿವಾದಾತ್ಮಕವಾದ ಸಿಎಎ ಜಾರಿಯ ವಿಚಾರವನ್ನು ಕೇಂದ್ರವು ಕೈಬಿಟ್ಟಿಲ್ಲ ಎಂಬುದನ್ನು ಈ ಮೂಲಕ ಅವರು ಸ್ಪಷ್ಟಪಡಿಸಿದರು.



ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಸಿಎಎ ಕುರಿತು ಸುಳ್ಳು ಸುದ್ದಿ ಹರಡುತ್ತಿದೆ. ಸಿಎಎ ಜಾರಿಯೇ ಆಗದು ಎಂದು ಟಿಎಂಸಿ ಅಪಪ್ರಚಾರ ಮಾಡುತ್ತಿದೆ ಎಂದು ಅವರು ಆರೋಪಿಸಿದರು.

'ಮಮತಾ ಅವರೇ, ಅಕ್ರಮ ಒಳನುಸುಳುವಿಕೆ ಮುಂದುವರಿಯಲಿ ಎಂದು ನೀವು ಭಾವಿಸಿದ್ದೀರಾ? ಸಿಎಎ ಖಂಡಿತವಾಗಿಯೂ ಜಾರಿಗೆ ಬರಲಿದೆ. ಅದನ್ನು ತಡೆಯಲು ಮಮತಾ ಅವರಿಗೆ ಸಾಧ್ಯವಿಲ್ಲ' ಎಂದು ಶಾ ಹೇಳಿದರು.

2019 ಮತ್ತು 2020ರಲ್ಲಿ, ಕೋವಿಡ್ ಸಾಂಕ್ರಾಮಿಕ ಆರಂಭಕ್ಕೆ ಮುಂಚೆ, ಸಿಎಎ ವಿರುದ್ಧ ಭಾರಿ ಪ್ರತಿಭಟನೆ ನಡೆದಿತ್ತು. ಆದರೆ, ಕೋವಿಡ್ ತಡೆಗಾಗಿ ಹೇರಿದ್ದ ಲಾಕ್‌ಡೌನ್ ಮತ್ತು ಇತರ ನಿರ್ಬಂಧಗಳಿಂದಾಗಿ ಪ್ರತಿಭಟನೆ ನಿಂತಿತ್ತು.

ಧರ್ಮದ ಆಧಾರದಲ್ಲಿ ಪೌರತ್ವ ನೀಡಲು ಅವಕಾಶ ಕೊಡುವ ಮಸೂದೆಯು ತಾರತಮ್ಯ ಧೋರಣೆಯನ್ನು ಹೊಂದಿದೆ ಎಂಬುದು ಈ ಕಾಯ್ದೆಯ ಕುರಿತು ಇರುವ ಪ್ರಮುಖ ಆಕ್ಷೇಪವಾಗಿದೆ. ಜತೆಗೆ, ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದಿಂದ ಭಾರತಕ್ಕೆ 2015ಕ್ಕೂ ಮೊದಲು ಬಂದ ಮುಸ್ಲಿಮೇತರರಿಗೆ ಪೌರತ್ವ ನೀಡಿಕೆಯನ್ನು ತ್ವರಿತಗೊಳಿಸುತ್ತದೆ. ಕಾಯ್ದೆಯು ಜಾರಿಯಾದರೆ, ಲಕ್ಷಾಂತರ ಮುಸ್ಲಿಮರು ಪೌರತ್ವ ಕಳೆದುಕೊಳ್ಳುವ ಭೀತಿಯೂ ಇದೆ ಎಂದು ಕಾಯ್ದೆಯ ವಿರೋಧಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

'ಹಕ್ಕಿಗೆ ಧಕ್ಕೆಯಾಗಲು ಬಿಡುವುದಿಲ್ಲ': 'ನಾಗರಿಕರ ಹಕ್ಕುಗಳನ್ನು ಮೊಟಕುಗೊಳಿಸಲು ನಾವು ಬಿಡುವುದಿಲ್ಲ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಅಮಿತ್ ಶಾಗೆ ಸವಾಲು ಹಾಕಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ಕೋವಿಡ್ ಇಳಿಮುಖವಾದ ನಂತರ ದೇಶದಲ್ಲಿ ಸಿಎಎ ಜಾರಿಗೆ ತರುತ್ತೇವೆ ಎಂದು ಹೇಳಿದ್ದ ಶಾ ಅವರಿಗೆ, ಮಮತಾ ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ.

'ನಮ್ಮ ನಾಗರಿಕರ ಹಕ್ಕುಗಳಿಗೆ ಧಕ್ಕೆಯಾಗುವುದನ್ನು ನಾವು ಬಯಸುವುದಿಲ್ಲ. ಶಾ ಒಂದು ವರ್ಷದ ನಂತರ ಇಲ್ಲಿಗೆ ಬಂದಿದ್ದಾರೆ. ಪ್ರತಿ ಬಾರಿ ಬರುತ್ತಾರೆ, ಕೆಟ್ಟ-ಕೆಟ್ಟ ಮಾತುಗಳನ್ನಾಡುತ್ತಾರೆ' ಎಂದು ಮಮತಾ ಟೀಕಿಸಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಪತ್ನಿ ಪ್ರತ್ಯೇಕ ವಾಸ: ಜೀವನಾಂಶಕ್ಕೆ ಅರ್ಹ

ಬೆಂಗಳೂರು: 'ಕಿರುಕುಳಕ್ಕೆ ಬೇಸತ್ತು ಗಂಡನ ಮನೆ ತೊರೆದು ಪ್ರತ್ಯೇಕವಾಗಿ ವಾಸಿಸುತ್ತಿರುವ ಪತ್ನಿ ಜೀವನಾಂಶ ಪಡೆಯಲು ಅರ್ಹಳು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಜೀವನಾಂಶ ಕೋರಿ ನನ್ನ ಪತ್ನಿ ದೊಡ್ಡಬಳ್ಳಾಪುರದ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಪತಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಇಂತಹ ಪ್ರಕರಣದಲ್ಲಿ ಸ್ವಇಚ್ಛೆ ಹಾಗೂ ಪರಸ್ಪರ ಒಪ್ಪಂದದ ಮೇರೆಗೆ ಪತ್ನಿ ಮನೆಬಿಟ್ಟು ಹೋಗಿದ್ದಾಳೆ ಎಂಬುದಾಗಿ ಪ್ರತಿಪಾದಿಸಲು ಪತಿಗೆ ಅವಕಾಶವಿಲ್ಲ' ಎಂದು ಸ್ಪಷ್ಟಪಡಿಸಿದೆ.

'ಇಂತಹ ಪ್ರಕರಣದಲ್ಲಿ ಪತ್ನಿಗೆ ಜೀವನಾಂಶ ನೀಡಲು ಗಂಡ ನಿರಾಕರಿಸುವಂತಿಲ್ಲ. ಗಂಡನಿಂದ ಜೀವನಾಂಶ ಪಡೆಯಲು ಪತ್ನಿ ಅರ್ಹಳಾಗಿರುತ್ತಾಳೆ' ಎಂದು ಹೇಳಿರುವ ನ್ಯಾಯಪೀಠ, ಪತಿಯ ಅರ್ಜಿಯನ್ನು ವಜಾಗೊಳಿಸಿದೆ.

'ಪತಿ ಹಾಗೂ ಅತ್ತೆ ತನಗೆ ತುಂಬಾ ಕಿರುಕುಳ ನೀಡುತ್ತಿದ್ದರು. ಅತ್ತೆಯ ಒತ್ತಾಯದಿಂದಲೇ ನನ್ನ ಪತಿ ನನ್ನನ್ನು ಮನೆಯಿಂದ ಹೊರಹಾಕಿದ್ದಾರೆ. ಅವರಿಬ್ಬರ ಕಿರುಕುಳ ಸಹಿಸಲಾಗದೆ ನಾನು ನನ್ನ ಗಂಡನ ಮನೆ ತೊರೆದು ಬೇರೊಂದು ಮನೆಯಲ್ಲಿ ವಾಸ ಮಾಡುತ್ತಿದ್ದೇನೆ ಎಂದು ಪತ್ನಿ ಅರ್ಜಿಯಲ್ಲಿ ವಿವರಿಸಿದ್ದಾರೆ. ಹೀಗಿರುವಾಗ, ಇಂತಹ ಪರಿಸ್ಥಿತಿಯಲ್ಲಿ, ಪರಸ್ಪರ ಒಪ್ಪಂದದ ಮೇರೆಗೆ ನನ್ನ ಪತ್ನಿ ಬೇರೊಂದು ಮನೆಯಲ್ಲಿ ವಾಸ ಮಾಡುತ್ತಿದ್ದಾಳೆ ಎಂಬ ಪತಿಯ ವಾದವನ್ನು ಸಮರ್ಥಿಸಲು ಆಗದು' ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?: ಅರ್ಜಿದಾರ ಪತಿ ಮತ್ತು ಪ್ರತಿವಾದಿ ಪತ್ನಿ 2016ರ ನ.1ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. ಕೆಲವೇ ವರ್ಷಗಳಲ್ಲಿ ಅವರ ದಾಂಪತ್ಯದಲ್ಲಿ ಬಿರುಕು ಮೂಡಿತ್ತು. ಕಿರುಕುಳ, ಶಾಂತಿಭಂಗದ ಉದ್ದೇಶ ಹಾಗೂ ಅವಮಾನಪಡಿಸಿದ ಆರೋಪಗಳ ಅಡಿಯಲ್ಲಿ ಪತ್ನಿ ತನ್ನ ಗಂಡನ ವಿರುದ್ಧ 2020ರ ಡಿಸೆಂಬರ್ 7ರಂದು ಪೊಲೀಸರಿಗೆ ದೂರು ನೀಡಿದ್ದರು. ನಂತರ ಜೀವನಾಂಶ ಕೋರಿ ದೊಡ್ಡಬಳ್ಳಾಪುರ ಜೆಎಂಎಫ್‌ಸಿಗೆ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಇದನ್ನು ಪ್ರಶ್ನಿಸಿ ಪತಿ ಹೈಕೋರ್ಟ್ ಮೆಟ್ಟಿಲೇರಿದ್ದರು. 'ಪತ್ನಿ ಸ್ವಇಚ್ಛೆಯಿಂದ ಮನೆ ತೊರೆದು ಹೋಗಿದ್ದಾಳೆ. ಆಕೆಗೆ ಜೀವನಾಂಶ ನೀಡಲು ಸಾಧ್ಯವಿಲ್ಲ' ಎಂದು ಪ್ರತಿಪಾದಿಸಿದ್ದರು.



'ಸ್ವಚ್ಛತೆಯ ಹರಿಕಾರರಿಗೊಂದು ಸಲಾಂ ಕಾರ್ಯಕ್ರಮದ ಅಂಗವಾಗಿ ಪೌರಕಾರ್ಮಿಕರಿಗೆ ವೈಯಕ್ತಿಕ ಸ್ವಚ್ಛತೆ ಕಾಪಾಡಲು ಪೂರಕವಾದ ಕಿಟ್ ಮತ್ತು ಕುಕ್ಕರ್ ವಿತರಿಸಲಾಯಿತು

'ಪೌರಕಾರ್ಮಿಕರಲ್ಲಿ ಸ್ವಚ್ಛತೆ, ಕಾಳಜಿ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಸ್ವಚ್ಛತೆ, ಆರೋಗ್ಯ ಕಾಪಾಡುವಲ್ಲಿ ಮುಂಚೂಣಿಯಲ್ಲಿರುವ ಪೌರ ಕಾರ್ಮಿಕರು ಸ್ವಂತ ಮತ್ತು ಅವರ ಕುಟುಂಬದ ಸ್ವಚ್ಛತೆ ಹಾಗೂ ಆರೋಗ್ಯಕ್ಕೆ ಆದ್ಯತೆ ನೀಡಬೇಕು' ಎಂದು ಮೌಂಟ್ ಕಾರ್ಮೆಲ್ ಕಾಲೇಜಿನ ಡಾ. ಸಿಸ್ಟರ್ ಅರ್ಪಣಾ ಹೇಳಿದರು.

ಕಾಲೇಜಿನ ಸಭಾಂಗಣದಲ್ಲಿ ಮೈಕ್ರೊ ಜೋನ್ ವಿಭಾಗವು ಐಎಸ್‌ಆರ್‌ಸಿ ಜೊತೆ ಸೇರಿ ಆಯೋಜಿಸಿದ್ದ 'ಸ್ವಚ್ಛತೆಯ ಹರಿಕಾರರಿಗೊಂದು ಸಲಾಂ' ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಕಾಲೇಜು ಹಾಗೂ ವಿದ್ಯಾರ್ಥಿಗಳು ಸಮುದಾಯದ ಅಭಿವೃದ್ಧಿಯಲ್ಲಿ ತೋರಬೇಕಾದ ಪಾಲ್ಗೊಳ್ಳುವಿಕೆಯ ಮಹತ್ವವನ್ನು ವಿದ್ಯಾರ್ಥಿನಿಯರಿಗೆ ಹಾಗೂ ಪೌರ ಕಾರ್ಮಿಕರಿಗೆ ವಿವರಿಸಿದರು.

ವಿದ್ಯಾರ್ಥಿಗಳು ಪೌರಕಾರ್ಮಿಕರ ದೈನಂದಿನ ಜೀವನ ಮತ್ತು ಅವರು ಎದುರಿಸುವ ಸವಾಲುಗಳನ್ನು ಕಿರು ನಾಟಕ, ಸಂಗೀತ, ಮೂಕಾಭಿನಯದ ಮೂಲಕ ಪ್ರದರ್ಶಿಸಿದರು. ಸೂಕ್ಷ್ಮಾಣು ಜೀವವಿಜ್ಞಾನದ ವಿದ್ಯಾರ್ಥಿಗಳು ವೈಯಕ್ತಿಕ ಸ್ವಚ್ಛತೆ ಮತ್ತು ಸಾಮೂಹಿಕ ಸ್ವಚ್ಛತೆ ಪಾಲಿಸುವುದರಿಂದ ವೈರಸ್ ಮತ್ತು ಬ್ಯಾಕ್ಟೀರಿಯಾಗಳಿಂದ ಹೇಗೆ ದೂರವಿರಬಹುದು ಎಂಬುದರ ಅರಿವು ಮೂಡಿಸಿದರು. ನಗರವನ್ನು ಸ್ವಚ್ಛವಾಗಿರಿಸಲು ಪೌರಕಾರ್ಮಿಕರು ನೀಡುತ್ತಿರುವ ಸೇವೆಗೆ ವಿದ್ಯಾರ್ಥಿನಿಯರು ನೃತ್ಯ ಹಾಗೂ ಹಾಡಿನ ಮೂಲಕ ಧನ್ಯವಾದ ಅರ್ಪಿಸಿದರು. ಇದೇ ಸಂದರ್ಭದಲ್ಲಿ ಪೌರಕಾರ್ಮಿಕರಿಗೆ ವೈಯಕ್ತಿಕ ಸ್ವಚ್ಛತೆ ಕಾಪಾಡಲು ಪೂರಕವಾದ ಕಿಟ್ ಮತ್ತು ಕುಕ್ಕರ್ ವಿತರಿಸಲಾಯಿತು.

ಉಪ ಪ್ರಾಂಶುಪಾಲರಾದ ಚಾರ್ಮೈನ್ ಜೆರೋಮ್, ಕ್ಯಾಂಪಸ್ ಸಂಯೋಜಕರಾದ ಸಿಸ್ಟರ್ ಸಜಿತ ಮತ್ತು ಲೇಖಾ ಜಾರ್ಜ್, ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗದ ಸರಯೂ ಮೋಹನ್, ಮೈಕ್ರೊ ಜೋನ್ ಸಂಯೋಜಕರಾದ ಅನು ಮರಿಯಮ್ ಕುರಿಯನ್, ಐಎಸ್‌ಆರ್‌ಸಿ ಸಂಯೋಜಕರಾದ ರಜನಿ ಕೋರ, ಮೈಕ್ರೊ ಬಯಾಲಜಿ ಕಾರ್ಯದರ್ಶಿ ಖುತು ಫರ್ನಾಂಡಿಸ್, ಸಹ ಕಾರ್ಯದರ್ಶಿ ರಚನಾ ಬಿ.ಆರ್ ಇದ್ದರು.

ಶಿರಾ: ನೀರಿನಲ್ಲಿ ಮುಳುಗಿ ತಾತ, ಮೊಮ್ಮಗ ಸಾವು

ಶಿರಾ: ತಾಲ್ಲೂಕಿನ ಕುಂಟೆಗೌಡನಹಳ್ಳಿ ಗ್ರಾಮದಲ್ಲಿ ನೀರಿನ ಹೊಂಡದಲ್ಲಿ ಬುಧವಾರ ಸಂಜೆ ಹಸುಗಳಿಗೆ ನೀರು ಕುಡಿಸಲು ಹೋಗಿ ತಾತ ಹಾಗೂ ಮೊಮ್ಮಗ ಕಾಲು ಜಾರಿ ನೀರಿನಲ್ಲಿ ಬಿದ್ದು ಮೃತಪಟ್ಟಿದ್ದಾರೆ.

ಕುಂಟೆಗೌಡನಹಳ್ಳಿ ಗ್ರಾಮದ ಕರಿಯಣ್ಣ (60) ಹಾಗೂ ಮೊಮ್ಮಗ ದಿಲೀಪ್ (12) ಹಸುಗಳಿಗೆ ನೀರಿನ ಹೊಂಡದಲ್ಲಿ ನೀರು ಕುಡಿಸುವ ಸಮಯದಲ್ಲಿ ಕಾಲು ಜಾರಿ ಮೊಮ್ಮಗ ದಿಲೀಪ್ ನೀರಿನಲ್ಲಿ ಬಿದ್ದಿದ್ದಾನೆ. ಮೊಮ್ಮಗನನ್ನು ಕಾಪಾಡಲು ತಾತ ಕರಿಯಣ್ಣ ಸಹ ನೀರಿಗೆ ಧುಮುಕಿದ್ದು ಕೆಸರಿನಲ್ಲಿ ಸಿಲುಕಿ ಇಬ್ಬರು ಮೃತಪಟ್ಟಿದ್ದಾರೆ.

ಕುಟುಂಬದವರ ಆಕ್ರಂದನ ಮುಗಿಲು ಮಟ್ಟಿತ್ತು. ವಿಷಯ ತಿಳಿದು ಶಾಸಕ ಡಾ.ಸಿ.ಎಂ.ರಾಜೇಶ್ ಗೌಡ ಬೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿ ವೈಯಕ್ತಿಕವಾಗಿ ಪರಿಹಾರ ನೀಡಿದರು. ಜೊತೆಯಲ್ಲಿದ್ದ ತಹಶೀಲ್ದಾರ್ ಎಂ.ಮಮತ ಅವರಿಗೆ ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ದೊರಕಿಸಿಕೊಡುವಂತೆ ಸೂಚಿಸಿದರು. ಕಳ್ಳಂಬೆಳ್ಳ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಪರಿಶಿಷ್ಟರ ಕೋಟಾ ದೋಚಿದ್ದ ಅಧಿಕಾರಿಗಳಿಗೆ ರಕ್ಷಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಡಿಜಿಪಿ ಡಾ.ಪಿ. ರವೀಂದ್ರನಾಥ್ ಅವರನ್ನು ವರ್ಗ ಮಾಡುವ ಮೂಲಕ ರಾಜ್ಯ ಸರ್ಕಾರವು ನಕಲಿ ಜಾತಿ ಪ್ರಮಾಣಪತ್ರ ಪಡೆದ ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಿದೆ ಎಂದು ಬಿಎಸ್‌ಪಿ ರಾಜ್ಯ ಉಸ್ತುವಾರಿ ಮಾರಸಂದ್ರ ಮುನಿಯಪ್ಪ ಆರೋಪಿಸಿದ್ದಾರೆ.

ಎಸ್‌ಸಿ ಮತ್ತು ಎಸ್‌ಟಿ ನಕಲಿ ಜಾತಿ ಪ್ರಮಾಣಪತ್ರಗಳ ವಿಚಾರಣೆ ಕುರಿತು ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ್ದ ಡಾ.ಪಿ. ರವೀಂದ್ರನಾಥ್, 'ಒಟ್ಟು 1,097 ವ್ಯಕ್ತಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದು, 165 ಪ್ರಕರಣಗಳಲ್ಲಿ ತಹಶೀಲ್ದಾರ್ ಮತ್ತು ಇತರ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಪತ್ರ ಬರೆಯಲಾಗಿದೆ' ಎಂದಿದ್ದರು. ಬುಧವಾರ ಅವರನ್ನು ವರ್ಗಾವಣೆ ಮಾಡಲಾಗಿತ್ತು.

'ಬಿಜೆಪಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಅವರ ಅಣ್ಣ ದ್ವಾರಕೇಶ್ವರಯ್ಯ ಹಾಗೂ ಮಗಳು ಬೇಡ ಜಂಗಮ ಸಮುದಾಯಕ್ಕೆ ಸೇರಿದವರು ಎಂಬ ಸುಳ್ಳು ಪ್ರಮಾಣಪತ್ರ ಪಡೆದಿರುವುದನ್ನು ರವೀಂದ್ರನಾಥ್ ಪತ್ತೆ ಹಚ್ಚಿದ್ದರು. ಸುಳ್ಳು ಜಾತಿ ಪ್ರಮಾಣಪತ್ರ ನೀಡಿದ್ದ 165 ತಹಶೀಲ್ದಾರ್‌ಗಳ ಹಾಗೂ ಇತರ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಿದ್ದರು. ಆದರೆ ಇದೀಗ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕೋಟಾ ದೋಚಿದ್ದ ಅಧಿಕಾರಿಗಳ ರಕ್ಷಣೆಗೆ ಸರ್ಕಾರ ನಿಂತಿರುವುದು ಖಂಡನೀಯ. ರವೀಂದ್ರನಾಥ್ ವರ್ಗಾವಣೆ ರದ್ದುಪಡಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಪುಲಿಕೇಶಿನಗರ: ನಾಳೆ ಜನಸ್ಪಂದನ



ಅಖಂಡ ಶ್ರೀನಿವಾಸಮೂರ್ತಿ

ಬೆಂಗಳೂರು: ನೀವು ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ನಿವಾಸಿಯೇ? ಜಲ ಮಂಡಳಿ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲವೇ? ನೀವು ಓಡಾಡುವ ರಸ್ತೆಯಲ್ಲಿ ಗುಂಡಿ ಬಿದ್ದಿದೆಯೇ? ಅಥವಾ ನಿತ್ಯ ವಿಹಾರಕ್ಕೆ ಹೋಗುವ ಉದ್ಯಾನ ಪಾಳುಬಿದ್ದಿದೆಯೇ? ಹಾಗಾದರೆ, ಇದೇ 7ರಂದು ಸುಲ್ತಾನ್ ಪಾಳ್ಯದ ಗಣೇಶ ಬ್ಲಾಕ್‌ನ ಒಂದನೇ ಅಡ್ಡರಸ್ತೆಯ ಪಾನಿಪುರಿ ಮೈದಾನಕ್ಕೆ ಬನ್ನಿ.

ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ವತಿಯಿಂದ ಶನಿವಾರ (ಇದೇ 7ರಂದು) 'ಜನಸ್ಪಂದನ' ಕಾರ್ಯಕ್ರಮ ಏರ್ಪಡಿಸಲಾಗಿದೆ.

ಜನಸ್ಪಂದನ ಸಿಟಿಜ಼ನ್ಸ್ ಫಾರ್ ಚೇಂಜ್

ಶಾಸಕ ಅಖಂಡ ಶ್ರೀನಿವಾಸಮೂರ್ತಿ ಹಾಗೂ ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ. ಈ ಕ್ಷೇತ್ರದ ನಿವಾಸಿಗಳು ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಶಾಸಕರ ಹಾಗೂ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬಹುದು.

ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ.

ಸರಣಿ ಅಪಘಾತ: ಸ್ನೇಹಿತರಿಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ರಸ್ತೆಯಲ್ಲಿ ಗುರುವಾರ ಸಂಜೆ ಸರಣಿ ಅಪಘಾತ ಸಂಭವಿಸಿದ್ದು, ಕಾರಿನಲ್ಲಿದ್ದ ಸ್ನೇಹಿತರಿಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ರಾಜರಾಜೇಶ್ವರಿನಗರದ ಸುಮುಖ (22) ಹಾಗೂ ಲೀನಾ ನಾಯ್ಡು (19) ಮೃತರು. 'ಸುಮುಖ, ಡಿಪ್ಲೊಮಾ ವ್ಯಾಸಂಗ ಮಾಡುತ್ತಿದ್ದರು. ಲೀನಾ, ಬಿಬಿಎ ಓದುತ್ತಿದ್ದರು. ಅವರಿಬ್ಬರು ಹೋಂಡಾ ಸಿಟಿ ಕಾರಿನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಕೆಂಗೇರಿ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಸುಮುಖ ಕಾರು ಚಲಾಯಿಸುತ್ತಿದ್ದರು. ನೈಸ್ ರಸ್ತೆಯಲ್ಲಿ ಪಿಇಎಸ್ ಕಾಲೇಜು ಕಡೆಯಿಂದ ಸೋಂಪುರ ಕಡೆ ಕಾರು ಹೊರಟಿತ್ತು. ಮಾರ್ಗಮಧ್ಯೆ ಅತೀ ವೇಗದಿಂದ ಕಾರು ಚಲಾಯಿಸಿದ್ದರಿಂದ ನಿಯಂತ್ರಣ ತಪ್ಪಿತ್ತು.'

'ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಹಾರಿ ಬಿದ್ದಿದ್ದ ಕಾರು, ಏಕಮುಖ ಸಂಚಾರ ಮಾರ್ಗದ ವಿರುದ್ಧ ದಿಕ್ಕಿನಲ್ಲಿ ಸಂಚರಿಸಿತ್ತು. ಎದುರಿಗೆ ಬರುತ್ತಿದ್ದ ಬಸ್ ಹಾಗೂ ಫಾರ್ಚ್ಯೂನರ್ ಕಾರಿಗೂ ಡಿಕ್ಕಿ ಹೊಡೆದಿತ್ತು. ಬಸ್ ಹಾಗೂ ಕಾರು ರಸ್ತೆಯಲ್ಲಿ ಉರುಳಿಬಿದ್ದು, ಜಖಂಗೊಂಡವು' ಎಂದೂ ತಿಳಿಸಿದರು.

'ಬಸ್ ಚಾಲಕ ಹಾಗೂ ನಾಲ್ವರು ಪ್ರಯಾಣಿಕರು ಗಾಯಗೊಂಡಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಚೇತರಿಸಿಕೊಳ್ಳುತ್ತಿದ್ದಾರೆ' ಎಂದೂ ಹೇಳಿದರು.

'ಸುಮುಖ ಅವರ ಅಜಾಗರೂಕತೆ ಚಾಲನೆ, ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಅವರ ವಿರುದ್ಧವೇ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದರು.

ಅಪರಾಧ ಸುದ್ದಿ

ಲಾರಿ ಚಕ್ರ ಹರಿದು ಗಾಯ: ಹಲಸೂರು ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅಪಘಾತ ಸಂಭವಿಸಿದ್ದು, ದ್ವಿಚಕ್ರ ವಾಹನ ಸವಾರ ಪವನ್‌ಕುಮಾರ್ (40) ತೀವ್ರವಾಗಿ ಗಾಯಗೊಂಡಿದ್ದಾರೆ. 'ಉತ್ತರ ಕರ್ನಾಟಕದ ಜಿಲ್ಲೆ ಯೊಂದರ ಪವನ್‌ಕುಮಾರ್, ಕೆಲಸಕ್ಕಾಗಿ ನಗರಕ್ಕೆ ಬಂದಿದ್ದರು. ಭದ್ರತಾ ಸಿಬ್ಬಂದಿ ಆಗಿ ಕೆಲಸ ಆರಂಭಿಸಿದ್ದರು. ರಾತ್ರಿ ವೇಳೆ, ಆಹಾರ ಪೂರೈಕೆ ಆ್ಯಪ್‌ವೊಂದರ ಡೆಲಿವರಿ ಬಾಯ್ ಆಗಿಯೂ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು. 'ಪವನ್ ಅವರ ದ್ವಿಚಕ್ರ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದಿತ್ತು. ವಾಹನದಿಂದ ಬಿದ್ದ ಪವನ್ ಅವರ ಕಾಲಿನ ಮೇಲೆಯೇ ಲಾರಿ ಚಕ್ರ ಹರಿದುಹೋಗಿದೆ. ಗಾಯಗೊಂಡಿರುವ ಪವನ್, ಚಿಕಿತ್ಸೆ ಪಡೆಯುತ್ತಿದ್ದಾರೆ. ಲಾರಿ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ' ಎಂದೂ ತಿಳಿಸಿದರು.



ಸರಣಿ ಅಪಘಾತದಲ್ಲಿ ಜಖಂಗೊಂಡಿರುವ ಹೋಂಡಾ ಸಿಟಿ ಕಾರು

ಗಾಂಧಿನಗರದಲ್ಲಿ ಅನುಮಾನಾಸ್ಪದ ಬ್ಯಾಗ್: ಆತಂಕ

ಬೆಂಗಳೂರು: ಗಾಂಧಿನಗರದ 5ನೇ ಮುಖ್ಯರಸ್ತೆಯ ಪಾದಚಾರಿ ಮಾರ್ಗದಲ್ಲಿ ಅನುಮಾನಾಸ್ಪದ ಬ್ಯಾಗ್ ಕಂಡುಬಂದಿದ್ದರಿಂದ, ಸ್ಥಳದಲ್ಲಿ ಕೆಲ ಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು.

'ತಳ್ಳುಗಾಡಿ ಪಕ್ಕ ಬ್ಯಾಗ್ ಹಾಗೂ ಒಂದು ಜೊತೆ ಬೂಟು ಇತ್ತು. ಗುರುವಾರ ಮಧ್ಯಾಹ್ನ ಬ್ಯಾಗ್ ನೋಡಿ ಆತಂಕಗೊಂಡಿದ್ದ ಸ್ಥಳೀಯರು, ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಪಾದಚಾರಿ ಮಾರ್ಗದಲ್ಲಿದ್ದ ಬ್ಯಾಗ್

'ಬಾಂಬ್ ನಿಷ್ಕ್ರಿಯ ಹಾಗೂ ಶ್ವಾನದಳ ಸಿಬ್ಬಂದಿ ಕರೆಸಿ ತಪಾಸಣೆ ಮಾಡಿಸಲಾಯಿತು. ಬ್ಯಾಗ್ ತೆರೆದಾಗ, ಬಟ್ಟೆಗಳು ಹಾಗೂ ಕೆಲ ದಾಖಲೆಗಳು ಇದ್ದವು. ತನಿಖೆ ನಡೆಸಿದಾಗ, ಈ ಬ್ಯಾಗ್ ಹರ್ಷಿತ್ ಶುಕ್ಲಾ ಅವರದ್ದು ಎಂಬುದು ತಿಳಿಯಿತು' ಎಂದೂ ತಿಳಿಸಿದರು.

'ಕಾನ್ಪುರದ ನರರೋಗ ತಜ್ಞರಾದ ಹರ್ಷಿತ್ ಶುಕ್ಲಾ, ಬುಧವಾರ ನಗರಕ್ಕೆ ಬಂದಿದ್ದರು. ಗಾಂಧಿನಗರದ ಮಹಾಬೋಧಿ ಸೊಸೈಟಿಗೆ ಭೇಟಿ ನೀಡಿದ್ದರು. ವಾಪಸು ಹೋಗುವಾಗ ಪಾದಚಾರಿ ಮಾರ್ಗದಲ್ಲಿ ಬ್ಯಾಗ್ ಹಾಗೂ ಬೂಟು ಮರೆತು ಹೋಗಿದ್ದರು. ಈ ಬಗ್ಗೆ ಕೇಳಿದಾಗ, ನನಗೆ ಮರೆವು ಕಾಯಿಲೆ ಇರುವುದಾಗಿ ಹರ್ಷಿತ್ ಹೇಳಿದರು' ಎಂದೂ ಪೊಲೀಸ್ ಅಧಿಕಾರಿ ವಿವರಿಸಿದರು.

ಫೋರ್ಟಂ ಚಾರ್ಜ್: ಏಕಕಾಲಕ್ಕೆ 50 ಕಾರುಗಳಿಗೆ ಚಾರ್ಜಿಂಗ್ ಸೌಲಭ್ಯ

ಬೆಂಗಳೂರು: ಭಾರತದಲ್ಲಿ ಎಲೆಕ್ಟ್ರಿಕ್ ವಾಹನ (ಇವಿ) ಉತ್ತೇಜಿಸುವ ಉದ್ದೇಶದಿಂದ ಫೋರ್ಟಮ್ ಚಾರ್ಜ್ ಮತ್ತು ಡ್ರೈವ್ ಇಂಡಿಯಾ, ನಗರದ ಫೋರಂ ನೈಬರ್‌ಹುಡ್ ಮಾಲ್‌ನಲ್ಲಿ 50 ಚಾರ್ಜಿಂಗ್ ಪಾಯಿಂಟ್‌ಗಳನ್ನು ಆರಂಭಿಸುವ ಮೂಲಕ ಇವಿ- ಸಾರ್ವಜನಿಕ ಹಬ್ ಆರಂಭಿಸಲು ಮುಂದಾಗಿದೆ.

ಈ ಚಾರ್ಜಿಂಗ್ ಹಬ್ ಎಲ್ಲ ಬಗೆಯ ಕಾರುಗಳ ಜೊತೆಗೆ, ತ್ರಿಚಕ್ರ ಹಾಗೂ ದ್ವಿಚಕ್ರ ವಾಹನಗಳಿಗೆ ಚಾರ್ಜಿಂಗ್ ಸೌಲಭ್ಯ ಒದಗಿಸುತ್ತದೆ. ಈ ಕೇಂದ್ರವು ಏಕಕಾಲದಲ್ಲಿ 50 ಕಾರುಗಳನ್ನು ಚಾರ್ಜ್ ಮಾಡಲು ಅವಕಾಶ ಕಲ್ಪಿಸುತ್ತದೆ.

ಈ ಸೌಲಭ್ಯವು ಇವಿ ಮಾಲೀಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸುತ್ತದೆ. ಇವಿ ಬಳಕೆದಾರರು ಫೋರ್ಟಂ ಚಾರ್ಜ್ ಮತ್ತು ಡ್ರೈವ್ ಇಂಡಿಯಾ ಮೊಬೈಲ್ ಅಪ್ಲಿಕೇಶನ್ ಮೂಲಕ ಇವಿ-ಚಾರ್ಜಿಂಗ್ ಕೇಂದ್ರಗಳನ್ನು ಪತ್ತೆ ಮಾಡಬಹುದು ಮತ್ತು ಅವರ ಇವಿ ಅನ್ನು ಚಾರ್ಜ್ ಮಾಡಲು ಮತ್ತು ಡಿಜಿಟಲ್ ಆಗಿ ಪಾವತಿಸಲು ಅಪ್ಲಿಕೇಶನ್ ಅನ್ನು ಬಳಸಬಹುದು. ಈ ಅಪ್ಲಿಕೇಶನ್ ಆ್ಯಂಡ್ರಾಯ್ಡ್ ಮತ್ತು ಐಒಎಸ್ ಎರಡೂ ಪ್ಲಾಟ್‌ಫಾರ್ಮ್‌ಗಳಲ್ಲಿ ಲಭ್ಯವಿದೆ ಎಂದು ಸಂಸ್ಥೆ ತಿಳಿಸಿದೆ.

ಮಹದೇವಪುರ ಶಾಸಕ ಅರವಿಂದ ಲಿಂಬಾವಳಿ ಹಬ್ ಅನ್ನು ಉದ್ಘಾಟಿಸಿ, 'ನಗರವು 45,000 ಕ್ಕೂ ಹೆಚ್ಚು ಎಲೆಕ್ಟ್ರಿಕ್ ವಾಹನ ಬಳಕೆದಾರರನ್ನು ಹೊಂದಿದೆ. ಇದು ಇವಿಗಳ (ಎಲೆಕ್ಟ್ರಿಕ್ ವಾಹನಗಳು) ಬೇಡಿಕೆ ಹೆಚ್ಚುತ್ತಿದೆ ಎಂಬುದನ್ನು ಸೂಚಿಸುತ್ತದೆ' ಎಂದರು.

ಫೋರ್ಟಮ್ ಚಾರ್ಜ್ ಕಾರ್ಯನಿರ್ವಾಹಕ ನಿರ್ದೇಶಕ ಅವಧೇಶ್ ಝಾ, 'ಈ ವರ್ಷದ ಅಂತ್ಯದ ವೇಳೆಗೆ ನಗರದಲ್ಲಿ 200 ಕ್ಕೂ ಹೆಚ್ಚು ಚಾರ್ಜಿಂಗ್ ಪಾಯಿಂಟ್‌ಗಳನ್ನು ಸ್ಥಾಪಿಸಲು ನಾವು ಯೋಜಿಸಿದ್ದೇವೆ. ಇದು ಸುಸ್ಥಿರ ಸಾರಿಗೆಯತ್ತ ಸಾಗುವ ಪ್ರಯಾಣದಲ್ಲಿ ಬೆಂಗಳೂರಿನ ಪ್ರಮುಖ ಮೈಲಿಗಲ್ಲಾಗಲಿದೆ' ಎಂದರು.

ನಗರದಲ್ಲಿ ಇಂದು

ಶಂಕರ ಜಯಂತಿ ಮತ್ತು ಸುವರ್ಣ ಮಹೋತ್ಸವ ಸಂಗೀತೋತ್ಸವ: ಕೊಳಲು–ಬಿ.ಕೆ. ಅನಂತ ರಾಮ್, ವಯಲಿನ್–ವಿದ್ವಾನ್ ಎಂ.ಡಿ.ಅರ್ಜುನ್, ಮೃದಂಗ–ಪೃಥ್ವಿ ಕೃಷ್ಣ, ಘಟಂ–ಡಿ.ಸಚಿನ್, ಆಯೋಜನೆ–ಶ್ರೀತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ–ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 6.15ರಿಂದ.

ಗಾಯತ್ರಿ ಜಯಂತಿ: ಪೂರ್ಣಾಹುತಿ ಮಧ್ಯಾಹ್ನ 12.15ಕ್ಕೆ, ಸಾನ್ನಿಧ್ಯ–ದಯಾನಂದಪುರಿ ಸ್ವಾಮೀಜಿ, ಆಯೋಜನೆ– ದೇವಾಂಗ ಸಂಘ, ಸ್ಥಳ–ದೇವಾಂಗ ಸಂಘದ ರಜತಮಹೋತ್ಸವ ಭವನ ಕಲ್ಯಾಣ ಮಂಟಪ.

ವಾರ್ಷಿಕ ಸಂಗೀತ ಉತ್ಸವ: ಗಾಯನ–ಶ್ರೀರಂಜಿನಿ ಸಂತಾನ ಗೋಪಾಲನ್, ವಯಲಿನ್–ಎಚ್.ಎಂ.ಸ್ಮಿತಾ, ಮೃದಂಗ–ಕೆ.ಯು.ಜಯಚಂದ್ರ ರಾವ್, ಘಟಂ–ಜಿ.ಎಸ್.ರಾಮಾನುಜನ್, ಆಯೋಜನೆ–ಶ್ರೀರಾಮ ಲಲಿತ ಕಲಾ ಮಂದಿರ, ಸ್ಥಳ– ಬೆಂಗಳೂರು ಗಾಯನ ಸಮಾಜ ಸಭಾಂಗಣ, ಸಂಜೆ 5.30.

ಸನ್ಯಾಸಿ ದೀಕ್ಷೆ: ಮಾಜಿ ಸಚಿವ ಬಿ.ಜೆ. ಪುಟ್ಟಸ್ವಾಮಿ ಅವರಿಗೆ, ಸ್ಥಳ–ರಾಜರಾಜೇಶ್ವರಿನಗರದ ಕೈಲಾಸ ಆಶ್ರಮ ಮಠ, ಬೆಳಿಗ್ಗೆ 9.

ಜೀರ್ಣೋದ್ಧಾರ, ಅಷ್ಟಬಂಧನ, ಕುಂಭಾಭಿಷೇಕ: ಮೂಲಮೂರ್ತಿಗಳ ರಕ್ಷಾಬಂಧನ, ನಾಡಿ ಸಂಧಾನ, ತತ್ವಾರ್ಚನೆ, ಸ್ಪರ್ಶಾಹುತಿ, ದ್ರವ್ಯಾಹುತಿ, ಮಹಾಪೂರ್ಣಾಹುತಿ, ಮಹಾಮಂಗಳಾರತಿ, ಯಾತ್ರಾದಾನ, ವಿಮಾನಗೋಪುರ ಹಾಗೂ ರಾಜಗೋಪುರ ಕುಂಭಾಭಿಷೇಕ, ಮೂಲಮೂರ್ತಿಗೆ ಕುಂಭಾಭಿಷೇಕ, ಸಾನ್ನಿಧ್ಯ: ಓಂಕಾರ ಆಶ್ರಮದ ಮಧುಸೂಧನಾನಂದ ಪುರಿ, ಸ್ಥಳ–ತಿಲಕನಗರದ ಮಹಾಶಕ್ತಿ ಮಾರಿ ಅಮ್ಮನ ದೇವಸ್ಥಾನ, ಬೆಳಿಗ್ಗೆ 8ರಿಂದ.

ಜೋಗ ಜಲಪಾತ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆ

ಪರಿಸರ ಅನುಮೋದನೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಗ ಜಲಪಾತ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಿರುವ ಜೋಗ ನಿರ್ವಹಣಾ ಪ್ರಾಧಿಕಾರವು ಪರಿಸರ ಅನುಮೋದನೆ ಜೊತೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯಿಂದ ವನ್ಯಜೀವಿ ಅನುಮೋದನೆಯನ್ನೂ ಪಡೆಯಬೇಕು ಎಂದು ಅರಣ್ಯ ಇಲಾಖೆ ನಿರ್ದೇಶಿಸಿದೆ.

ಮುಖ್ಯಾಂಶಗಳು

- ಅರಣ್ಯಭೂಮಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ
- ₹165 ಕೋಟಿ ಮೊತ್ತದ ಯೋಜನೆ
- ಪಂಚತಾರಾ ಹೋಟೆಲ್‌ಗೆ ಇಲಾಖೆ ಸಮ್ಮತಿ

ಅರಣ್ಯ ಭೂಮಿಯಲ್ಲಿ ಪಂಚತಾರಾ ಹೋಟೆಲ್ ಕಟ್ಟಲು ಸಲ್ಲಿಸಿರುವ ಪ್ರಸ್ತಾವನೆಗಷ್ಟೇ ಅಲ್ಲದೆ ಕಂದಾಯ ಭೂಮಿಯಲ್ಲಿ ಕಟ್ಟಲು ಉದ್ದೇಶಿಸಿರುವ ಇತರೆ ಯೋಜನೆಗಳಿಗೂ ಈ ಶಿಫಾರಸು ಅನ್ವಯವಾಗಲಿದೆ. ಈ ಶಿಫಾರಸನ್ನು ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತ ಗಿರಿಧರ ಕುಲಕರ್ಣಿ ಸಲ್ಲಿಸಿರುವ ಆಕ್ಷೇಪಣೆಗಳಿಗೆ ಉತ್ತರ ಸಲ್ಲಿಸುವ ಸಮಯದಲ್ಲಿ ಮಾಡಲಾಗಿದೆ.

ಜೋಗ ಅಭಿವೃದ್ಧಿ ಯೋಜನೆಯ ಭಾಗವಾಗಿ ಸಾಗರ ತಾಲ್ಲೂಕಿನ ನಾಡವಾಡ ತಲಕಳಲೆ ಗ್ರಾಮದ ಸರ್ವೆ ಸಂಖ್ಯೆ 151ರಲ್ಲಿರುವ ಅರಣ್ಯ ಪ್ರದೇಶದಲ್ಲಿ ಪಂಚತಾರಾ ಹೋಟೆಲ್ ನಿರ್ಮಿಸುವ ಯೋಜನೆಗಾಗಿ 0.8536 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಳಸುವ ಕುರಿತು ಅರಣ್ಯ ಇಲಾಖೆಗೆ ಶಿವಮೊಗ್ಗ ಜಿಲ್ಲಾಧಿಕಾರಿಯವರು ಪ್ರಸ್ತಾವನೆ ಸಲ್ಲಿಸಿದ್ದರು. ಈ ಪ್ರಸ್ತಾವನೆಯನ್ನು ಅನುಮೋದಿಸಿ ಕೇಂದ್ರ ಸರ್ಕಾರದಿಂದ ಅರಣ್ಯ (ಸಂರಕ್ಷಣಾ) ಕಾಯ್ದೆ 1980ರ ಅಡಿ ಮೊದಲನೇ ಹಂತದ ಅನುಮೋದನೆ ಪಡೆಯಲು ಅರಣ್ಯ ಇಲಾಖೆಯು 2021ರ ಜುಲೈ 14ರಂದು ಶಿಫಾರಸು ಮಾಡಿತ್ತು.

ಈ ಪ್ರದೇಶವು ಸಿಂಗಳಿಕ ಅಭಯಾರಣ್ಯದ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಬರುತ್ತಿರುವುರಿಂದ ಪ್ರವಾಸೋದ್ಯಮ ಚಟುವಟಿಕೆಗಳನ್ನು ಕೈಗೊಳ್ಳಲು ಅನುಮತಿ ನೀಡಬಾರದು ಎಂದು ಗಿರಿಧರ ಕುಲಕರ್ಣಿ ಅವರು ಜುಲೈನಲ್ಲಿ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಪರಿಸರ ಸಚಿವಾಲಯಕ್ಕೆ ಪತ್ರ ಬರೆದಿದ್ದರು.

> **ಹೋಟೆಲ್ ಕಟ್ಟಲು ಶಿಫಾರಸು ಮಾಡಿರುವುದು ಸಮರ್ಥನೀಯವಲ್ಲ. ಜೋಗ ನಿರ್ವಹಣಾ ಪ್ರಾಧಿಕಾರ ಸಲ್ಲಿಸಿದ್ದ ಇಂತಹುದೇ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರವು 2014ರ ಡಿಸೆಂಬರ್‌ನಲ್ಲಿ ತಿರಸ್ಕರಿಸಿತ್ತು**
>
> **ಗಿರಿಧರ ಕುಲಕರ್ಣಿ**
> ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತ

ಅರಣ್ಯೇತರ ಭೂಮಿಯಲ್ಲೂ ವಿವಿಧ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರವು ₹165 ಕೋಟಿಯ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಇದಕ್ಕೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯಿಂದ ವನ್ಯಜೀವಿ ಅನುಮೋದನೆ ಪಡೆಯುವುದು ಕಡ್ಡಾಯ ಎಂದೂ ಅವರು ಗಮನ ಸೆಳೆದಿದ್ದರು.

ಈ ಬಗ್ಗೆ ನಿಯಮಾವಳಿಗಳ ಅಡಿಯಲ್ಲಿ ಕ್ರಮ ಕೈಗೊಳ್ಳುವಂತೆ ಕೇಂದ್ರ ಪರಿಸರ ಸಚಿವಾಲಯವು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಆಗಸ್ಟ್ 9ರಂದು ಪತ್ರ ಬರೆದಿತ್ತು. ಕೇಂದ್ರ ಸರ್ಕಾರದ ಪತ್ರದ ಮೇರೆಗೆ ಸೆಪ್ಟೆಂಬರ್‌ನಲ್ಲಿ ಅರಣ್ಯ ಇಲಾಖೆಗೆ ಪ್ರಸ್ತಾವನೆಯನ್ನು ವಾಪಸ್ ಕಳುಹಿಸಿದ್ದ ರಾಜ್ಯ ಸರ್ಕಾರವು ವಿಸ್ತೃತ ವರದಿ ಸಲ್ಲಿಸುವಂತೆ ಸೂಚಿಸಿತ್ತು. ಈ ಕುರಿತು ರಾಜ್ಯ ಸರ್ಕಾರಕ್ಕೆ ಮಾರ್ಚ್‌ನಲ್ಲಿ ವರದಿ ಸಲ್ಲಿಸಿರುವ ಅರಣ್ಯ ಇಲಾಖೆಯು ಅರಣ್ಯೇತರ ಭೂಮಿಯಲ್ಲೂ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಪರಿಸರ ಅನುಮೋದನೆ ಜೊತೆಗೆ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯಿಂದ ವನ್ಯಜೀವಿ ಅನುಮೋದನೆಯನ್ನೂ ಪಡೆಯುವುದು ಅವಶ್ಯ ಎಂದು ಹೇಳಿದೆ. ಆದರೆ, ಇದೇ ವರದಿಯಲ್ಲಿ ಪಂಚತಾರಾ ಹೋಟೆಲ್ ಕಟ್ಟಲು ಶಿಫಾರಸು ಮಾಡಿದೆ.

ಚಿತ್ರಾವಳಿ



ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕವು ಗುರುವಾರ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 'ಸಂಸ್ಥಾಪನಾ ದಿನಚರಣೆ' ಕಾರ್ಯಕ್ರಮದಲ್ಲಿ ಪತ್ರಕರ್ತ ರಾಮಣ್ಣ ಎಚ್.ಕೋಡಿಹೊಸಹಳ್ಳಿ ಅವರನ್ನು ನಗರ ಘಟಕದ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ಪ್ರೊ.ಜಿ.ಅಶ್ವತ್ಥನಾರಾಯಣ ಮತ್ತು ಉದಯಭಾನು ಕಲಾಸಂಘದ ಗೌರವ ಕಾರ್ಯದರ್ಶಿ ಎಂ.ನರಸಿಂಹ ಸನ್ಮಾನಿಸಿದರು



ಕರ್ನಾಟಕ ವಿಕಾಸ ರಂಗವು ಬೆಂಗಳೂರಿನ ಬಿಎಂಶ್ರೀ ಪ್ರತಿಷ್ಠಾನದ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜರಗನಹಳ್ಳಿ ಶಿವಶಂಕರ್ ಹನಿಗವನ ಸಾಹಿತ್ಯ ಪ್ರಶಸ್ತಿಯನ್ನು ಮಕರಂದ ಮನೋಜ್ ಅವರಿಗೆ ಕಸಾಪ ಮಾಜಿ ಅಧ್ಯಕ್ಷ ಮನು ಬಳಿಗಾರ್ ಪ್ರದಾನ ಮಾಡಿದರು. ಚಂದ್ರಶೇಖರ ಉಷಾಲ, ಶುಭದಾ ಪುರುಷೋತ್ತಮರಾಜು, ಸಾಹಿತಿ ರಾ.ನಂ.ಚಂದ್ರಶೇಖರ, ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಸಿ.ನಂಜುಂಡಯ್ಯ, ವಿಷ್ಣು ಸೇನಾ ಸಮಿತಿ ಅಧ್ಯಕ್ಷ ವೀರಕಪುತ್ರ ಶ್ರೀನಿವಾಸ್, ವಿಕಾಸ ರಂಗದ ಅಧ್ಯಕ್ಷ ವ.ಚ.ಚನ್ನೇಗೌಡ ಇದ್ದಾರೆ



ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರನ್ನು ವೂಡೇ ಪಿ.ಕೃಷ್ಣ ಸನ್ಮಾನಿಸಿದರು. ಸಾಹಿತಿ ಡಾ.ಕಮಲಾ ಹಂಪನಾ, ಪ್ರೊ.ಸಿದ್ದಣ್ಣ ಉತ್ನಾಳ್, ಪ್ರೊ. ರಾಜಕುಮಾರ್ ಬಡಿಗೇರ, ಡಾ.ಅಣ್ಣಮ್ಮ ಹಾಗೂ ಇತರರು ಇದ್ದಾರೆ



ಎಂ.ಪಿ. ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಹಾಗೂ ಕೆ.ಎನ್ ಸುಬ್ರಮಣ್ಯ ಫೌಂಡೇಶನ್ ಆಯೋಜಿಸಿದ ದಕ್ಷಿಣ ಅರ್ಥಶಾಸ್ತ್ರಜ್ಞರ ವಾರ್ಷಿಕ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಬಿಎಸ್‌ಇ ವಿಶ್ವವಿದ್ಯಾಲಯ ಕುಲಪತಿ ಡಾ. ಎನ್‌ಆರ್ ಭಾನುಮೂರ್ತಿ ಅವರು ವಾರ್ಷಿಕ ಸಂಚಿಕೆ ಬಿಡುಗಡೆ ಮಾಡಿದರು. ಡಾ. ಎನ್‌ಎಸ್ ವಿಶ್ವನಾಥ್, ಕೃಷಿ ಬೆಲೆ ಆಯೋಗದ ಅಧ್ಯಕ್ಷ ಹನುಮನ ಗೌಡ ಬೆಳಗುರ್ಕಿ, ಸುಶೀಲ ಸುಬ್ರಮಣ್ಯ ಹಾಗೂ ಡಾ. ವಿಜಯಲಕ್ಷ್ಮಿ ಇದ್ದರು —ಪ್ರಜಾವಾಣಿ ಚಿತ್ರಗಳು

ಸೌಹಾರ್ದ ಸಮಾವೇಶ: ಧರ್ಮಗುರುಗಳು–ರಾಜಕಾರಣಿಗಳಿಗೆ ಸಾಣೇಹಳ್ಳಿ ಶ್ರೀ ಚಾಟಿ

'ಹೊತ್ತು ಬಂದಂತೆ ಕೊಡೆ ಹಿಡಿಯುತ್ತಿದ್ದಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊನ್ನಿನ ಹೊಗೆ ಹಾಯಬೇಕಾದ ಜನಮಾನಸದ ಹೃದಯಗಳಲ್ಲಿ ಇವತ್ತು ಅವಿವೇಕವೇ ವಿಜೃಂಭಿಸುತ್ತಿದೆ. ಧರ್ಮ ರಾಜಕೀಯದ ಹೆಸರಿನಲ್ಲಿ ಹಗಲು ದರೋಡೆ ನಡೆಯುತ್ತಿದೆ. ಧರ್ಮ–ರಾಜಕೀಯದ ದುರಂಧರರರು ಹೊತ್ತು ಬಂದಂತೆ ಕೊಡೆ ಹಿಡಿಯುತ್ತಿದ್ದಾರೆ' ಎಂದು ಸಿರಿಗೆರೆ ತರಳಬಾಳು ಬೃಹನ್ಮಠದ ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ವಿಷಾದಿಸಿದರು.

ರಾಜ್ಯದ 20ಕ್ಕೂ ಹೆಚ್ಚು ವಿವಿಧ ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಗುರುವಾರ ನಡೆದ, ಧರ್ಮ ಗುರುಗಳು ಮತ್ತು ಸಂವಿಧಾನ ತಜ್ಞರ ಸಂದೇಶ ಸಾರುವ 'ಸೌಹಾರ್ದ ಸಂಸ್ಕೃತಿ ಸಮಾವೇಶ'ದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಎಲ್ಲ ಧರ್ಮಗಳಲ್ಲೂ ಸಣ್ಣ ಜನ ಇರುತ್ತಾರೆ. ಇಂತಹವರನ್ನು ಪ್ರತಿಭಟಿಸುವ ಮನೋಸ್ಥೈರ್ಯ ನಮಗೆ ಬೇಕಿದೆ. ಅಶಾಂತಿಯನ್ನು ನಮ್ಮ ಮನಸ್ಸಿನೊಳಗೆ ಯಾರು ನುಗ್ಗಿಸಿದರು, ಹೇಗೆ ನುಗ್ಗಿಸಿದರು, ಎಂಬುದನ್ನು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ತಲೆಯಲ್ಲಿ ಕೇವಲ ಗೊಬ್ಬರ, ಕಸ ತುಂಬಿಕೊಂಡು ಅಜ್ಞಾನಿಗಳಾಗಬಾರದು' ಎಂದು ಎಚ್ಚರಿಸಿದರು.

'ಸಂವಿಧಾನ ನಮ್ಮ ಧರ್ಮವಾಗಬೇಕು. ಸರಿದಾರಿಯಲ್ಲಿ ಸಾಗಿ ಎಲ್ಲರೂ ಬಯಸುವ ದೇಶ ಕಟ್ಟಬೇಕು.ವ್ಯಕ್ತಿಗತ ಶುದ್ಧಿಯಿಂದ ಲೋಕಶುದ್ಧಿಯ ಕಡೆಗೆ ಸಾಗಬೇಕು. ಇದನ್ನು ಎಲ್ಲ ಧರ್ಮದವರೂ ಅರಿಯಬೇಕು' ಎಂದು ಕಿವಿಮಾತು ಹೇಳಿದರು.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮಾತನಾಡಿ, 'ಸಂವಿಧಾನದ ಹಕ್ಕುಗಳು ಕೋರ್ಟ್‌ನಲ್ಲಿರಬೇಕು. ಶಾಂತಿ ಸೌಹಾರ್ದತೆ ಸಾರುವ ದಿಸೆಯಲ್ಲಿ ಮಾನವ ಹಕ್ಕುಗಳು ಸಮಾಜದಲ್ಲಿರಬೇಕು' ಎಂದು ಪ್ರತಿಪಾದಿಸಿದರು.

ಅಮೀರ್ ಎ ಷರಿಯತ್‌ನ ಮೌಲಾನ ಸಗೀರ್ ಅಹಮದ್ ಖಾನ್ ರಷಾದಿ, 'ಅಧರ್ಮವನ್ನು ಯಾವುದೇ ಧರ್ಮ ಇಷ್ಟಪಡುವುದಿಲ್ಲ. ಇಂದು ನಮ್ಮನ್ನಾವರಿಸಿರುವ ಆತಂಕಗಳು ಬೇಗ ದೂರವಾಗಿ ಎಲ್ಲೆಡೆ ಶಾಂತಿ ನೆಲೆಗೊಳ್ಳಲಿ' ಎಂದು ಆಶಿಸಿದರು.

ಆಶಯ ನುಡಿಗಳನ್ನಾಡಿದ ಸಾಹಿತಿ ಬರಗೂರು ರಾಮಚಂದ್ರಪ್ಪ, ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಧರ್ಮ ದ್ವೇಷದ ಘಟನೆಗಳು ಕರ್ನಾಟಕ ಈತನಕ ಕಟ್ಟಿಕೊಂಡು ಬಂದಿರುವ ಸೌಹಾರ್ದ ಪರಂಪರೆಗೆ ಧಕ್ಕೆ ಉಂಟು ಮಾಡುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಕೂಡಲಿಶೃಂಗೇರಿಮಠದವಿದ್ಯಾಧರ ವಿದ್ಯಾರಣ್ಯ ಭಾರತೀ ಸ್ವಾಮೀಜಿ, ಬೆಂಗಳೂರಿನ ಆರ್ಚ್ ಬಿಷಪ್ ರೆ.ಫಾ. ಡಾ.ಪೀಟರ್ ಮಚಾದೊ, ಅಲ್ ಹಿದಾಯಿ ಮಸೀದಿಯ ಮೌಲಾನ ಶಾಹುಲ್ ಹಮೀದ್ ಮೌಲ್ವಿ, ರಾಜನ ಹಳ್ಳಿ ಮಹರ್ಷಿ ವಾಲ್ಮೀಕಿ ಗುರು ಪೀಠದ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಕಾಗಿನೆಲೆಗುರುಪೀಠದಹೊಸ ದುರ್ಗ ಶಾಖೆಯ ಈಶ್ವರಾನಂದಪುರಿ ಸ್ವಾಮೀಜಿ, ಹಿರಿಯೂರಿನ ಆದಿಜಾಂಬವ ಪೀಠದ ಷಡಕ್ಷರಿ ಮುನಿ ಸ್ವಾಮೀಜಿ, ಹೊಸದುರ್ಗ ಕುಂಚಟಿಗ ಪೀಠದ ಶಾಂತ ವೀರ ಸ್ವಾಮೀಜಿ ಮಾತನಾಡಿದರು.

ಸಂವಿಧಾನದ ಆಶಯಗಳನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ವಿವರಿಸಿದರು. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತ ಬಿ.ಎಂ. ಹನೀಫ್ ಕಾರ್ಯಕ್ರಮ ನಿರೂಪಿಸಿದರು.



ಬೆಂಗಳೂರಿನ ಡಾ.ಅಂಬೇಡ್ಕರ್ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸೌಹಾರ್ದ ಸಂಸ್ಕೃತಿ ಸಮಾವೇಶವನ್ನು ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಮಹಾಮಠದ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ,ಹಿರಿಯೂರು ಆದಿಜಾಂಬವ ಮಹಾಸಂಸ್ಥಾನ ಮಠದ ಷಡಕ್ಷರಿ ಮುನಿ ಸ್ವಾಮೀಜಿ, ಬೆಂಗಳೂರು ಪ್ರಾಂತ್ಯದ ಆರ್ಚ್ ಬಿಷಪ್ ರೆ.ಫಾ. ಪೀಟರ್ ಮಚಾದೊ, ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್, ಸಾಹಿತಿ ಬರಗೂರು ರಾಮಚಂದ್ರಪ್ಪ, ನ್ಯಾಯಮೂರ್ತಿ ವಿ.ಗೋಪಾಲಗೌಡ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನಾ ಶಾಫಿ ಸಆದಿ, ಸಾಣೇಹಳ್ಳಿಯ ಸಿರಿಗೆರೆ ತರಳಬಾಳು ಬೃಹನ್ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಚಿತ್ರದುರ್ಗ ಛಲವಾದಿ ಜಗದ್ಗುರು ಪೀಠದ ಬಸವನಾಗಿದೇವ ಶರಣರು, ಹೊಸದುರ್ಗ ಕಾಗಿನೆಲೆ ಕನಕ ಗುರುಪೀಠ ಶಾಖೆಯ ಈಶ್ವರಾನಂದಪುರಿ ಸ್ವಾಮೀಜಿ ಹಾಗೂ ಅಲ್ ಹಿದಾಯ ಮಸ್ಜಿದ್ ನ ಮೌಲಾನಾ ಶಾಹುಲ್ ಹಮೀದ್ ಮೌಲ್ವಿ ಇದ್ದರು –ಪ್ರಜಾವಾಣಿ ಚಿತ್ರ

ಧೂಲ್ ಚಹರೆ ಪರ್ ಥಿ...!

ಪ್ರಸಿದ್ಧ ಉರ್ದು ಕವಿ ಮಿರ್ಜಾ ಗಾಲಿಬ್‌ನ ಜನಪ್ರಿಯ ಪದ್ಯದ, 'ಧೂಲ್ ಚಹರೇ ಪರ್ ಥಿ ಔರ್ ಹಮ್ ಆಯಿನಾ ಸಾಫ್ ಕರತೇ ರಹೆ... (ದೂಳು ಮಾರಿಯ ಮೇಲಿತ್ತು, ಆದರೆ ನಾವು ಕನ್ನಡಿಯನ್ನು ಒರೆಸುತ್ತಾ ಇದ್ದೆವು)' ಸಾಲುಗಳನ್ನು ಉದ್ಧರಿಸಿದ ಬೇಲಿಮಠದ ಶಿವರುದ್ರ ಸ್ವಾಮೀಜಿ, ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗರ ಪದ್ಯಗಳ ಮುಖಾಂತರ ಮಾರ್ಮಿಕವಾಗಿ ವಿಶ್ಲೇಷಿಸಿದರು.

'ಯಾವುದೀ ಪ್ರವಾಹವು' ಕವನದ ಸಾಲು, 'ಎದೆ ಎದೆಗಳ ನಡುವೆ ಇರುವ, ಸೇತುವೆಗಳು ಮುರಿದಿವೆ, ಭಯ-ಸಂಶಯ-ತಲ್ಲಣಗಳ ಕಂದರಗಳು ತೆರೆದಿವೆ' ಎಂಬುದನ್ನು ಉಲ್ಲೇಖಿಸಿದ ಅವರು, 'ನಾವು ನಕಾರಾತ್ಮಕ ಧೋರಣೆಯಿಂದ ಹೊರಬರಬೇಕು. ವಿಶ್ವಾಸದ ಹಾದಿಯಲ್ಲಿ ದೋಷಗಳನ್ನು ಬಿಟ್ಟು ಸಾಗಬೇಕು. ಮನದ ದೌರ್ಬಲ್ಯ ಮತ್ತು ಬುದ್ಧಿಯ ದೌರ್ಜನ್ಯವನ್ನು ಮೆಟ್ಟಿ, ಎರಡಳಿದು ಕೂಡುವುದೇ ಸಮರಸದ ಜೀವನ ಎಂಬಂತಾಗಬೇಕು' ಎಂದು ಆಶಿಸಿದರು.

'ವಿಧಾನಸೌಧದ ಬಲ್ಬ್ ಬದಲಿಸಬೇಕು'

ವಿಧಾನ ಸೌಧದಲ್ಲಿರುವ ಬಲ್ಬ್‌ಗಳು (ಜನಪ್ರತಿನಿಧಿಗಳು) ಸರಿಯಿಲ್ಲ. ಕೆಲವು ಪಕ ಪಕ ಅಂತಿದ್ದರೆ, ಇನ್ನೂ ಕೆಲವು ಉರಿಯುತ್ತಲೇ ಇಲ್ಲ. ಹಾಗಾಗಿ ವಿದ್ಯುಚ್ಛಕ್ತಿ ಹಾಯಿಸುವ ಮತದಾರ ಇವುಗಳನ್ನು ಬದಲಾಯಿಸಬೇಕಿದೆ ಎಂದು ಚಿತ್ರದುರ್ಗದ ಛಲವಾದಿ ಪೀಠಾಧ್ಯಕ್ಷ ಬಸವ ನಾಗಿದೇವ ಸ್ವಾಮೀಜಿ ಕುಟುಕಿದರು.

'ನಮ್ಮ ಜನಪ್ರತಿನಿಧಿಗಳ ಆಯ್ಕೆಯಲ್ಲಿ ದೋಷವೇ ಇವತ್ತಿನ ಇಷ್ಟೆಲ್ಲಾ ಅಶಾಂತಿಗಳಿಗೆ ಪ್ರಮುಖ ಕಾರಣವಾಗಿದೆ' ಎಂದ ಅವರು, 'ಇಂದು ಕೆಲವು ಮಠಾಧೀಶರು ಮತಬ್ಯಾಂಕ್‌ಗಳ ಶಾಖೆಗಳಂತಾಗಿದ್ದಾರೆ. ರಾಜಕಾರಣಿಗಳು ವಿಧಾನಸೌಧದ ಪಶ್ಚಿಮ ದ್ವಾರದಲ್ಲೇ ವ್ಯವಹರಿಸುವ ಮೂಲಕ ವಾಸ್ತವದಲ್ಲೂ ಹಿಂಬಾಗಿಲ ವ್ಯವಹಾರಗಳಲ್ಲಿ ಮುಳುಗಿದ್ದಾರೆ. ಈ ವ್ಯವಸ್ಥೆ ಸರಿಯಾಗಲು ಮತದಾರರು ಆಮಿಷಗಳಿಂದ ದೂರಾಗಿ ಉತ್ತಮರನ್ನು ಆಯ್ಕೆ ಮಾಡುವುದೇ ಸರಿಯಾದ ಮಾರ್ಗ' ಎಂದರು.

ಸುದ್ದಿ 2 ನಿಮಿಷ

'70 ಸಂಚಾರಿ ಪಶು ಚಿಕಿತ್ಸಾಲಯ ಲೋಕಾರ್ಪಣೆ ನಾಳೆ'

ಬೆಂಗಳೂರು: 'ರಾಜ್ಯದಲ್ಲಿ ಜಾನುವಾರುಗಳ ಆರೋಗ್ಯ ಸೇವೆಗಾಗಿ 275 ಸಂಚಾರಿ ಪಶು ಚಿಕಿತ್ಸಾಲಯ (ಆಂಬುಲೆನ್ಸ್) ಒದಗಿಸಲು ಉದ್ದೇಶಿಸಲಾಗಿದ್ದು, ಈ ಪೈಕಿ 70 ಆಂಬುಲೆನ್ಸ್‌ಗಳ ಲೋಕಾರ್ಪಣೆ ಇದೇ 7ರಂದು ನಡೆಯಲಿದೆ' ಎಂದು ಪಶು ಸಂಗೋಪನೆ ಸಚಿವ ಪ್ರಭು ಚವ್ಹಾಣ್ ತಿಳಿಸಿದರು.

ವಿಧಾನಸೌಧದ ಆವರಣದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಕೇಂದ್ರ ಪಶು ಸಂಗೋಪನೆ ಸಚಿವ ಪುರುಷೋತ್ತಮ್ ರೂಪಾಲ್ ಭಾಗವಹಿಸಲಿದ್ದಾರೆ ಎಂದರು. 'ಸಂಚಾರಿ ಪಶು ಚಿಕಿತ್ಸಾ ವಾಹನಗಳ ನಿಗಾ ವ್ಯವಸ್ಥೆಗಾಗಿ ಪ್ರತ್ಯೇಕ ಸಹಾಯವಾಣಿ ಸ್ಥಾಪಿಸಲಾಗಿದೆ. ಟೋಲ್ ಫ್ರೀ ಸಂಖ್ಯೆಗೆ 1962ಕ್ಕೆ ಕರೆ ಮಾಡಿದ ತಕ್ಷಣ ಮನೆ ಬಾಗಿಲಿಗೆ ತೆರಳಿ ಚಿಕಿತ್ಸೆ ನೀಡಲಾಗುವುದು' ಎಂದರು.

'ರಾಜ್ಯದಲ್ಲಿ ದನ, ಎಮ್ಮೆ, ಕುರಿ, ಮೇಕೆ ಮತ್ತು ಹಂದಿ ಸೇರಿದಂತೆ 2.90 ಕೋಟಿ ಜಾನುವಾರುಗಳಿವೆ. ಪ್ರತಿ ಒಂದು ಲಕ್ಷ ಜಾನುವಾರುಗಳಿಗೆ ಒಂದು ಸಂಚಾರಿ ಪಶು ಚಿಕಿತ್ಸಾಲಯ ಒದಗಿಸಲಾಗುತ್ತಿದೆ. ಜಾನುವಾರುಗಳ ಸಂರಕ್ಷಣೆ, ಪಾಲನೆ ಮತ್ತು ಆರೋಗ್ಯ ರಕ್ಷಣೆಗಾಗಿ ಸುಸಜ್ಜಿತ ಶಸ್ತ್ರ ಚಿಕಿತ್ಸಾ ವಾಹನಗಳ ಮೂಲಕ ಪಶು ಸಂಜೀವಿನಿ ಯೋಜನೆ ಜಾರಿಗೆ ತರಲಾಗಿತ್ತು. ಸಂಚಾರಿ ಪಶು ಚಿಕಿತ್ಸಾ ವಾಹನ ಅದರ ಮುಂದುವರಿದ ಭಾಗ' ಎಂದರು.



ಹೆಬ್ಬಗೋಡಿಯಲ್ಲಿ ಗಿರಿಯಾಸ್ 105ನೇ ಮಳಿಗೆ

ಬೆಂಗಳೂರು: ಎಲೆಕ್ಟ್ರಾನಿಕ್ ಹಾಗೂ ಗೃಹೋಪಯೋಗಿ ಉಪಕರಣಗಳ ಮಾರಾಟ ಕಂಪನಿ ಗಿರಿಯಾಸ್, ನಗರದ ಹೆಬ್ಬಗೋಡಿಯಲ್ಲಿ ಶನಿವಾರ ಬೃಹತ್ ಮಳಿಗೆಯನ್ನು ಆರಂಭಿಸಲಿದೆ. ಇದು ಕಂಪನಿಯ 105ನೆಯ ಮಳಿಗೆ.

ಮಳಿಗೆ ಉದ್ಘಾಟನೆ ಆಗುತ್ತಿರುವ ಹಿನ್ನೆಲೆಯಲ್ಲಿ ಕಂಪನಿಯು ಈ ಮಳಿಗೆಯಲ್ಲಿ ಕ್ಯಾಷ್‌ಬ್ಯಾಕ್, ಖಚಿತ ಉಡುಗೊರೆಗಳು, ಇಷ್ಟದ ವಸ್ತುಗಳ ಖರೀದಿಗೆ ಹಣಕಾಸಿನ ಸೇವೆಗಳ ಕೊಡುಗೆಗಳನ್ನು ನೀಡಲಿದೆ ಎಂದು ಪ್ರಕಟಣೆ ತಿಳಿಸಿದೆ. ಈ ಕೊಡುಗೆಗಳು ಮೇ 9ರವರೆಗೆ ಚಾಲ್ತಿಯಲ್ಲಿ ಇರಲಿವೆ.

ಈ ಅವಧಿಯಲ್ಲಿ ಕ್ರೆಡಿಟ್ ಕಾರ್ಡ್ ಶುಲ್ಕ ಮನ್ನಾ ಮಾಡಲಾಗುತ್ತದೆ. ಸಂಪರ್ಕ ಸಂಖ್ಯೆ: 90350 50023.

ನಾಡಪ್ರಭು ಕೆಂಪೇಗೌಡ ಬಡಾವಣೆ

ಮೂಲಸೌಕರ್ಯ ಒದಗಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿಪಡಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿ ಆರು ವರ್ಷಗಳು ಕಳೆದ ಬಳಿಕವೂ ಪೂರ್ಣ ಪ್ರಮಾಣದಲ್ಲಿ ಮೂಲಸೌಕರ್ಯವನ್ನು ಕಲ್ಪಿಸದ ಬಗ್ಗೆ ವಿಧಾನಸಭೆಯ ಅರ್ಜಿಗಳ ಸಮಿತಿಯು ಬಿಡಿಎ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದೆ.

ಸಮಿತಿಯ ಸದಸ್ಯ ಅಪ್ಪಚ್ಚು ರಂಜನ್ ನೇತೃತ್ವದಲ್ಲಿ ವಿಧಾಸೌಧದಲ್ಲಿ ಗುರುವಾರ ನಡೆದ ಸಭೆಯಲ್ಲಿ ಈ ವಿಚಾರದ ಬಗ್ಗೆ ಬಿಡಿಎ ಅಧಿಕಾರಿಗಳಿಂದ ವಿವರಣೆ ಪಡೆಯಲಾಯಿತು. ಈ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವಲ್ಲಿ ಆಗಿರುವ ಪ್ರಗತಿಯ ಬಗ್ಗೆ ಬಿಡಿಎ ಆಯುಕ್ತ ಎಂ.ಬಿ.ರಾಜೇಶ್ ಗೌಡ ವಿವರ ನೀಡಿದರು. 2022ರ ಡಿಸೆಂಬರ್ ಒಳಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿ ಪೂರ್ಣಗೊಳಿಸುವುದಾಗಿ ತಿಳಿಸಿದರು.

ಈ ಉತ್ತರದಿಂದ ಸಂತೃಪ್ತರಾಗದ ಸಮಿತಿ ಸದಸ್ಯರು, '2022ರ ಡಿಸೆಂಬರ್ ಅಂತ್ಯದೊಳಗೆ ಈ ಬಡಾವಣೆಗೆ ಅಗತ್ಯ ಮೂಲಸೌಕರ್ಯ ಕಲ್ಪಿಸುವುದಾಗಿ ಕಳೆದ ವಿಧಾನ ಮಂಡಲ ಅಧಿವೇಶನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಭರವಸೆ ನೀಡಿದ್ದರು. ಆದರೆ, ಆ ಬಳಿಕವೂ ಬಡಾವಣೆಯಲ್ಲಿ ಕಾಮಗಾರಿಗಳು ಚುರುಕು ಪಡೆದಿಲ್ಲ. ಅನಗತ್ಯ ವಿಳಂಬದಿಂದ ನಿವೇಶನದಾರರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ನಿಮಗೇನಾದರೂ ಮಾಹಿತಿ ಇದೆಯೇ ಎಂದು ಪ್ರಶ್ನಿಸಿದರು' ಎಂದು ಮೂಲಗಳು ತಿಳಿಸಿದೆ.

'ಮನೆ ನಿರ್ಮಿಸಲು ಅಗತ್ಯ ಇರುವಷ್ಟು ಮೂಲಸೌಕರ್ಯವನ್ನೂ ಬಡಾವಣೆಯಲ್ಲಿ ಇನ್ನೂ ಕಲ್ಪಿಸಿಲ್ಲ. ಶುಲ್ಕ ಪಾವತಿಸುವಾಗ ಒಂದು ದಿನ ತಡವಾದರೂ ಬಿಡಿಎ ನಿವೇಶನದಾರರಿಗೆ ದಂಡ ವಿಧಿಸುತ್ತದೆ. ಆದರೆ, ಮೂಲಸೌಕರ್ಯ ಕಲ್ಪಿಸುವಾಗ ವಿಳಂಬವಾಗಿದ್ದರಿಂದ ನಿವೇಶನದಾರರು ಎದುರಿಸುತ್ತಿರುವ ನಷ್ಟಕ್ಕೆ ಹೊಣೆ ಯಾರು' ಎಂದು ಸಮಿತಿಯ ಸದಸ್ಯರೊಬ್ಬರು ಪ್ರಶ್ನಿಸಿದರು.

'ಇಲ್ಲಿ ನಿವೇಶನ ಹಂಚಿಕೆ ಆಗಿರುವ ಬಹುತೇಕ ಮಂದಿ ನಿವೇಶನ ಖರೀದಿ ಹಾಗೂ ಮನೆ ನಿರ್ಮಾಣಕ್ಕೆ ಬ್ಯಾಂಕ್ ಸಾಲ ಪಡೆದಿದ್ದಾರೆ. 3 ವರ್ಷಗಳ ಒಳಗೆ ಮನೆ ನಿರ್ಮಿಸದೇ ಹೋದರೆ ಅವರು ಗೃಹಸಾಲಕ್ಕೆ ವಾಣಿಜ್ಯ ದರದಲ್ಲಿ ಬಡ್ಡಿ ಪಾವತಿಸ ಬೇಕಾಗುತ್ತಿದೆ. ಬಡಾವಣೆಯಲ್ಲಿ ಮೂಲಸೌಕರ್ಯ ಕಲ್ಪಿಸದ ಕಾರಣಕ್ಕೆ ಮನೆ ನಿರ್ಮಾಣವೂ ಸಾಧ್ಯವಾಗಿಲ್ಲ.ಹಾಗಾಗಿ ನಿವೇಶನದಾರರು ಮನೆ ಬಾಡಿಗೆಯನ್ನೂ ಪಾವತಿಸಬೇಕಿದೆ' ಎಂದು ಬಿಡಿಎ ಆಯುಕ್ತರನ್ನು ಸಮಿತಿ ಸದಸ್ಯರು ತರಾಟೆಗೆ ತೆಗೆದುಕೊಂಡರು ಎಂದು ಗೊತ್ತಾಗಿದೆ.

26ರಂದು ಸ್ಥಳ ಪರಿಶೀಲನೆ

ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಆಗಿರುವ ಪ್ರಗತಿ ಪರಿಶೀಲನೆಗಾಗಿ ಇದೇ 26ರಂದು ಸ್ಥಳಕ್ಕೆ ಭೇಟಿ ನೀಡಲು ವಿಧಾನಸಭೆಯ ಅರ್ಜಿಗಳ ಸಮಿತಿಯು ನಿರ್ಧರಿಸಿದೆ.

'ಮೂಲಸೌಕರ್ಯ ಕಲ್ಪಿಸುವ ವಿಚಾರದಲ್ಲಿ ಬಿಡಿಎ ಅಧಿಕಾರಿಗಳು ನೀಡಿರುವ ಉತ್ತರ ತೃಪ್ತಿದಾಯಕವಾಗಿಲ್ಲ. ಹಾಗಾಗಿ ಇದೇ 26ರಂದು ಸಮಿತಿಯು ಖುದ್ದಾಗಿ ಸ್ಥಳ ಪರಿಶೀಲನೆ ನಡೆಸಲಿದೆ' ಎಂದು ಸಭೆಯಲ್ಲಿ ಭಾಗವಹಿಸಿದ್ದ ಸದಸ್ಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕೃಷ್ಣ ಜನ್ಮಭೂಮಿ ವಿವಾದ: 19ಕ್ಕೆ ತೀರ್ಪು

ಮಥುರಾ (ಪಿಟಿಐ): ಉತ್ತರ ಪ್ರದೇಶದ ಮಥುರಾದ ಕೃಷ್ಣ ಜನ್ಮಭೂಮಿ ವಿವಾದ ಪ್ರಕರಣಕ್ಕೆ ಸಂಬಂಧಿಸಿ ಸ್ಥಳೀಯ ನ್ಯಾಯಾಲಯವು ಮೇ 19ರಂದು ತೀರ್ಪು ಪ್ರಕಟಿಸಲಿದೆ. ಶ್ರೀಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ಮಸೀದಿ ವಿವಾದ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ ಗುರುವಾರ ತೀರ್ಪು ಕಾಯ್ದಿರಿಸಿತು.

ವಿವಾದ ಕುರಿತು ಮೊದಲು ದಾಖಲಾಗಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪು ಇದಾಗಿದೆ. ಕಾತ್ರ ಕೇಶವ್ ದೇವ ದೇವಸ್ಥಾನದ ಬಾಲಭಕ್ತ ಶ್ರೀಕೃಷ್ಣ ವಿರಾಜ್‌ಮಾನ್ ಮತ್ತು ಇತರ ಆರು ಮಂದಿ ಪರವಾಗಿ ಲಖನೌ ನಿವಾಸಿ ರಂಜನಾ ಅಗ್ನಿಹೋತ್ರಿ ಮೊಕದ್ದಮೆ ದಾಖಲಿಸಿದ್ದರು.

ವಿವಾದದ ಸಂಬಂಧ ಮೂರು ಅರ್ಜಿಗಳು ದಾಖಲಾಗಿದ್ದವು. ಎರಡನೇ ಅರ್ಜಿಯನ್ನು ಹಿಂದೂ ಆರ್ಮಿ ಮುಖ್ಯಸ್ಥ ಮನೀಶ್ ಯಾದವ್, ಮೂರನೇ ಅರ್ಜಿಯನ್ನು ವಕೀಲ ಮಹೇಂದ್ರ ಪ್ರತಾಪ್ ಸಿಂಗ್ ಮೂಲಕ ಇತರೆ ಐವರು ಸಲ್ಲಿಸಿದ್ದರು.

ಶ್ರೀಕೃಷ್ಣನ ಜನ್ಮಸ್ಥಳವಾದ ಕಾತ್ರ ಕೇಶವ ದೇವ್ ದೇವಸ್ಥಾನದ 13.37 ಎಕರೆ ವಿಸ್ತೀರ್ಣದ ಆವರಣದಲ್ಲಿ, ಮೊಘಲ್ ದೊರೆ ಔರಂಗಜೇಬ್ ಆದೇಶದಂತೆ 1669–70ರ ಅವಧಿಯಲ್ಲಿ ಮಸೀದಿ ನಿರ್ಮಿಸಲಾಗಿದೆ. ಇದನ್ನು ತೆರವುಗೊಳಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.



ನೆಲಮಂಗಲದಲ್ಲಿ ನಡೆದ ಕಾರ್ಯಕ್ರಮದಲ್ಲಿ ತಜ್ಞ ವೈದ್ಯ ಡಾ.ಎಸ್.ವಿದ್ಯಾಧರ ಅವರಿಗೆ ಬಸವಣ್ಣದೇವರ ಮಠದ ಸಿದ್ಧಲಿಂಗ ಶ್ರೀಗಳು 'ಪವಾಡ ಶ್ರೀ' ಪ್ರಶಸ್ತಿ ಪ್ರದಾನ ಮಾಡಿದರು. ಸುಗ್ಗರಾಜು, ಬೆಟ್ಟಹಳ್ಳಿಮಠದ ಚಂದ್ರಶೇಖರ ಶಿವಾಚಾರ್ಯ ಶ್ರೀಗಳು, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಪರಮಶಿವಯ್ಯ, ಗದ್ದುಗೆ ಮಠದ ಮಹಂತ ಶ್ರೀಗಳು, ಪತ್ರಕರ್ತ ರಂಜಾನ್ ದರ್ಗಾ (ಪ್ರಶಸ್ತಿ ಪುರಸ್ಕೃತರು), ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್, ಮುಖಂಡರಾದ ಎಂ.ವಿ.ನಾಗರಾಜು, ಬಿ.ಹೊಂಬಯ್ಯ ಇದ್ದರು.

ತಿಂಗಳು ಕಳೆದರೂ ಬಿಬಿಎಂಪಿ ಬಜೆಟ್‌ಗಿಲ್ಲ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 2022–23ನೇ ಸಾಲಿನ ಬಜೆಟ್ ಮಂಡನೆಯಾಗಿ ತಿಂಗಳು ಕಳೆದರೂ ಸರ್ಕಾರದಿಂದ ಇನ್ನೂ ಅನುಮೋದನೆ ಸಿಕ್ಕಿಲ್ಲ.

2020ರ ಬಿಬಿಎಂಪಿ ಕಾಯ್ದೆ ಸೆಕ್ಷನ್ 194ರ ಪ್ರಕಾರ, ಮುಖ್ಯ ಆಯುಕ್ತರು ಕಳುಹಿಸುವ ಬಜೆಟ್ ಅಂದಾಜು ಮತ್ತು ಪ್ರಸ್ತಾವಗಳನ್ನು ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿಯು ಪರಿಶೀಲಿಸಬೇಕು. ಇತರ ಸ್ಥಾಯಿ ಸಮಿತಿಗಳ ಪ್ರಸ್ತಾವಗಳನ್ನೂ ಪಡೆದು ಬಜೆಟ್ ಅಂದಾಜನ್ನು ಸಿದ್ಧಪಡಿಸಬೇಕು. ಸೆಕ್ಷನ್ 196ರ ಪ್ರಕಾರ ಬಿಬಿಎಂಪಿ ಬಜೆಟ್ ಹೊಸ ಆರ್ಥಿಕ ವರ್ಷಾರಂಭಕ್ಕಿಂತ ಕನಿಷ್ಠ ಮೂರು ವಾರಗಳಿಗೆ ಮುಂಚೆ ಅಂಗೀಕಾರಗೊಳ್ಳಬೇಕು. ಆದರೆ, ಆರ್ಥಿಕ ವರ್ಷ ಮುಗಿಯುವ ಕೊನೆಯ ದಿನದವರೆಗೂ ಬಜೆಟ್ ಮಂಡನೆಯ ದಿನಾಂಕ ನಿರ್ಧಾರ ಆಗಿರಲಿಲ್ಲ. 2022–23ನೇ ಸಾಲಿನ ಬಜೆಟ್ ಅನ್ನು ಮಾರ್ಚ್ 31ರ ರಾತ್ರಿ ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (https://bbmp.gov.in) ಪ್ರಕಟಿಸಲಾಗಿತ್ತು. ಬಜೆಟ್ ಪ್ರತಿಯನ್ನು ವೆಬ್‌ಸೈಟ್‌ನಲ್ಲಿ ರಾತ್ರೋರಾತ್ರಿ ಪ್ರಕಟಿಸಿದ್ದಕ್ಕೆ ಭಾರಿ ವಿರೋಧ ವ್ಯಕ್ತವಾಗಿತ್ತು.

ಬಿಬಿಎಂಪಿಯು ಬಜೆಟ್‌ಗೆ ಅನುಮೋದನೆ ಪಡೆಯಲು ಏ.18ರಂದು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿತ್ತು. ಬಜೆಟ್ ಕುರಿತ ಕಡತ ಏಪ್ರಿಲ್ 21ರಂದು ಮುಖ್ಯಮಂತ್ರಿ ಕಚೇರಿಗೆ ತಲುಪಿದ್ದು, ಇನ್ನಷ್ಟೇ ಅಂಗೀಕಾರವಾಗಬೇಕಿದೆ ಎಂದು ಮೂಲಗಳು ತಿಳಿಸಿವೆ.

ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಬಜೆಟ್ ಪ್ರತಿಯ ಪ್ರಕಾರ, 2022–23ನೇ ಸಾಲಿನ ಬಜೆಟ್ ಗಾತ್ರ ಈ ವರ್ಷವೂ ₹10 ಸಾವಿರ ಕೋಟಿಯ ಗಡಿ ದಾಟಿದೆ. ಬಜೆಟ್ ಗಾತ್ರ ₹10,484.28 ಕೋಟಿ ಇದ್ದು, ಮುಂದಿನ ಆರ್ಥಿಕ ವರ್ಷದಲ್ಲಿ ಒಟ್ಟು ₹10,480.93 ಕೋಟಿ ವೆಚ್ಚ ಮಾಡಲು ಪಾಲಿಕೆ ನಿರ್ಧರಿಸಿತ್ತು.

ಬಿಬಿಎಂಪಿಯು ಅಂಗೀಕರಿಸಿ ಕಳುಹಿಸಿದ ಬಜೆಟ್‌ನಲ್ಲಿ ಅನಗತ್ಯ ಕಾರ್ಯಕ್ರಮಗಳಿಗೆ ಕತ್ತರಿ ಹಾಕಿ ನಗರಾಭಿವೃದ್ಧಿ ಇಲಾಖೆ ಅನುಮೋದನೆ ನೀಡುವುದು ವಾಡಿಕೆ. ಹಾಗಾಗಿ ಇಲಾಖೆಯಿಂದ ಅನುಮೋದನೆಗೊಳ್ಳುವಾಗ ಬಜೆಟ್ ಗಾತ್ರ ಕುಗ್ಗುತ್ತಿತ್ತು. ಆದರೆ, 2021–22ನೇ ಸಾಲಿನಲ್ಲಿ ಬಿಬಿಎಂಪಿ ಅಂಗೀಕರಿಸಿದ್ದ ಬಜೆಟ್ ಗಾತ್ರವನ್ನು ಹೆಚ್ಚಿಸಿ ಅನುಮೋದನೆ ನೀಡಲಾಗಿತ್ತು. ಬಿಎಂಪಿಯು 2021–22ನೇ ಸಾಲಿನ ಬಜೆಟ್ ಅನ್ನು 2021ರ ಮಾರ್ಚ್ 27ರಂದು ಮಂಡಿಸಿ ಅಂಗೀಕರಿಸಿತ್ತು. ₹ 9,286.81 ಕೋಟಿಗಳಷ್ಟಿದ್ದ ಬಜೆಟ್ ಗಾತ್ರವನ್ನು ನಗರಾಭಿವೃದ್ಧಿ ಇಲಾಖೆಯು ₹ 9,951.8 ಕೋಟಿಗೆ ಹೆಚ್ಚಿಸಿ ಅನುಮೋದನೆ ನೀಡಿತ್ತು.

2022–23ನೇ ಸಾಲಿನ ಬಜೆಟ್ ಗಾತ್ರವನ್ನು ಸರ್ಕಾರ ಹೆಚ್ಚಿಸಲಿದೆಯೋ ಅಥವಾ ಕಡಿತ ಮಾಡಲಿದೆಯೋ ಎಂಬುದನ್ನು ಕಾದು ನೋಡಬೇಕಿದೆ.

ಬಿಬಿಎಂಪಿಯು 2021–22ನೇ ಸಾಲಿನ ಬಜೆಟ್ ಕಾರ್ಯಕ್ರಮಗಳ ಅನುಪಾಲನಾ ವರದಿಯನ್ನು ಇನ್ನೂ ಬಹಿರಂಗಪಡಿಸಿಲ್ಲ. ಇದರಿಂದ 2021–22ನೇ ಸಾಲಿನ ಬಜೆಟ್ ಕಾರ್ಯಕ್ರಮಗಳು ಎಷ್ಟರ ಮಟ್ಟಿಗೆ ಅನುಷ್ಠಾನವಾಗಿವೆ ಎಂಬುದು ನಿಗೂಢವಾಗಿಯೇ ಉಳಿದಿದೆ.

ವಿದ್ಯಾರ್ಥಿನಿ ಆತ್ಮಹತ್ಯೆ: ತನಿಖೆಗೆ ವಿಎಚ್‌ಪಿ ಆಗ್ರಹ

ವಿಟ್ಲ: 'ಕನ್ಯಾನದ ಬಾಲಕಿಯ ಆತ್ಮಹತ್ಯೆ ಪ್ರಕರಣದ ಬಗ್ಗೆ ಸಂದೇಹಗಳಿದ್ದು, ಉನ್ನತ ಮಟ್ಟದ ತನಿಖೆ ನಡೆಸಬೇಕು. ಬಾಲಕಿ ಕುಟುಂಬಕ್ಕೆ ನ್ಯಾಯ ಸಿಗುವ ತನಕ ವಿಶ್ವ ಹಿಂದೂ ಪರಿಷತ್ ಹೋರಾಟ ನಡೆಸಲಿದೆ. ಈ ವಿಚಾರದಲ್ಲಿ ದಲಿತ ಸಂಘಟನೆಗಳು ಸಹ ಸಾಥ್ ನೀಡಬೇಕು' ಎಂದು ವಿಎಚ್‌ಪಿ ಮಂಗಳೂರು ವಿಭಾಗ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಒತ್ತಾಯಿಸಿದರು.

ಸಂತ್ರಸ್ತೆ ಮನೆಗೆ ಭೇಟಿ ನೀಡಿದ ಬಳಿಕ ಮಾತನಾಡಿದ ಅವರು, 'ತನ್ನನ್ನು ಪ್ರೀತಿಸುವಂತೆ ಶಾಹುಲ್ ಹಮೀದ್ ಎಂಬಾತ, 14 ವರ್ಷದ ಬಾಲಕಿಯನ್ನು ಪೀಡಿಸುತ್ತಿದ್ದ. ಇದೊಂದು ವ್ಯವಸ್ಥಿತ ಲವ್ ಜಿಹಾದ್ ಪ್ರಕರಣ. ಯುವತಿ ಕುತ್ತಿಗೆಯಲ್ಲಿ ಬೆರಳಿನ ಗುರುತು ಇತ್ತು ಎಂಬ ಮಾಹಿತಿ ಇದೆ' ಎಂದು ತಿಳಿಸಿದರು.

ಚಿತ್ರಾವಳಿ









1. ಸೇಂಟ್ ಜೋಸೆಫ್ ಕಾಲೇಜಿನ ಸಾರ್ವಜನಿಕ ಸಂಪರ್ಕ ಮತ್ತು ಉದ್ಯಮಶೀಲತೆ ವಿಭಾಗವು ಗುರುವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಪ್ರೆಸ್ಟೀಜ್ ಸಮೂಹದ ಸಂಸ್ಥೆಗಳ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕ ಇರ್ಫಾನ್ ರಜಾಕ್, ಕಾಂಗ್ರೆಸ್ ಮುಖಂಡರಾದ ಮಾರ್ಗರೆಟ್ ಆಳ್ವ, ಕಾಲೇಜಿನ ಪ್ರಾಂಶುಪಾಲ ಫಾ.ವಿಕ್ಟರ್ ಲೋಬೊ ಭಾಗವಹಿಸಿದರು
2. ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಿರುವ ಇಂಡಿಯನ್ ಆರ್ಟ್ ಫೆಸ್ಟಿವಲ್‌ನಲ್ಲಿ ಪಾಲ್ಗೊಂಡ ಚಿತ್ರ ಕಲಾವಿದರು ಗಂಟೆ ಬಾರಿಸಿ ಖುಷಿಪಟ್ಟರು. ಗುರುವಾರ ಆರಂಭಗೊಂಡ ಈ ಚಿತ್ರಕಲಾ ಪ್ರದರ್ಶನವು ಮೇ 8ರವರೆಗೆ ಮುಂದುವರಿಯಲಿದೆ
3. ಲ್ಯಾಂಗ್‌ಫರ್ಡ್‌ಟೌನ್‌ನಲ್ಲಿ ಮಳೆ ನೀರು ಸರಾಗವಾಗಿ ಹರಿಯುವಂತೆ ಮಾಡಲು ರಸ್ತೆ ಪಕ್ಕದ ಚರಂಡಿಯನ್ನು ಕಾರ್ಮಿಕರು ಗುರುವಾರ ಸ್ವಚ್ಛಗೊಳಿಸಿದರು
4. ಮಾಜಿ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ 120ನೇ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಸೌಧದ ಆವರಣದಲ್ಲಿ ಗುರುವಾರ ಹೂಗಳನ್ನು ಸಮರ್ಪಿಸಿದರು. ಕೆ.ಸಿ.ರೆಡ್ಡಿ ಅವರ ಮೊಮ್ಮಗಳು ಕವಿತಾ ರೆಡ್ಡಿ ಹಾಗೂ ಕುಟುಂಬಸ್ಥರು ಇದ್ದಾರೆ

– ಪ್ರಜಾವಾಣಿ ಚಿತ್ರಗಳು

ಈಡಿಗ ಸಮಾಜದ ಪಾದಯಾತ್ರೆ

ಚಿಂಚೋಳಿ (ಕಲಬುರಗಿ ಜಿಲ್ಲೆ): ಆರ್ಯ ಈಡಿಗ ಸಮುದಾಯದ ಕುಲಕಸುಬು ನೀರಾ ಇಳಿಸಿ ಮಾರಾಟ ಮಾಡಲು ಅನುಮತಿ ನೀಡಬೇಕು, ಆರ್ಯ ಈಡಿಗ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಈಡಿಗ ರಾಷ್ಟ್ರೀಯ ಮಹಾಮಂಡಳಿ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ನೇತೃತ್ವದಲ್ಲಿ ಇಲ್ಲಿನ ಹಾರಕೂಡ ಚನ್ನಬಸವ ಶಿವಯೋಗಿಗಳ ಮಠದಿಂದ ಕಲಬುರಗಿಯವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆ ಗುರುವಾರ ಆರಂಭಗೊಂಡಿತು.

ಪಾದಯಾತ್ರೆಗೆ ಚಾಲನೆ ನೀಡಿದ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮಾಲಿಕಯ್ಯ ಗುತ್ತೇದಾರ, 'ಸಮಾಜದ ಬಂಧುವಾಗಿ ಇಲ್ಲಿಗೆ ಬಂದಿದ್ದು ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆರ್ಯ ಈಡಿಗ ನಿಗಮ ಸ್ಥಾಪಿಸುವಂತೆ ಕೇಳಿದ್ದೆವು. ಆದರೆ, ಸರ್ಕಾರ ಹತ್ತಾರು ಹಿಂದುಳಿದ ವರ್ಗಗಳ ಸಮುದಾಯ ಸೇರಿಸಿ ಬಜೆಟ್‌ನಲ್ಲಿ ಅನುದಾನ ಘೋಷಿಸಿದೆ. ಇದು ನಮಗೆ ತೃಪ್ತಿ ತಂದಿಲ್ಲ' ಎಂದರು.

ಪ್ರಣವಾನಂದ ಸ್ವಾಮೀಜಿ ಮಾತನಾಡಿ, 'ನೀರಾ ಇಳಿಸಿ ಮಾರಾಟ ಮಾಡಲು ಅನುಮತಿ ಕೊಡುವವರೆಗೆ ಹಾವೇರಿ ಜಿಲ್ಲೆಯ ಅರೆ ಮಲ್ಲಾಪುರದ ಶರಣಬಸವೇಶ್ವರ ಪೀಠಕ್ಕೆ ಮರಳುವುದಿಲ್ಲ' ಎಂದು ಹೇಳಿದರು.

ಚಿಗರಳ್ಳಿಯ ಜಗದ್ಗುರು ಮರುಳ ಶಂಕರದೇವರ ಗುರುಪೀಠದ ಸಿದ್ದಬಸವ ಕಬೀರ ಸ್ವಾಮೀಜಿ, ಸೋಲೂರಿನ ಆರ್ಯ ಈಡಿಗ ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ, ಶಂಕ್ರಯ್ಯ, ಶರಣಯ್ಯ ತಾತಾ ಸಾನಿಧ್ಯ ವಹಿಸಿದ್ದರು. ಜಗದೇವ ಗುತ್ತೇದಾರ, ಬಸಯ್ಯ ಗುತ್ತೇದಾರ, ಸುಭಾಷ ರಾಠೋಡ, ಗೌತಮ ಬೊಮ್ಮನಳ್ಳಿ ಮಾತನಾಡಿದರು.

ಮಹಾರಾಷ್ಟ್ರ, ತೆಲಂಗಾಣಕ್ಕೆ ಸಾಗಿಸುತ್ತಿದ್ದ ಶಸ್ತ್ರಾಸ್ತ್ರ, ಸ್ಫೋಟಕ ವಶ

ಶಂಕಿತ 4 ಉಗ್ರರ ಸೆರೆ

ಚಂಡೀಗಡ(ಪಿಟಿಐ): ಪಾಕಿಸ್ತಾನದೊಂದಿಗೆ ನಂಟಿರುವ, ಶಂಕಿತ ನಾಲ್ವರು ಉಗ್ರರನ್ನು ಹರಿಯಾಣದ ಕರ್ನಾಲ್ ಬಳಿಯ ಬಸ್ತಾಡಾದ ಟೋಲ್‌ಪ್ಲಾಜ್‌ದಲ್ಲಿ ಬಂಧಿಸಲಾಗಿದೆ. ಬಂಧಿತರಿಂದ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳು, ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

‘ಪಂಜಾಬ್ ಹಾಗೂ ಹರಿಯಾಣ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ನಾಲ್ವರು ಉಗ್ರರನ್ನು ಬಂಧಿಸಿದ್ದಾರೆ’ ಎಂದು ಹರಿಯಾಣ ಡಿಜಿಪಿ ಪಿ.ಕೆ. ಅಗ್ರವಾಲ್ ಹೇಳಿದ್ದಾರೆ.

‘ಪ್ರಾಥಮಿಕ ತನಿಖೆಯಲ್ಲಿ ಕೆಲ ಸಂಗತಿಗಳು ಗೊತ್ತಾಗಿವೆ. ಪಂಜಾಬ್‌ನ ಫಿರೋಜ್‌ಪುರದ ಜಮೀನುಗಳಲ್ಲಿ ಪಾಕಿಸ್ತಾನದಿಂದ ತಂದಿದ್ದ ಶಸ್ತ್ರಾಸ್ತ್ರಗಳನ್ನು ಡ್ರೋನ್ ಮೂಲಕ ಹಾಕಲಾಗಿದೆ ಎಂಬುದಾಗಿ ಬಂಧಿತರು ಹೇಳಿದ್ದಾರೆ. ಈ ಬಗ್ಗೆ ವಿಸ್ತೃತ ತನಿಖೆಯ ಅಗತ್ಯ ಇದೆ’ ಎಂದು ಹೇಳಿದರು.

‘ತಲಾ 2.5 ಕೆ.ಜಿ ತೂಕವಿರುವ ಮೂರು ಕಂಟೇನರ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇವುಗಳಲ್ಲಿ ಆರ್‌ಡಿಎಕ್ಸ್ ಇರುವ ಶಂಕೆ ಇದೆ. ಒಂದು ಪಿಸ್ತೂಲ್, 31 ಸುತ್ತು ಜೀವಂತ ಮದ್ದು ಗುಂಡುಗಳು, ₹1.3 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ’ ಎಂದು ಐಜಿಪಿ ಸತ್ಯೇಂದ್ರ ಕುಮಾರ್ ಗುಪ್ತಾ ತಿಳಿಸಿದ್ದಾರೆ.

ಬಂಧಿತರನ್ನು ಲೂಧಿಯಾನದ ಭೂಪಿಂದರ್ ಸಿಂಗ್, ಫಿರೋಜ್‌ಪುರದ ಗುರ್‌ಪ್ರೀತ್ ಸಿಂಗ್, ಪರ್ಮಿಂದರ್ ಸಿಂಗ್ ಹಾಗೂ ಅಮನ್‌ದೀಪ್ ಸಿಂಗ್ ಎಂದು ಗುರುತಿಸಲಾಗಿದೆ. ಬಂಧಿತರು ಈ ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳನ್ನು ಮಹಾರಾಷ್ಟ್ರದ ನಾಂದೇಡ್ ಹಾಗೂ ತೆಲಂಗಾಣದ ಆದಿಲಾಬಾದ್‌ಗೆ ಸಾಗಿಸುತ್ತಿದ್ದರು ಎಂದು ಕರ್ನಾಲ್ ಎಸ್ಪಿ ಗಂಗಾರಾಮ್ ಪೂನಿಯಾ ತಿಳಿಸಿದ್ದಾರೆ.

‘ಬಂಧಿತರು ಪಾಕಿಸ್ತಾನ ಮೂಲದ ಹರ್ವಿಂದರ್ ಸಿಂಗ್ ರಿಂಡಾ ಎಂಬ ವ್ಯಕ್ತಿಯ ಸಂಪರ್ಕದಲ್ಲಿದ್ದರು. ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಈ ವ್ಯಕ್ತಿ, ಶಸ್ತ್ರಾಸ್ತ್ರಗಳು, ಸ್ಫೋಟಕ ವಸ್ತುಗಳು ಹಾಗೂ ಡ್ರಗ್ಸ್ ಪೂರೈಕೆ ಮಾಡುತ್ತಾನೆ. ಅವುಗಳನ್ನು ತಲುಪಿಸಬೇಕಾದ ಸ್ಥಳಗಳ ಮಾಹಿತಿಯನ್ನು ಆ್ಯಪ್ ಮೂಲಕ ಬಂಧಿತರಿಗೆ ತಿಳಿಸುತ್ತಿದ್ದ.’

‘ಫಿರೋಜ್‌ಪುರ ಸಮೀಪದ ಜಮೀನುಗಳಲ್ಲಿ ಮೊದಲೇ ನಿಗದಿಪಡಿಸಿದ ಸ್ಥಳದಲ್ಲಿ ಡ್ರೋನ್ ಮೂಲಕ ಈ ಶಸ್ತ್ರಾಸ್ತ್ರಗಳು ಹಾಗೂ ಸ್ಫೋಟಕಗಳನ್ನು ಹರ್ವಿಂದರ್ ಸಿಂಗ್ ಬೀಳಿಸಿದ್ದ’ ಎಂದು ಹೇಳಿರುವ ಪೂನಿಯಾ, ‘ಬಂಧಿತರು ಯಾವ ಉಗ್ರ ಸಂಘಟನೆಗೆ ಸೇರಿದವರು ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದರು.

‘ಪ್ರಮುಖ ಆರೋಪಿ ಗುರ್‌ಪ್ರೀತ್ ಸಿಂಗ್, ರಾಜವೀರ್ ಸಿಂಗ್ ಎಂಬಾತನನ್ನು ಈ ಮೊದಲು ಜೈಲಿನಲ್ಲಿ ಭೇಟಿಯಾಗಿದ್ದ. ರಾಜವೀರ್ ಸಿಂಗ್ ರಿಂಡಾನ ಸಹಚರ’ ಎಂದೂ ಅವರು ತಿಳಿಸಿದ್ದಾರೆ.

‘ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ತನಿಖೆ ಆರಂಭಿಸಿದ್ದಾರೆ’ ಎಂದು ಹರಿಯಾಣ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್ ಹಾಗೂ ಗೃಹ ಸಚಿವ ಅನಿಲ್ ವಿಜ್ ಪ್ರತಿಕ್ರಿಯಿಸಿದ್ದಾರೆ.

ಬಾಂಬ್ ನಿಷ್ಕ್ರಿಯ ದಳ ಪರಿಶೀಲನೆ

ಕರ್ನಾಲ್ ಬಳಿ ಟೋಲ್‌ಪ್ಲಾಜಾದಲ್ಲಿ ಬಂಧಿತರ ವಾಹನವನ್ನು ವಶಕ್ಕೆ ಪಡೆದ ನಂತರ, ಬಾಂಬ್ ನಿಷ್ಕ್ರಿಯ ದಳ ಹಾಗೂ ವಿಧಿವಿಜ್ಞಾನ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಉನ್ನತ ಮಟ್ಟದ ತನಿಖೆಗಾಗಿ ಹರಿಯಾಣ ಪೊಲೀಸರು ವಿಶೇಷ ತನಿಖಾ ತಂಡ ರಚಿಸಿದ್ದಾರೆ. ಬಂಧಿತರ ವಿರುದ್ಧ ಯುಎಪಿಎ ಹಾಗೂ ಶಸ್ತ್ರಾಸ್ತ್ರ ಮತ್ತು ಸ್ಫೋಟಕವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಮುಖ್ಯಾಂಶಗಳು

- ಪಂಜಾಬ್ ಮತ್ತು ಹರಿಯಾಣ ಪೊಲೀಸರ ಜಂಟಿ ಕಾರ್ಯಾಚರಣೆ
- ತಲಾ 2.5 ಕೆ.ಜಿ. ತೂಕವಿರುವ 3 ಕಂಟೇನರ್ ವಶ

ಮೇ 9ರಂದು ಸಿಡಬ್ಲ್ಯುಸಿ ಸಭೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು (ಸಿಡಬ್ಲ್ಯುಸಿ) ಮೇ 9ರಂದು ಇಲ್ಲಿ ನಡೆಯಲಿದೆ. ರಾಜಸ್ಥಾನದ ಉದಯಪುರದಲ್ಲಿ ನಡೆಯಲಿರುವ ಚಿಂತನ ಶಿಬಿರ ಮತ್ತು ಭವಿಷ್ಯದಲ್ಲಿನ ಪಕ್ಷದ ಕಾರ್ಯತಂತ್ರ ಕುರಿತು ಚರ್ಚೆ ನಡೆಯಲಿದೆ.

ಪಕ್ಷದ ಮೂರು ದಿನಗಳ ಚಿಂತನಾ ಶಿಬಿರ ಮೇ 13 ರಿಂದ 15ರವರೆಗೆ ಉದಯಪುರದಲ್ಲಿ ನಡೆಯಲಿದೆ ಎಂದು ಪಕ್ಷ ಈಗಾಗಲೇ ಪ್ರಕಟಿಸಿದೆ. ಈ ಸಭೆಯಲ್ಲಿ ಪಕ್ಷದ ಆಂತರಿಕ ವಿಷಯಗಳು ಚರ್ಚೆಯಾಗಲಿವೆ. ಸುಮಾರು 400 ಮಂದಿ ಉನ್ನತ ನಾಯಕರು ಭಾಗವಹಿಸುವ ನಿರೀಕ್ಷೆ ಇದೆ.

ಅದಕ್ಕೆ ಮುನ್ನ ಮೇ 9ರಂದು ಇಲ್ಲಿನ ಕೇಂದ್ರ ಕಚೇರಿಯಲ್ಲಿ ಕಾರ್ಯಕಾರಿ ಸಮಿತಿ ಸಭೆ ಕರೆಯಲಾಗಿದೆ. ಚಿಂತನ ಶಿಬಿರದ ಸಿದ್ಧತೆ ಮತ್ತು ಭವಿಷ್ಯದ ಕಾರ್ಯತಂತ್ರ ಕುರಿತು ಪ್ರಮುಖವಾಗಿ ಇಲ್ಲಿ ಚರ್ಚೆ ನಡೆಯಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಈ ವರ್ಷಾಂತ್ಯದಲ್ಲಿ ನಡೆಯಲಿರುವ ಗುಜರಾತ್, ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆ ಹಾಗೂ 2024ರ ಲೋಕಸಭೆ ಚುನಾವಣೆಗೆ ಕಾಂಗ್ರೆಸ್ ಈಗಾಗಲೇ ಸಿದ್ಧತೆ ಆರಂಭಿಸಿದೆ. ಇನ್ನೊಂದೆಡೆ ಪಕ್ಷದ ಸಾಂಸ್ಥಿಕ ಸಮಿತಿಗಳಿಗೂ ಚುನಾವಣೆ ನಡೆಯಲಿದ್ದು, ಈ ವರ್ಷದ ಆಗಸ್ಟ್ 21 ಮತ್ತು ಸೆಪ್ಟೆಂಬರ್ 20ರ ಒಳಗೆ ಪಕ್ಷವು ನೂತನ ಅಧ್ಯಕ್ಷರನ್ನು ಹೊಂದುವ ಸಾಧ್ಯತೆಗಳು ಇವೆ.

ಆ್ಯಸಿಡ್ ದಾಳಿ: ಸಿಗದ ಸುಳಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೀತಿ ನಿರಾಕರಿಸಿದರು ಎಂಬ ಕಾರಣಕ್ಕೆ 24 ವರ್ಷದ ಯುವತಿ ಮೇಲೆ ಆ್ಯಸಿಡ್ ಎರಚಿ ಪರಾರಿಯಾಗಿರುವ ಆರೋಪಿ ನಾಗೇಶ್ ಅಲಿಯಾಸ್ ನಾಗರಾಜ್ ಬಗ್ಗೆ ಯಾವುದೇ ಸುಳಿವು ಸಿಗುತ್ತಿಲ್ಲ.

‘ಏಪ್ರಿಲ್ 28ರಂದು ಕೃತ್ಯ ಎಸಗಿ ನಾಗೇಶ್ ಪರಾರಿಯಾಗಿದ್ದಾನೆ. ಆತನ ಪತ್ತೆಗಾಗಿ ವಾರದಿಂದ ತನಿಖೆ ನಡೆಸಲಾಗುತ್ತಿದ್ದು, ಸುಳಿವು ಸಿಕ್ಕಿಲ್ಲ. ಲುಕ್‌ಔಟ್ ನೋಟಿಸ್ ಹೊರಡಿಸಲಾಗಿದ್ದು, ಹೊರ ರಾಜ್ಯಕ್ಕೂ ವಿಶೇಷ ತಂಡಗಳು ಹೋಗಿವೆ’ ಎಂದು ಪೊಲೀಸರು ಹೇಳಿದರು.

‘ಗಾಯಗೊಂಡಿರುವ ಯುವತಿ, ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತಿರುವುದಾಗಿ ವೈದ್ಯರು ಹೇಳಿದ್ದಾರೆ’ ಎಂದೂ ತಿಳಿಸಿದರು.

ಐಐಟಿ ಮಾದರಿಯಲ್ಲಿ ಕೆಐಟಿ: ಕಾರ್ಯಪಡೆ ರಚನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಆರು ಎಂಜಿನಿಯರಿಂಗ್ ಕಾಲೇಜುಗಳನ್ನು ಐಐಟಿ ಮಾದರಿಯಲ್ಲಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕೆಐಟಿ) ಆಗಿ ಮೇಲ್ದರ್ಜೆಗೇರಿಸುವ ಯೋಜನೆಗೆ ಶೀಘ್ರದಲ್ಲಿ ಕಾರ್ಯಪಡೆ ರಚಿಸಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಗುರುವಾರ ನಡೆದ ಉನ್ನತ ಶಿಕ್ಷಣ ಇಲಾಖೆಯ ಸಭೆಯಲ್ಲಿ ಅವರು ಈ ಸೂಚನೆ ನೀಡಿದರು.

‘ಸಮಿತಿಯಲ್ಲಿ ಎನ್‌ಐಟಿ, ಐಐಟಿಗಳ ನಿವೃತ್ತ ನಿರ್ದೇಶಕರು, ಶಿಕ್ಷಣ ತಜ್ಞರು ಇರಬೇಕು. ಕೆಐಟಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ಪ್ರಮುಖ ಐಟಿ ಕಂಪನಿಗಳು, ಕೈಗಾರಿಕೋದ್ಯಮಿಗಳ ಪ್ರಮುಖರ ಸೇವೆ ಪಡೆಯಬಹುದು’ ಎಂದೂ ಅವರು ಸಲಹೆ ನೀಡಿದರು.

‘ರಾಜ್ಯದ ಆಯ್ದ 14 ಎಂಜಿನಿಯರಿಂಗ್ ಕಾಲೇಜುಗಳನ್ನು ಕೆಐಟಿ ಆಗಿ ಮೇಲ್ದರ್ಜೆಗೇರಿಸುವ ಯೋಜನೆ ರೂಪಿಸಲಾಗಿದೆ. ಆರಂಭದಲ್ಲಿ ಉತ್ತಮ ರೀತಿಯಲ್ಲಿ ಸ್ಥಾಪಿತವಾಗಿರುವ ಹಾಗೂ ಮೂಲ ಸೌಲಭ್ಯ, ಶಿಕ್ಷಕ ವರ್ಗ, ಹಾಸ್ಟೆಲ್ ವ್ಯವಸ್ಥೆ ಇರುವ ಕಾಲೇಜುಗಳನ್ನು ಮೇಲ್ದರ್ಜೆಗೆ ಏರಿಸಲು ಆಯ್ದುಕೊಳ್ಳಲಾಗುವುದು. ಕಲ್ಯಾಣ ಕರ್ನಾಟಕದ ಕಲಬುರಗಿ, ಕಿತ್ತೂರು ಕರ್ನಾಟಕ ವಿಭಾಗದಲ್ಲಿ ಹಾವೇರಿ ಹಾಗೂ ಉತ್ತರ ಕನ್ನಡ (ಕಾರವಾರ) ಎಂಜಿನಿರಿಂಗ್ ಕಾಲೇಜು, ಮೈಸೂರು ವಿಭಾಗದಲ್ಲಿ ಕೆ.ಆರ್. ಪೇಟೆ ಹಾಗೂ ಕೊಡಗು, ಬೆಂಗಳೂರು ವಿಭಾಗದಲ್ಲಿ ಎಸ್‌ಕೆಎಸ್‌ಜೆಟಿಐ, ರಾಮನಗರದ ಎಂಜಿನಿಯರಿಂಗ್ ಕಾಲೇಜನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಬೇಕು’ ಎಂದೂ ಅವರು ಸೂಚಿಸಿದರು.

ಗ್ರಾ.ಪಂ.ಗಳಿಗೆ ಉಪಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ತಾಲ್ಲೂಕಿನ ಕಾಚೋಹಳ್ಳಿ, ಯಲಹಂಕ ತಾಲ್ಲೂಕಿನ ಅರಕೆರ, ಬೆಂಗಳೂರು ದ. ತಾಲ್ಲೂಕಿನ ಚುಂಚನಕುಪ್ಪೆ, ಆನೇಕಲ್‌ನ ಬ್ಯಾಗಡದೇನಹಳ್ಳಿ ಮತ್ತು ಬನ್ನೇರುಘಟ್ಟ ಗ್ರಾಮ ಪಂಚಾಯಿತಿಯ ವಿವಿಧ ಸ್ಥಾನಗಳಿಗೆ ಉಪಚುನಾವಣೆ ಹಾಗೂ ದಕ್ಷಿಣ ತಾಲ್ಲೂಕಿನ ಕಗ್ಗಲೀಪುರ ಗ್ರಾಮ ಪಂಚಾಯಿತಿಗೆ ಚುನಾವಣೆ ನಡೆಸಲು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅಧಿಸೂಚನೆ ಹೊರಡಿಸಿದ್ದಾರೆ.

ನಾಮಪತ್ರ ಸಲ್ಲಿಸಲು ಮೇ 10 ಕೊನೆಯ ದಿನ. ಮೇ 11ರಂದು ನಾಮಪತ್ರ ಪರಿಶೀಲಿಸಲಾಗುವುದು. ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಮೇ 13 ಕೊನೆಯ ದಿನ. ಮೇ 20ರಂದು ಬೆಳಿಗ್ಗೆ 7ರಿಂದ ಸಂಜೆ 5ರ ವರೆಗೆ ಮತದಾನ ನಡೆಸಲಾಗುವುದು. ಮೇ 22ರಂದು ಮತಗಳ ಎಣಿಕೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

‘ಬಯಸಿದವರಿಗೆ ಮಾತ್ರವೇ ಉಚಿತ ವಿದ್ಯುತ್’

ನವದೆಹಲಿ(ಪಿಟಿಐ) : ದೆಹಲಿಯಲ್ಲಿ ಅಕ್ಟೋಬರ್ 1ರಿಂದ ಬಯಸಿದವರಿಗೆ ಮಾತ್ರವೇ ಉಚಿತ ವಿದ್ಯುತ್ ನೀಡಲಾಗುವುದು ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಗುರುವಾರ ಹೇಳಿದ್ದಾರೆ.

ಈ ಬಗ್ಗೆ ಆಮ್ ಆದ್ಮಿ ಪಕ್ಷದ ಅಧಿಕೃತ ಟ್ವಿಟರ್ ಖಾತೆಯಲ್ಲಿ ಮಾಹಿತಿ ನೀಡಲಾಗಿದೆ.

‘ಹಲವರು ವಿದ್ಯುತ್ ಬಿಲ್ ಪಾವತಿಸಲು ಸಮರ್ಥರಿದ್ದು, ಉಚಿತ ವಿದ್ಯುತ್ ಅಗತ್ಯವಿಲ್ಲ ಎಂದು ಪತ್ರ ಬರೆದಿದ್ದಾರೆ. ಸಬ್ಸಿಡಿ ಬೇಕೇ, ಬೇಡವೇ ಎಂದು ಶೀಘ್ರದಲ್ಲೇ ಜನರನ್ನು ಕೇಳಲು ನಾವು ನಿರ್ಧರಿಸಿದ್ದೇವೆ’ ಎಂದು ತಿಳಿಸಿದ್ದಾರೆ.

ಈಜಲು ಹೋದ ವಿದ್ಯಾರ್ಥಿಗಳ ಸಾವು

ಚಿಂತಾಮಣಿ: ತಾಲ್ಲೂಕಿನ ಚಿನ್ನಸಂದ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೊಡ್ಡಿಹಳ್ಳಿಯಲ್ಲಿ ಇಬ್ಬರು ವಿದ್ಯಾರ್ಥಿಗಳು ಈಜಲು ಹೋಗಿ ಕೃಷಿ ಹೊಂಡದಲ್ಲಿ ಬಿದ್ದು ಗುರುವಾರ ಮೃತಪಟ್ಟಿದ್ದಾರೆ.

ಚಿನ್ನಸಂದ್ರ ಗ್ರಾಮದ ಗ್ರಾಮ ಸಹಾಯಕ ರಾಮಾಂಜಿಯ ಪುತ್ರ ಅರುಣ್ ಕುಮಾರ್ (14) ಮತ್ತು ಅದೇ ಗ್ರಾಮದ ಮಂಜುನಾಥ್ ಎಂಬುವರ ಪುತ್ರ ಧನುಷ್ (12) ಮೃತಪಟ್ಟಿದ್ದಾರೆ.

ಅರುಣ್ ಕುಮಾರ್ 9ನೇ ತರಗತಿ ಮತ್ತು ಧನುಷ್ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಬೇಸಿಗೆ ಆದ್ದರಿಂದ ಮಧ್ಯಾಹ್ನ ಈಜಾಡಲು ಸ್ನೇಹಿತರೊಂದಿಗೆ ದೊಡ್ಡಿಹಳ್ಳಿ ಗ್ರಾಮದ ಕೃಷಿ ಹೊಂಡಕ್ಕೆ ಹೋಗಿದ್ದಾರೆ. ಸರಿಯಾಗಿ ಈಜಾಡಲು ಬಾರದೆ ಮಣ್ಣಿನಲ್ಲಿ ಸಿಲುಕಿ ಮೇಲೆ ಬರಲಾರದೆ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಶವಗಳನ್ನು ಮರಣೋತ್ತರ ಪರೀಕ್ಷೆಗಾಗಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಚಿವ ಅಶ್ವತ್ಥನಾರಾಯಣ ವಿರುದ್ಧ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪ

ಸರ್ಟಿಫಿಕೇಟ್ ಕೊಡಿಸುವುದರಲ್ಲಿ ಹೆಸರುವಾಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ರಾಜಕೀಯಕ್ಕೆ ಬರುವ ಮೊದಲು ಸರ್ಟಿಫಿಕೇಟ್ ಕೊಡಿಸುವುದರಲ್ಲಿ ಹೆಸರುವಾಸಿ. ಪರೀಕ್ಷೆ ಬರೆಯದೇ ಇದ್ದವರಿಗೂ ಕೊಡಿಸಿದ್ದರು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಸರ್ಟಿಫಿಕೇಟ್ ಕೊಡಿಸುವುದರಲ್ಲಿ ಅಶ್ವತ್ಥನಾರಾಯಣ ಅವರದ್ದು ಎತ್ತಿದ ಕೈ ಅನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಹಿಂದೆ ಅವರು ನರ್ಸುಗಳಿಗೆ ಸರ್ಟಿಫಿಕೇಟ್ ಕೊಡಿಸಿದ್ದರು. ಕಾಂಗ್ರೆಸ್‌ನವರು ಅದನ್ನಾದರೂ ಹೇಳಲಿ' ಎಂದರು.

'ಅಶ್ವತ್ಥನಾರಾಯಣ ಬಗ್ಗೆ ಮೃದು ಧೋರಣೆ ಇಲ್ಲ. ದಾಖಲೆ ಇಟ್ಟುಕೊಂಡು ಮಾತನಾಡಿ ಎಂದು ಕಾಂಗ್ರೆಸ್‌ನವರಿಗೆ ಹೇಳಿದ್ದೆ. ಅದರಲ್ಲಿ ತಪ್ಪೇನಿದೆ' ಎಂದು ಪ್ರಶ್ನಿಸಿದರು.

ಎಲ್ಲದಕ್ಕೂ ಮೌನವೇ ಈ ಸರ್ಕಾರದ ಉತ್ತರ. ಎಲ್ಲ ಹಗರಣಗಳ ಬಗ್ಗೆಯೂ ಮೌನವಾಗಿಯೇ ಇದೆ. ಎರಡು ತಿಂಗಳಿನಿಂದ ನಡೆದ ಗಲಾಟೆ, ಗಲಭೆ ನಡೆದಾಗಲೂ ಸರ್ಕಾರ ಸುಮ್ಮನೇ ಇತ್ತು. ಯಾವುದರ ಬಗ್ಗೆಯೂ ಮಾತನಾಡದೇ ಇರುವುದನ್ನು ನೋಡಿದರೆ ಸರ್ಕಾರದಲ್ಲಿರುವವರ ಪಾಲು ಇದರಲ್ಲಿದೆಯೇ ಎಂಬ ಅನುಮಾನ ಮೂಡುತ್ತದೆ. ಇದು ರಾಜ್ಯದ ಹಣೆಬರಹ ಎಂದರು.

ಒಂದು ಸಣ್ಣ ಪ್ರಕರಣದ ಬಗ್ಗೆ ಯಾರೋ ಕೆಲವರು ಮಾತನಾಡುತ್ತಿದ್ದಾರೆ. ₹20 ಲಕ್ಷದ ಬಗ್ಗೆ ಚರ್ಚೆ ನಡೆಯುತ್ತಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕೆಪಿಎಸ್‌ಸಿ ಶುದ್ಧ ಮಾಡಲು ಹೊರಟರು. ಆದರೆ, ಶ್ಯಾಮ್‌ಭಟ್ ಅವರನ್ನು ತಂದು ಕೂರಿಸಿದ ಮೇಲೆ ಉದ್ಯೋಗ ಎಂಬುದು ಮುಕ್ತ ಮಾರುಕಟ್ಟೆಗೆ ತೆರೆದುಕೊಂಡಿತು. ಉಪವಿಭಾಗಾಧಿಕಾರಿ, ಡಿವೈಎಸ್‌ಪಿ ಹುದ್ದೆಗೆ ಇಷ್ಟು ಎಂಬಂತೆ ವ್ಯಾಪಾರ ನಡೆಯಿತು. ಈಗ ಭ್ರಷ್ಟಾಚಾರದ ಬಗ್ಗೆ ಮಾತನಾಡಲು ಕಾಂಗ್ರೆಸ್ ನಾಯಕರಿಗೆ ಯಾವ ನೈತಿಕತೆ ಇದೆ. ಕಾಂಗ್ರೆಸ್ ಮಾಡಿದ್ದನ್ನೇ ಈಗ ಬಿಜೆಪಿ ಮುಂದುವರಿಸಿಕೊಂಡು ಹೋಗುತ್ತಿದೆ ಎಂದು ಟೀಕಿಸಿದರು.

ಅಶ್ವತ್ಥನಾರಾಯಣ ವಿರುದ್ಧದ ಆರೋಪ ಆಧಾರರಹಿತ: ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಬಗ್ಗೆ ಕಾಂಗ್ರೆಸ್‌ನವರು ಆಧಾರರಹಿತ ಆರೋಪ ಮಾಡುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಆರೋಪ ಮಾಡುವಾಗ ಸಣ್ಣ ಸಾಕ್ಷ್ಯವಾದರೂ ಬೇಕು. ಆದರೆ, ಜವಾಬ್ದಾರಿಯುತ ಪಕ್ಷವಾದ ಕಾಂಗ್ರೆಸ್ ಹಿಟ್ ಆ್ಯಂಡ್ ರನ್ ಮಾಡಲು ಹೊರಟಿದೆ' ಎಂದು ಆರೋಪಿಸಿದರು.

'ಕಾಂಗ್ರೆಸ್ ಅವಧಿಯಲ್ಲಿ ಹಲವು ಪರೀಕ್ಷೆಗಳಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ. ಆ ಸಂದರ್ಭದಲ್ಲಿ ಅವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈಗ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅವರ ಪಕ್ಷದ ಕೆಲವರ ಬಂಧನ ಆಗಿದೆ. ಎಲ್ಲಿ ಅವರ ಬಣ್ಣ ಬಯಲಾಗುತ್ತದೊ ಎಂದು ಹೆದರಿ ಸಾಕ್ಷ್ಯಾಧಾರಗಳಿಲ್ಲದೆ ಆರೋಪಗಳನ್ನು ಮಾಡುತ್ತಿದ್ದಾರೆ' ಎಂದರು.

ನಿಷ್ಠುರ ತನಿಖೆ: 'ಈ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಬಂದ ದೂರುಗಳನ್ನೆಲ್ಲ ಪರಿಗಣಿಸಲಾಗುವುದು. ದಾಖಲೆಗಳನ್ನು ಪರಿಶೀಲಿಸಿ, ಎಲ್ಲವನ್ನೂ ತನಿಖೆ ಮಾಡುತ್ತೇವೆ. ಮುಕ್ತ, ನಿಷ್ಪಕ್ಷಪಾತ, ನಿಷ್ಠುರ ತನಿಖೆ ಆಗಬೇಕು ಎನ್ನುವುದು ನಮ್ಮ ನಿಲುವು. ಹೀಗಾಗಿ, ಹಲವು ಅಧಿಕಾರಿಗಳ ತಂಡ ರಚಿಸಿ ಕಾರ್ಯಾಚರಣೆ ಮಾಡುತ್ತಿದ್ದೇವೆ' ಎಂದರು. ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ದಿವ್ಯಾ ಹಾಗರಗಿಯಷ್ಟೆ ಅಲ್ಲ. ಇನ್ನೂ ಹಲವರು ಈ ಪ್ರಕರಣದಲ್ಲಿ ಇದ್ದಾರೆ. ಎಲ್ಲರ ಮೇಲೂ ಕ್ರಮ ತೆಗೆದುಕೊಳ್ಳುತ್ತೇವೆ. ಅಧಿಕಾರಿಗಳನ್ನು ಅಮಾನತು ಮಾಡಿದ್ದೇ ಇದಕ್ಕೆ ಸಾಕ್ಷಿ' ಎಂದರು.

ರಾಗಿ ಖರೀದಿ: ನೋಂದಣಿ ಇಂದಿನಿಂದ

ಬೆಂಗಳೂರು:'ರೈತರಿಂದ 2 ಲಕ್ಷ ಟನ್ ರಾಗಿ ಹೆಚ್ಚುವರಿಯಾಗಿ ಖರೀದಿಗೆ ಶುಕ್ರವಾರದಿಂದಲೇ (ಮೇ 6) ನೋಂದಣಿ ಆರಂಭಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ತಿಳಿಸಿದರು.

ಕಲಬುರಗಿ ಭೇಟಿ ರದ್ದುಗೊಳಿಸಿದ ಪ್ರಿಯಾಂಕ್

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ವಿಚಾರಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗಿ ದಾಖಲೆ ಹಾಗೂ ಮಾಹಿತಿ ನೀಡುವಂತೆ ಸಿಐಡಿ ಅಧಿಕಾರಿಗಳು ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ಮೂರನೇ ನೋಟಿಸ್ ನೀಡಿದ್ದಾರೆ. ಹೀಗಾಗಿ ಶಾಸಕರು ಕಲಬುರಗಿ ಹಾಗೂ ಚಿತ್ತಾಪುರ ಪ್ರವಾಸ ರದ್ದುಗೊಳಿಸಿದ್ದಾರೆ ಎಂದು ಅವರ ಆಪ್ತ ಸಹಾಯಕ ತಿಳಿಸಿದ್ದಾರೆ. 'ಕಲಬುರಗಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದ್ದ ಆಡಿಯೊ ಬಗ್ಗೆ ಎರಡು ದಿನಗಳ ಒಳಗಾಗಿ ಸಿಐಡಿ ಕಚೇರಿಗೆ ಹಾಜರಾಗಿ ಮಾಹಿತಿ ನೀಡಬೇಕು' ಎಂದು ಸಿಐಡಿ ಡಿವೈಎಸ್ಪಿ ನರಸಿಂಹಮೂರ್ತಿ ಪಿ. ಅವರು ಮೇ 4ರಂದು ಪ್ರಿಯಾಂಕ್ ಅವರಿಗೆ ನೀಡಿರುವ ನೋಟಿಸ್‌ನಲ್ಲಿ ಸೂಚಿಸಿದ್ದಾರೆ.

ಹೈಕೋರ್ಟ್‌ಗೆ ಆರೋಪಿಗಳ ಅರ್ಜಿ

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ನಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಆರೋಪಿಗಳಾದ ಜಾಗೃತ್ ಮತ್ತು ರಚನಾ ಹನುಮಂತ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಸಂಬಂಧ ಪ್ರಕರಣದ 17ನೇ ಆರೋಪಿ ರಚನಾ ಮತ್ತು ಮೊದಲನೇ ಆರೋಪಿ ಎಸ್.ಜಾಗೃತ್ ಪ್ರತ್ಯೇಕ ತಕರಾರು ಅರ್ಜಿ ಸಲ್ಲಿಸಿದ್ದು, ಈ ಅರ್ಜಿಗಳು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠದ ಮುಂದೆ ಗುರುವಾರ ವಿಚಾರಣೆಗೆ ನಿಗದಿಯಾಗಿದ್ದವು. ಇದೇ 19ರಂದು ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ನ್ಯಾಯಪೀಠ ತಿಳಿಸಿದೆ.

'ಭ್ರಷ್ಟಾಚಾರಕ್ಕೇ ವಿಶ್ವಮಾನವ'

ಬೆಂಗಳೂರು: 'ಪಿಎಸ್‌ಐ ನೇಮಕಾತಿ ಹಗರಣದ ಆರೋಪಿ ಅಭ್ಯರ್ಥಿ ರಕ್ಷಣೆಗೆ ಮುಂದಾಗಿರುವ ಉನ್ನತ ಶಿಕ್ಷಣ ಸಚಿವ ಅಶ್ವತ್ಥ್ ನಾರಾಯಣ ಭ್ರಷ್ಟಾಚಾರಕ್ಕೇ ವಿಶ್ವಮಾನವ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ಕೆಇಎ ದೂರು ನೀಡಿದೆ. ಆ ಪ್ರಕರಣದಲ್ಲಿ ಹೆಸರಿರುವ ಕುಲಸಚಿವರು ಯಾರ ಮನೆಗೆ ಎಷ್ಟು ಬಾರಿ ಹೋಗಿದ್ದಾರೆ, ಅವರ ಮತ್ತು ಸಚಿವರ ಒಡನಾಟ ಏನು, ಅವರ ನೇತೃತ್ವದ ಸಂಸ್ಥೆಗಳಲ್ಲಿ ಯಾವ ರೀತಿ ಅಕ್ರಮ ನಡೆಯುತ್ತಿದೆ, ಅಲ್ಲೆಲ್ಲ ವಿಶ್ವದ ನಂಟಿದೆ ಎಂದು ಅವರೇ ಹೇಳುವುದಾದರೆ ಎಲ್ಲ ಭ್ರಷ್ಟಾಚಾರಗಳಿಗೆ ವಿಶ್ವಮಾನವ ಅವರೇ ಅಲ್ಲವೇ' ಎಂದು ಪ್ರಶ್ನಿಸಿದರು.

'ನಮ್ಮ ಪಕ್ಷದ ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ನೋಟೀಸ್ ಜಾರಿ ಮಾಡಿರುವವರು ಮೊದಲು ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ನೋಟೀಸ್ ನೀಡಬೇಕು' ಎಂದು ಆಕ್ರೋಶ ವ್ಯಕ್ತಪಡಿಸಿದ ಶಿವಕುಮಾರ್, 'ತನಿಖಾಧಿಕಾರಿಗಳು ಯಾರಿಗೆಲ್ಲ ನೋಟೀಸ್ ನೀಡಿದ್ದಾರೆ? ಯಾರು ಏನು ಉತ್ತರ ಕೊಟ್ಟಿದ್ದಾರೆ? ಯಾರನ್ನು ಬಿಟ್ಟು ಕಳುಹಿಸಲಾಗಿದೆ? ಮುಂತಾದ ಮಾಹಿತಿಗಳನ್ನು ಬಹಿರಂಗಪಡಿಸಬೇಕು' ಎಂದರು. 'ಪಕ್ಷದ ದಲಿತ ನಾಯಕರಾಗಿರುವ ಪ್ರಿಯಾಂಕ್ ಖರ್ಗೆ ಮೇಲೆ ದಬ್ಬಾಳಿಕೆ ನಡೆಸಿ, ನಮ್ಮ ಬಾಯಿ ಮುಚ್ಚಿಸಲು ಪ್ರಯತ್ನಿಸುತ್ತಿದ್ದೀರಾ' ಎಂದರು. 'ಅವರನ್ನು ಯಾವಾಗ ಸಿಐಡಿ ವಿಚಾರಣೆಗೆ ಕಳುಹಿಸಬೇಕು ಎಂದು ನಮಗೆ ಗೊತ್ತಿದೆ. ಪಕ್ಷದ ವೇದಿಕೆಯಲ್ಲಿ ಈ ಬಗ್ಗೆ ಚರ್ಚಿಸುತ್ತೇವೆ' ಎಂದರು.

ಪಿಎಸ್‌ಐ: 20 ಕೇಂದ್ರಗಳಲ್ಲಿ ಅಕ್ರಮ

ಒಂದನೇ ಪುಟದಿಂದ...

'ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಆರೋಪಿ ಆಗಿದ್ದ ನಾಗೇಶ್, ಬಂಧನ ಭೀತಿಯಲ್ಲಿ ತಲೆಮರೆಸಿಕೊಂಡಿದ್ದ. ನೋಟಿಸ್ ನೀಡಲಾಗಿತ್ತು. ವಿಚಾರಣೆಗೆ ಬಂದಿದ್ದಾಗಲೇ ಈತನನ್ನು ಬಂಧಿಸಲಾಗಿದೆ' ಎಂದರು.

'ಕುಣಿಗಲ್ ತಾಲ್ಲೂಕಿನ ಚಿಕ್ಕಮಾವತ್ತೂರಿನ ನಾಗೇಶ್, ಪತ್ರಿಕೆ-1ರಲ್ಲಿ (ಪ್ರಬಂಧ, ಭಾಷಾಂತರ, ಸಾರಾಂಶ ಬರಹ) 29.5 ಅಂಕ ಹಾಗೂ ಪತ್ರಿಕೆ-2ರಲ್ಲಿ (ಸಾಮಾನ್ಯ ಅಧ್ಯಯನ) 127.875 ಅಂಕ ಪಡೆದಿದ್ದ'.

'ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ 62ನೇ ರ‍್ಯಾಂಕ್ ಪಡೆದಿದ್ದ ಜಿ.ಸಿ.ರಾಘವೇಂದ್ರ, ಒಎಂಆರ್ ತಿದ್ದಿ ಅಕ್ರಮ ಎಸಗಿರುವುದು ಮೇಲ್ನೋಟಕ್ಕೆ ಗೊತ್ತಾಗಿತ್ತು. ಈತನೂ ಹೈಗ್ರೌಂಡ್ಸ್ ಠಾಣೆ ಪ್ರಕರಣದ ಆರೋಪಿ' ಎಂದೂ ಸಿಐಡಿ ಮೂಲಗಳು ಹೇಳಿವೆ.

'ಸಚಿವರ ಸಂಬಂಧಿ'

'ಪಿಎಸ್‌ಐ ಪರೀಕ್ಷೆಯಲ್ಲಿ ಅಕ್ರಮ ಎಸಗಿದ್ದ ಕಾನ್‌ಸ್ಟೆಬಲ್ ಸಿ.ಎಸ್. ನಾಗೇಶ್ ಗೌಡ, ಸಚಿವ ಸಿ.ಎನ್. ಅಶ್ವತ್ಥನಾರಾಯಣ ಅವರ ಸಂಬಂಧಿ' ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೂರಿದ್ದರು.

ನಾಗೇಶ್ ಗೌಡನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವುದಾಗಿ ಸಿಐಡಿ ಮೂಲಗಳು ಹೇಳಿವೆ.

ಸಿಐಡಿ ಕಚೇರಿಯಲ್ಲಿ ಬಂಧನ

ರಾಮನಗರ: ಕುಂಬಳಗೋಡು ಠಾಣೆಯಲ್ಲಿ ಕಾನ್‌ಸ್ಟೆಬಲ್ ಆಗಿದ್ದ ಸೋಮನಾಥ್ ಹಿರೇಮಠ ಅವರನ್ನು ಬೆಂಗಳೂರಿನ ಸಿಐಡಿ ಕಚೇರಿಯಲ್ಲಿ ಬಂಧಿಸಲಾಗಿದೆ. ವಿಜಯಪುರ ಜಿಲ್ಲೆಯ ಸೋಮನಾಥ್, ಎರಡು ವರ್ಷಗಳಿಂದ ಕುಂಬಳಗೋಡು ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಇಲಾಖೆಗೆ ಸೇರುವ ಮುನ್ನ ಉಪನ್ಯಾಸಕರಾಗಿ ಕೆಲಸ ಮಾಡಿದ್ದರು.

ಪಿಎಸ್‌ಐ ನೇಮಕಾತಿಗಾಗಿ ಲಿಖಿತ ಪರೀಕ್ಷೆ ಬರೆದಿದ್ದ ಸೋಮನಾಥ್, ಪತ್ರಿಕೆ-1ರಲ್ಲಿ 28.5 ಅಂಕ ಹಾಗೂ ಪತ್ರಿಕೆ-2ರಲ್ಲಿ 122.25 ಅಂಕ ಪಡೆದಿದ್ದರು. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ 20ನೇ ರ‍್ಯಾಂಕ್ ಗಿಟ್ಟಿಸಿಕೊಂಡಿದ್ದರು. ಇವರ ಒಎಂಆರ್ ಪ್ರತಿಗಳನ್ನು ಗಮನಿಸಿದಾಗ ವ್ಯತ್ಯಾಸ ಕಂಡುಬಂದಿತ್ತು. ಇವರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಸಿಐಡಿ ಪ್ರಕರಣ ದಾಖಲಿಸಿತ್ತು. ಎಸ್ಪಿ ಸಂತೋಷ್ ಬಾಬು ಎದುರು ಸೋಮನಾಥ್ ವಿಚಾರಣೆಗೆ ಹಾಜರಾಗಿದ್ದರು.

ನಾಲ್ವರಿಂದ ₹ 2 ಕೋಟಿ ಸಂಗ್ರಹ ?

ಕಲಬುರಗಿ: 'ಅಕ್ರಮಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ರುದ್ರಗೌಡ ಹಾಗೂ ಸಿಪಿಐ ಸೇರಿಕೊಂಡು, ನಾಲ್ವರು ಅಭ್ಯರ್ಥಿಗಳಿಂದ ₹ 2 ಕೋಟಿ ಪಡೆದಿದ್ದರು. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರು ಬಂದ ತಕ್ಷಣ ಸಿಪಿಐ ಕೈಗೆ ₹ 2 ಕೋಟಿ ಬಂದಿತ್ತು. ಅದರಲ್ಲಿ ರುದ್ರಗೌಡಗೆ ₹ 25 ಲಕ್ಷ ಮಾತ್ರ ನೀಡಲಾಗಿತ್ತು. ಉಳಿದ ₹ 75 ಲಕ್ಷ ವಿಚಾರವಾಗಿ ರುದ್ರಗೌಡ ಹಾಗೂ ಸಿಪಿಐ ನಡುವೆ ಮುಸುಕಿನ ಗುದ್ದಾಟ ಇತ್ತು' ಎಂದು ಮೂಲಗಳು ಹೇಳಿವೆ.

ಪ್ರಕರಣದಲ್ಲಿ ಜಿಲ್ಲೆಯ ಬಿಜೆಪಿ ಮುಖಂಡರೊಬ್ಬರ ಹೆಸರು ಕೇಳಿಬಂದಿದೆ. ನಾಲ್ವರು ಅಭ್ಯರ್ಥಿಗಳನ್ನು ಅವರೇ ರುದ್ರಗೌಡನಿಗೆ ಪರಿಚಯ ಮಾಡಿಸಿದ್ದರೆಂಬು ಗೊತ್ತಾಗಿದೆ.

ದೈಹಿಕ ಸಹಿಷ್ಣುತಾ ಪರೀಕ್ಷೆಯಿಂದ ಹೊರಕ್ಕೆ: ಸದ್ಯ ಬಂಧಿತರಾದ ಆನಂದ ಮೇತ್ರಿ ಅವರಿಗೆ 'ಕೆಎಸ್‌ಆರ್‌ಪಿ ವಿಶೇಷ ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿಗೆ ದೈಹಿಕ ಪರೀಕ್ಷೆ' ನಡೆಸುವ ಜವಾಬ್ದಾರಿ ಹೊರಿಸಲಾಗಿತ್ತು. ಎರಡು ದಿನಗಳ ಹಿಂದೆ ನಡೆದ 70 ಹುದ್ದೆಗಳ ನೇಮಕಾತಿಗೆ ಓಟದ ಉಸ್ತುವಾರಿ ವಹಿಸಲಾಗಿತ್ತು. ಆದರೆ, ಪಿಎಸ್‌ಐ ನೇಮಕಾತಿಯ ಅಕ್ರಮದಲ್ಲಿ ಭಾಗಿಯಾದ ಆರೋಪ ಕೇಳಿಬಂದ ತಕ್ಷಣ; ಹಿರಿಯ ಅಧಿಕಾರಿಗಳು ಅವರನ್ನು ಉಸ್ತುವಾರಿಯಿಂದ ಹೊರಗಿಟ್ಟಿದ್ದರು.

'ಮೇತ್ರಿ ಅವರನ್ನು ಠಾಣೆ ಅಥವಾ ಅವರ ಮನೆ ಹೊರತುಪಡಿಸಿ ಹೊರಗಡೆ ಎಲ್ಲಿಯಾದರೂ ಹಿಡಿಯಿರಿ' ಎಂದು ಹಿರಿಯ ಅಧಿಕಾರಿಯೊಬ್ಬರು ಸಿಐಡಿ ತಂಡಕ್ಕೆ ನಿರ್ದೇಶನ ನೀಡಿದ್ದರು.

₹ 10 ಲಕ್ಷ ಪಡೆದ ಡಿವೈಎಸ್ಪಿ: ಪರೀಕ್ಷೆಯಲ್ಲಿ ನಡೆದ ಅಕ್ರಮದ ಮಾಹಿತಿ ತಿಳಿದುಕೊಂಡ ಡಿವೈಎಸ್ಪಿ ಮಲ್ಲಿಕಾರ್ಜುನ ಸಾಲಿ ಅವರು, ಮೂವರು ಪ್ರಮುಖ ಆರೋಪಿಗಳನ್ನು 'ಬ್ಲ್ಯಾಕ್‌ಮೇಲ್' ಮಾಡಿ ₹ 10 ಲಕ್ಷ ಪಡೆದಿದ್ದಾರೆ ಎಂಬ ಆರೋಪವಿದೆ.

ದಿವ್ಯಾ ಹಾಗರಗಿ, ಬ್ಲೂಟೂತ್ ಬಳಸಿ ಅಕ್ರಮ ನಡೆಸಿದ ರುದ್ರಗೌಡ ಡಿ. ಪಾಟೀಲ ಹಾಗೂ ಒಎಂಆರ್ ಶೀಟ್ ತಿದ್ದಿಸಿದ ಮಂಜುನಾಥ ಮೇಳಕುಂದಿ; ಈ ಮೂವರಿಗೂ ಡಿವೈಎಸ್ಪಿ ಬೆದರಿಕೆ ಹಾಕಿದ್ದರು. 'ನಿಮ್ಮ ಅವ್ಯವಹಾರ ಎಲ್ಲ ನನಗೆ ಗೊತ್ತಿದೆ. ಸುಮ್ಮನಿರಬೇಕೆಂದರೆ ಇಂತಿಷ್ಟು ಹಣ ನೀಡಬೇಕು' ಎಂದು ಕೇಳಿದ್ದಾಗಿ ಮೂಲಗಳು ತಿಳಿಸಿವೆ.

ಪ್ರಕರಣ ಸಂಬಂಧ ನಿವೃತ್ತ ಡಿವೈಎಸ್ಪಿ ಒಬ್ಬರ ಎರಡು ಮೊಬೈಲ್‌ಗಳನ್ನು ಸಿಐಡಿ ಸುಪರ್ದಿಗೆ ಪಡೆದಿದೆ.







ಅವತಾರ ಪುರುಷ
ಸಾಯಿಕುಮಾರ್

ಅಪ್ಪನ ಕಂಠ, ಅಮ್ಮನ ಸಂಸ್ಕಾರ

‘ಪೊಲೀಸ್...’ ಎನ್ನುವ ಶಬ್ದ ಕೇಳಿದೊಡನೆ ನೆನಪಿಗೆ ಬರುವ ನಟ ‘ಡೈಲಾಗ್ ಕಿಂಗ್’ ಸಾಯಿಕುಮಾರ್. ರಂಗಸ್ಥಳದಿಂದ ಆರಂಭವಾದ ಸಾಯಿಕುಮಾರ್ ಅವರ 50 ವರ್ಷದ ಬಣ್ಣದ ಪಯಣ ಇದೀಗ ವೆಬ್‌ಸೀರೀಸ್‌ವರೆಗೂ ಬಂದಿದೆ. ಅವರು ನಟಿಸಿರುವ ‘ಅವತಾರ ಪುರುಷ’ ಇಂದು ತೆರೆ ಕಾಣುತ್ತಿದ್ದು, ತಮ್ಮ ಸಿನಿಪಯಣವನ್ನೊಮ್ಮೆ ‘ಸಿನಿಮಾ ಪುರವಣಿ’ ಜೊತೆ ಮೆಲುಕು ಹಾಕಿದ್ದಾರೆ ಸಾಯಿಕುಮಾರ್...

ಅಭಿಲಾಷ್ ಪಿ.ಎಸ್.

- **ಬಣ್ಣದ ಲೋಕದಲ್ಲಿ ‘ಸುವರ್ಣ’ ವರ್ಷ. ಒಂದು ಫ್ಲ್ಯಾಶ್‌ಬ್ಯಾಕ್‌ನಲ್ಲಿ ಈ ಪಯಣ ನೋಡಿದರೆ...**

ಆಂಧ್ರ ಮೂಲದ ಅಪ್ಪನಿಗೆ (ಪಿ.ಜೆ. ಶರ್ಮ) ಕರುನಾಡ ಅಮ್ಮನಿಗೆ (ಕೃಷ್ಣ ಜ್ಯೋತಿ) ಸಿನಿಮಾ ನಟ–ನಟಿಯರಾಗುವ ಕನಸು. ಅವರ ಪಯಣ ಹೊರಟಿದ್ದು ಚೆನ್ನೈಗೆ. ಅವರಿಬ್ಬರ ಬಾಂಧವ್ಯ ಶುರುವಾಗಿದ್ದೇ ರಂಗಸ್ಥಳದಿಂದ. ತಾಯಿಯ ಗರ್ಭದಲ್ಲಿರುವಾಗಲೇ ನನಗೆ ಸಿನಿಮಾ ಪರಿಚಯವಾಯಿತು ಎನ್ನಬಹುದು. ಅಮ್ಮ ಕನ್ನಡ ಸಿನಿಮಾಗಳಲ್ಲೇ ಹೆಚ್ಚು ನಟಿಸುತ್ತಿದ್ದರು. ಅಪ್ಪ ತೆಲುಗು ಸಿನಿಮಾದಲ್ಲಿ ತಲ್ಲೀನರಾಗಿದ್ದರು. ಅಪ್ಪನಿಗೆ ಹೀರೊ ಆಗುವ ಕನಸಿತ್ತು. ಆದರೆ, ಅವರಿಗೆ ಸಾಧ್ಯವಾಗಲಿಲ್ಲ. ನಂತರದಲ್ಲಿ ಕುಟುಂಬಕ್ಕಾಗಿ ಅಮ್ಮ ನಟನೆಯನ್ನು ಬಿಟ್ಟರು. ನಮ್ಮನ್ನು ಕಲಾವಿದರನ್ನಾಗಿ ಮಾಡುವ ಆಸೆ ಆಕೆಗಿತ್ತು. ಹಿರಿಯ ಮಗನಾಗಿ ಅವರ ಕಷ್ಟಗಳನ್ನು ನೋಡುತ್ತಾ ಬೆಳೆದ ನಾನು, 11ನೇ ವರ್ಷದಲ್ಲಿ (1972 ಅ.20ರಂದು) ದುರ್ಯೋಧನನ ಏಕಪಾತ್ರಾಭಿನಯದ ಮುಖಾಂತರ ರಂಗಸ್ಥಳ ಪ್ರವೇಶಿಸಿದೆ.

ನಾನಿವತ್ತು ಡೈಲಾಗ್ ಕಿಂಗ್ ಎಂದೆನಿಸಿಕೊಳ್ಳಬೇಕಾದರೆ ಅದರ ಹಿಂದೆ ಅಮ್ಮನ ಶ್ರಮವಿದೆ. ಅಪ್ಪ ಧ್ವನಿ ನೀಡಿದರೆ, ಅಮ್ಮ ಸಂಸ್ಕಾರ ತುಂಬಿದರು. ಅಂದಾಜು 1974ರಲ್ಲಿ ‘ದೇವುಡು ಚೇಸಿನ ಪೆಳ್ಳಿ’ ಸಿನಿಮಾದಲ್ಲಿ ಬಾಲನಟನಾಗಿ ನಟಿಸಿದೆ. ನಂತರ ಬಾಲನಟನಾಗಿ ಸತತ ಆರು ಸಿನಿಮಾಗಳನ್ನು ಮಾಡಿದೆ. 1984ರಲ್ಲಿ ಚಿರಂಜೀವಿ ಅವರ ‘ಚಾಲೆಂಜ್’ ಸಿನಿಮಾ ನನ್ನ ಸಿನಿ ಬದುಕಿಗೆ ತಿರುವು ನೀಡಿತು. ನಂತರದ ಜಯಸುಧಾ ಲೀಡ್ ಮಾಡಿದ್ದ ‘ಕಲಿಕಾಲಂ’ ಸಿನಿಮಾ ಸೂಪರ್‌ಹಿಟ್ ಆಯಿತು.

- **ಪೊಲೀಸ್ ಪಾತ್ರವೆಂದರೆ ಸಾಯಿಕುಮಾರ್ ಅನ್ನುವಷ್ಟರ ಮಟ್ಟಿಗೆ ಕನ್ನಡ ಸಿನಿಮಾಗಳಿಂದ ನಿಮಗೊಂದು ಇಮೇಜ್ ಬಂದಿತಲ್ಲವೇ?**

ಹೌದು. ‘ಕಲಿಕಾಲಂ’ ಸಿನಿಮಾ, ಕನ್ನಡದಲ್ಲಿ 1993ರಲ್ಲಿ ‘ಕುಂಕುಮ ಭಾಗ್ಯ’ವಾಗಿ ರಿಮೇಕ್ ಆಯಿತು. ಮೊದಲಿಗೆ ನನಗೆ ಈ ಸಿನಿಮಾದಲ್ಲಿ ಅವಕಾಶ ಸಿಕ್ಕಿರಲಿಲ್ಲ. ಅವಕಾಶ ಕಳೆದುಕೊಂಡ ದುಃಖವನ್ನು ಅಮ್ಮನ ಬಳಿ ತೋಡಿಕೊಂಡಿದ್ದೆ. ‘ನಿನ್ನ ಹಣೆಯಲ್ಲಿ ಬರೆದಿದ್ದರೆ ಖಂಡಿತಾ ಅವಕಾಶ ಸಿಗುತ್ತದೆ’ ಎಂದು ಅಮ್ಮ ಹೇಳಿದ್ದರು. ಇದಾದ ಕೆಲವೇ ದಿನಗಳಲ್ಲಿ ‘ಕುಂಕಮ ಭಾಗ್ಯ’ ನಿರ್ದೇಶಕರಿಂದ ಕರೆ ಬಂತು. ಈ ಸಿನಿಮಾ ಹಿಟ್ ಆದರೂ ಕೊಂಚ ಬೇಸರ ನನಗಿತ್ತು. ಏಕೆಂದರೆ, ಆ ಸಂದರ್ಭದಲ್ಲೇ 500ಕ್ಕೂ ಅಧಿಕ ತೆಲುಗು ಸಿನಿಮಾಗಳಲ್ಲಿ ಬಹುತೇಕ ಸೂಪರ್‌ಸ್ಟಾರ್‌ಗಳಿಗೆ ಡಬ್ಬಿಂಗ್ ಮಾಡಿದ್ದೆ. ಆದರೆ ‘ಕುಂಕುಮ ಭಾಗ್ಯ’ದಲ್ಲಿ ನನ್ನ ಪಾತ್ರಕ್ಕೆ ಬೇರೊಬ್ಬರು ಡಬ್ಬಿಂಗ್ ಮಾಡಿದ್ದರು.

‘ಕುಂಕುಮ ಭಾಗ್ಯ’ ಹಿಟ್ ಆದರೂ ನಂತರ ಹೆಚ್ಚಿನ ಅವಕಾಶ ಬರಲಿಲ್ಲ. ಈ ಚಿಂತೆಯಲ್ಲಿದ್ದಾಗ ಸಿಕ್ಕಿದ ಸಿನಿಮಾ ಓಂ ಪ್ರಕಾಶ್ ಅವರ ‘ಲಾಕಪ್ ಡೆತ್’ (1994). ಕಮರ್ಷಿಯಲ್ ಆಗಿ ಹಿಟ್ ಆದ ಈ ಸಿನಿಮಾ ಕನ್ನಡದಲ್ಲಿ ನನಗೆ ತಿರುವು ನೀಡಿತು. 1996ರಲ್ಲಿ ‘ಪೊಲೀಸ್ ಸ್ಟೋರಿ’ ಬಿಡುಗಡೆಯಾಯಿತು. ಅಷ್ಟೇ... ಬಳಿಕ ಅಗ್ನಿ ಇಮೇಜ್‌ನಲ್ಲೇ ನಾನು ಇದ್ದೇನೆ. ಸುನಿ ನಿರ್ದೇಶನದ ‘ಅವತಾರ ಪುರುಷ’ ಸಿನಿಮಾದಲ್ಲಿ ಭಿನ್ನವಾದ ಪಾತ್ರವೊಂದಕ್ಕೆ ಬಣ್ಣ ಹಚ್ಚಿದ್ದು, ಇದರ ಮೇಲೆ ನಿರೀಕ್ಷೆ ಬಹಳಷ್ಟಿದೆ. ಶರಣ್ ಜತೆಗಿನ ಮೊದಲ ಸಿನಿಮಾ ಇದಾಗಿದೆ.

- **ಸಹೋದರರೆಲ್ಲರಿಗೂ ಧ್ವನಿಯೇ ವರದಾನವಾಯಿತಲ್ಲವೇ?**

ಖಂಡಿತವಾಗಿಯೂ. ಅಪ್ಪನದ್ದು ಬಹಳ ಗಂಭೀರ ಧ್ವನಿ. ರಂಗಸ್ಥಳವೇ ಆ ಧ್ವನಿಯನ್ನು ರೂಪಿಸಲು ಕಾರಣವಾಯಿತು. ಅಪ್ಪನದ್ದು ಕಂಚಿನ ಕಂಠ. ಅವರಿಗೆ ಭಾಷೆಯ ಮೇಲಿದ್ದ ಹಿಡಿತ, ಡಬ್ಬಿಂಗ್‌ಗೆ ಸಹಕಾರಿಯಾಗಿತ್ತು. ನನಗೆ ಕನ್ನಡ ಹಾಗೂ ತೆಲುಗು ಭಾಷೆ ಹೃದಯದ ಬಡಿತದಂತಾಗಿತ್ತು. ರವಿಶಂಕರ್ ಹಾಗೂ ಅಯ್ಯಪ್ಪನಿಗೂ ಇದೇ ಧ್ವನಿ ಜೀವ ನೀಡಿದೆ. ನಮ್ಮೆಲ್ಲರಿಗೂ ಬ್ರೇಕ್ ನೀಡಿದ್ದು ಕರ್ನಾಟಕ.

- **ಪದ ಬಳಕೆಯಲ್ಲಿ ಯಾವುದೇ ಮಡಿವಂತಿಕೆ ನಿಮ್ಮ ಪಾತ್ರಗಳಿಗಿರಲಿಲ್ಲ..**

‘ಪೊಲೀಸ್ ಸ್ಟೋರಿ’ ನನ್ನ ಮೇಲೆ ಹೆಚ್ಚಿನ ಪರಿಣಾಮ ಬೀರಿದ ಸ್ಕ್ರಿಪ್ಟ್. ನರನರಗಳಲ್ಲಿ ಅಗ್ನಿ ಪಾತ್ರ ನನ್ನೊಳಗೆ ತುಂಬಿತ್ತು. ಕಥೆ ಕೇಳುವಾಗಲೇ ನಾನು ಅಗ್ನಿಯಾಗಿದ್ದೆ. ಎನ್‌ಸಿಸಿ ಕೆಡೆಟ್ ಆಗಿದ್ದ ನಾನು, ಈ ಕಥೆ ಕೇಳಿದ ಬಳಿಕ ಮೊದಲು ಮಾಡಿದ್ದೇ ಪೊಲೀಸ್ ಹೇರ್‌ಕಟ್. ಶೂಟಿಂಗ್ ಆದ ಬಳಿಕ ಸೆನ್ಸಾರ್ ಸಂದರ್ಭದಲ್ಲಿ ಏನಾಗುತ್ತದೆಯೋ ಎನ್ನುವ ಭಯವಿತ್ತು. ಆದರೆ ಅಲ್ಲಿನ ಭಾವನಾತ್ಮಕ ಸನ್ನಿವೇಶದ ಜೊತೆಗೆ ಆ ಸಂಭಾಷಣೆ ಸರಾಗವಾಗಿ ಹರಿಯಿತು. ಡೇವಿಡ್, ರವಿ ಶ್ರೀವತ್ಸ, ರಮೇಶ್ ಹೀಗೆ ಹಲವರು ನನಗೆ ಅದ್ಭುತವಾದ ಡೈಲಾಗ್ಸ್ ಬರೆದರು. ‘ಅಗ್ನಿ’ ಪಾತ್ರ ನೋಡಿ ಪೊಲೀಸ್ ಆದವರೂ ಇದ್ದಾರೆ ಎನ್ನುವುದು ನನಗೆ ಹೆಮ್ಮೆ.

- **ಹೀರೊಗಳ ಬದಲಾದ ಪಾತ್ರದ ನೈತಿಕತೆ ಬಗ್ಗೆ ಏನನ್ನುತ್ತೀರಿ?**

ಯೂನಿವರ್ಸಲ್ ಸಿನಿಮಾ ಎಂದು ಮಾಡಿ, ಎಲ್ಲ ಹೀರೊಗಳು ನೆಗೆಟಿವ್ ಶೇಡ್ಸ್ ಮಾಡುತ್ತಿದ್ದಾರೆ. ಜನರಿಗೆ ಒಳ್ಳೆಯದನ್ನು ಮಾಡಲು ಹೀಗೆ ಮಾಡುತ್ತಿದ್ದೇನೆ ಎಂದು ಹೀರೊ ಕೊನೆಯಲ್ಲಿ ಹೇಳುವುದು ಬೇರೆ... ಹೀರೊ ನೆಗೆಟಿವ್ ಶೇಡ್ ಮಾಡಿದರೆ ಆತನನ್ನು ತಿದ್ದುವವರು ಯಾರು? ಪ್ರಸ್ತುತ ಚಿತ್ರಕಥೆಗಳು, ಪಾತ್ರಗಳು, ಕಾನ್ಸೆಪ್ಟ್ ಎಲ್ಲವೂ ಬದಲಾಗಿವೆ. ಸಿನಿಮಾ ತಪ್ಪು ಸಂದೇಶವನ್ನು ಕೊಡಲೇಬಾರದು. ಸ್ವಲ್ಪ ಲಕ್ಷ್ಮಣರೇಖೆ ದಾಟಿದ್ದೇವೆ ಎನಿಸುತ್ತಿದೆ.

- **‘ಗಾಲಿವಾನ’ ವೆಬ್‌ಸಿರೀಸ್ ಅನುಭವ ಹೇಗಿತ್ತು?**

ಅವಕಾಶ ಸಿಗುವುದೇ ಅಪರೂಪ. ಹೀಗಿರುವಾಗ ಸಿಕ್ಕಿದ ಅವಕಾಶ ಕಳೆದುಕೊಳ್ಳಬಾರದು. ನಾನು ತೆರೆ ಮೇಲೆ ಎಷ್ಟು ಹೊತ್ತು ಕಾಣಿಸುತ್ತೇನೆ ಎನ್ನುವುದನ್ನು ಆಧರಿಸಿ ಪಾತ್ರ ಒಪ್ಪಿಕೊಳ್ಳುವುದಿಲ್ಲ. ಸಣ್ಣ ಪಾತ್ರವಾದರೂ ಪರಿಣಾಮಕಾರಿಯಾಗಿರಬೇಕು. ಜೀ5ನಲ್ಲಿ ಬರುತ್ತಿರುವ ತೆಲುಗಿನ ‘ಗಾಲಿವಾನ’ ವೆಬ್‌ಸಿರೀಸ್ ಮೂಲಕ ನಾನೀಗ ಮನೆಮನೆಗೆ ಹೋಗುತ್ತಿದ್ದೇನೆ. ಆ ಕುಟುಂಬದ ಭಾಗವಾಗುತ್ತಿದ್ದೇನೆ. ಕನ್ನಡದಲ್ಲೂ ವೆಬ್‌ಸಿರೀಸ್‌ನಿಂದ ಆಫರ್ ಬರುತ್ತಿವೆ. ❖

‘ಪೊಲೀಸ್ ಸ್ಟೋರಿ’ ತಂಡದಿಂದ ಹೊಸ ಸಿನಿಮಾ

ಪೊಲೀಸ್ ಸ್ಟೋರಿ ಇಮೇಜ್‌ನಿಂದ ಆಚೆ ಬರಲು ಸಾಯಿಕುಮಾರ್ ಅವರಿಗೆ ಇಂದಿಗೂ ಸಾಧ್ಯವಾಗಿಲ್ಲ. ಈ ಕುರಿತು ಪ್ರತಿಕ್ರಿಯೆ ನೀಡಿದ ಅವರು, ‘ಮಲಯಾಳಂ ಚಿತ್ರರಂಗದಿಂದ ಇತ್ತೀಚೆಗಷ್ಟೇ ಒಂದು ಆಫರ್ ಬಂದಿತ್ತು. ಅಲ್ಲೂ ಪೊಲೀಸ್ ಅಧಿಕಾರಿ ಪಾತ್ರ (ನಗುತ್ತಾ). ಹೆಚ್ಚು ಪೊಲೀಸ್ ಪಾತ್ರ ಮಾಡಿದ್ದು ಸಾಯಿಕುಮಾರ್ ಎಂದೇ ದಾಖಲೆ ಆಗಬಹುದು. ಥ್ರಿಲ್ಲರ್ ಮಂಜು ಸಾರಥ್ಯದಲ್ಲಿ ಅದೇ ‘ಪೊಲೀಸ್ ಸ್ಟೋರಿ’ ತಂಡದಿಂದ ‘ನಾಲ್ಕನೇ ಸಿಂಹ’ ಎನ್ನುವ ಶೀರ್ಷಿಕೆಯಡಿ ಸಿನಿಮಾ ಮಾಡಬೇಕು ಎಂದುಕೊಂಡಿದ್ದೇವೆ. ಇದು ಇನ್ನೂ ಅಂತಿಮಗೊಂಡಿಲ್ಲ. 25ನೇ ವರ್ಷಕ್ಕೆ ಮಾಡಬೇಕೆಂದು ಇತ್ತು. ಆದರೆ ಕೋವಿಡ್‌ನಿಂದ ಇದು ಸಾಧ್ಯವಾಗಿಲ್ಲ. ಹೊಸ ಸಿನಿಮಾ ಮಾಡಲು ಪ್ರಯತ್ನಿಸುತ್ತಿದ್ದೇವೆ’ ಎಂದರು.

ಸಿನಿಮಾತು ನೋಡಲು ಈ ಕೋಡ್ ‘ಸ್ಕ್ಯಾನ್’ ಮಾಡಿ
ಪ್ರಜಾವಾಣಿ ನೋಡಿಯೊ



‘Loveಲಿ’ಯಾಗಿ ಕಾಣಿಸಲಿದ್ದಾರೆ ಸಮೀಕ್ಷಾ

ಕಿರುತೆರೆಯಿಂದ ಬೆಳ್ಳಿತೆರೆಗೆ ಹೆಜ್ಜೆ ಇಟ್ಟಿದ್ದ ನಟಿ ಸಮೀಕ್ಷಾ ಇದೀಗ, ನಟ ವಸಿಷ್ಠ ಸಿಂಹ ನಾಯಕನಾಗಿ ನಟಿಸುತ್ತಿರುವ ‘Loveಲಿ’ ಸಿನಿಮಾದಲ್ಲಿ ಪಾತ್ರವೊಂದಕ್ಕೆ ಬಣ್ಣಹಚ್ಚಲಿದ್ದಾರೆ.

‘ಸುಬ್ಬಲಕ್ಷ್ಮೀ ಸಂಸಾರ’ ಧಾರಾವಾಹಿಯಲ್ಲಿ ಶನಾಯಾ ಪಾತ್ರದಲ್ಲಿ ಮಿಂಚಿದ್ದ ಸಮೀಕ್ಷಾ ನಂತರದಲ್ಲಿ ‘ದಿ ಟೆರರಿಸ್ಟ್’ ಸಿನಿಮಾದಲ್ಲಿ ನಟಿ ರಾಗಿಣಿ ತಂಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಪ್ರೀತಂ ಗುಬ್ಬಿ ನಿರ್ದೇಶನದ ‘99’ ಸಿನಿಮಾದಲ್ಲಿ ನಾಯಕಿಯ ಬಾಲ್ಯದ ಪಾತ್ರದಲ್ಲಿ ನಟಿಸಿದ್ದ ಈ ಮಲೆನಾಡಿನ ಬೆಡಗಿ, ನಟ ದಿವಂಗತ ಪುನೀತ್ ನಟನೆಯ ‘ಜೇಮ್ಸ್’ನಲ್ಲೂ ಬಣ್ಣಹಚ್ಚಿದ್ದರು. ‘Loveಲಿ’ ಸಿನಿಮಾದಲ್ಲಿ ಸಮೀಕ್ಷಾ ಕಾರ್ಪೋರೇಟ್ ಹುಡುಗಿಯಾಗಿ ಕಾಣಿಸಿಕೊಳ್ಳಲಿದ್ದಾರೆ.

‘ಮಫ್ತಿ’ ನಿರ್ದೇಶಕ ನರ್ತನ್ ಜೊತೆ ಕಾರ್ಯನಿರ್ವಹಿಸಿ ಅನುಭವವಿರುವ ಚೇತನ್ ಕೇಶವ್ ‘Loveಲಿ’ಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಇದೊಂದು ಪ್ರೇಮಕಥೆಯಾಗಿದ್ದು, ಜೊತೆಗೆ ರೌಡಿಸಂನ ವಿಭಿನ್ನ ಕಥಾಹಂದರವನ್ನು ಒಳಗೊಂಡಿದೆ. ಎಂ. ಆರ್. ರವೀಂದ್ರ ಕುಮಾರ್ ನಿರ್ಮಾಣ, ಅನೂಪ್ ಸೀಳಿನ್ ಸಂಗೀತ, ಅಶ್ವಿನ್ ಕೆನೆಡಿ ಛಾಯಾಗ್ರಹಣ ಸಿನಿಮಾಕ್ಕಿದೆ. ಮೇ 4ರಿಂದ ಬೆಂಗಳೂರು ಸುತ್ತಮುತ್ತ ಸಿನಿಮಾದ ಚಿತ್ರೀಕರಣ ಆರಂಭವಾಗಲಿದೆ. ❖

ಇದೇ 13ರಂದು ಜನತಾ ಜಲಧಾರೆ ಸಮಾರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಪ್ರಿಲ್ 16ರ ಹನುಮ ಜಯಂತಿಯಂದು ಜೆಡಿಎಸ್ ಆರಂಭಿಸಿದ ಜನತಾ ಜಲಧಾರೆ ಕಾರ್ಯಕ್ರಮದ ಸಮಾರೋಪ ಸಮಾವೇಶ ಇದೇ 13ರಂದು ನೆಲಮಂಗಲದ ಟೋಲ್ ಪ್ಲಾಜಾ ಬಳಿ ನಡೆಯಲಿದೆ.

ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಸಮ್ಮುಖದಲ್ಲಿ ಗುರುವಾರ ನಡೆದ ಪಕ್ಷದ ಪ್ರಮುಖರ ಸಮಿತಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

ಸಭೆ ಬಳಿಕ ಮಾತನಾಡಿದ ಪಕ್ಷದ ಪ್ರಮುಖರ ಸಮಿತಿಯ ಅಧ್ಯಕ್ಷ ಬಂಡೆಪ್ಪ ಕಾಶೆಂಪೂರ, ಜೆಡಿಎಸ್‌ಗೆ ಐದು ವರ್ಷ ಪೂರ್ಣಾವಧಿ ಅಧಿಕಾರ ನೀಡಿದರೆ ಎಲ್ಲ ನೀರಾವರಿ ಯೋಜನೆಗಳನ್ನೂ ಪೂರ್ಣಗೊಳಿಸುತ್ತೇವೆ ಎಂಬ ವಾಗ್ದಾನದೊಂದಿಗೆ ಶುರುವಾಗಿರುವ ಜಲಧಾರೆ ಕಾರ್ಯಕ್ರಮ 184 ವಿಧಾನಸಭೆ ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ. 15 ಗಂಗಾರಥಗಳು ಸಂಚರಿಸುತ್ತಾ ಜನರಲ್ಲಿ ಜಾಗೃತಿ ಮೂಡಿಸುತ್ತಿವೆ. ಗಂಗಾರಥಗಳ ಮೂಲಕ ರಾಜ್ಯದ ಎಲ್ಲ ಜೀವನದಿಗಳಲ್ಲಿ ಸಂಗ್ರಹಿಸಿರುವ ಪುಣ್ಯಜಲವನ್ನು ಒಂದು ಬೃಹತ್ ಕಲಶಕ್ಕೆ ತುಂಬಿಸಿ ಪೂಜೆ ನೆರವೇರಿಸಲಾಗುವುದು ಎಂದರು. ಅಂದು ಸಂಜೆ 4ಗಂಟೆಗೆ ಸಮಾವೇಶ ಆರಂಭವಾಗಲಿದ್ದು, ಐದು ಲಕ್ಷಕ್ಕಿಂತ ಹೆಚ್ಚು ಜನರು ಸೇರಲಿದ್ದಾರೆ. ಕೊನೆಯಲ್ಲಿ ಗಂಗಾ ಪೂಜೆ ನೆರವೇರಿಸಿದ ಬಳಿಕ ಗಂಗಾರತಿ ನಡೆಯಲಿದೆ. ಇದಕ್ಕಾಗಿ ವಾರಾಣಸಿಯಿಂದ ಪಂಡಿತರು ಬರಲಿದ್ದಾರೆ ಎಂದರು.

ವಾಯವ್ಯ ಕ್ಷೇತ್ರಕ್ಕೆ ಲೋಣಿ ಅಭ್ಯರ್ಥಿ

ವಾಯವ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಚಂದ್ರಶೇಖರ ಲೋಣಿ ಕಣಕ್ಕೆ ಇಳಿಯಲಿದ್ದಾರೆ. ಪಕ್ಷದ ಪ್ರಮುಖರ ಸಮಿತಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

‘ಯಡಿಯೂರಪ್ಪ ಮನೆಗೆ ಹೋದ್ರು, ನೀವೂ ಹೋಗೋದು ಬೇಡ’

ರಾಮದುರ್ಗ (ಬೆಳಗಾವಿ ಜಿಲ್ಲೆ): ‘ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಹಿಂದುಳಿದ ವರ್ಗ 2ಎ ಮೀಸಲಾತಿ ನೀಡಲು ಒಪ್ಪಿದ್ದ ಹಿಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಭರವಸೆ ಈಡೇರಿಸದೆ ಮನೆಗೆ ಹೋದರು. ಕೊಡದಿದ್ದರೆ ನೀವೂ ಹೋಗುತ್ತೀರಿ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಎಚ್ಚರಿಕೆ ನೀಡಿದರು.

ಸಮಾಜಕ್ಕೆ ಹಿಂದುಳಿದ ವರ್ಗ 2ಎ ಮೀಸಲಾತಿಗೆ ಆಗ್ರಹಿಸಿ ಗುರುವಾರ ಇಲ್ಲಿ ನಡೆದ ಬೃಹತ್ ಪ್ರತಿಭಟನಾ ಸಮಾವೇಶ– ‘ಶರಣು ಶರಣಾರ್ಥಿ ಮತ್ತು ಬೈಕ್ ರ‍್ಯಾಲಿ’ ಉದ್ಘಾಟಿಸಿ ಅವರು ಮಾತನಾಡಿದರು.

‘ನೀವು (ಬೊಮ್ಮಾಯಿ) ಪ್ರತಿನಿಧಿಸುವ ಕ್ಷೇತ್ರದಲ್ಲಿ ನಮ್ಮ ಜಾತಿಯವರದ್ದು 55 ಸಾವಿರ ಮತಗಳಿವೆ. ಅದು ಗಮನದಲ್ಲಿರಲಿ’ ಎಂದು ಎಚ್ಚರಿಸಿದರು.

‘ಮೀಸಲಾತಿ ನೀಡುವುದಾಗಿ ಮುಖ್ಯಮಂತ್ರಿ ಒಪ್ಪಿದ್ದಾರೆ. 6 ತಿಂಗಳು ಸಮಯ ಕೇಳಿದ್ದಾರೆ. ಸಮಿತಿ ರಚಿಸಿದ್ದಾರೆ. ಯಡಿಯೂರಪ್ಪ ಹರಿಹರದವರ ಮಾತು ಕೇಳಿ ಹೋದರು; ನೀವು ಕಿವಿ ಕಚ್ಚುವವರ ಮಾತು ಕೇಳಿ ಹೋಗುವುದು ಬೇಡ’ ಎಂದು ಕಿವಿಮಾತು ಹೇಳಿದರು.

ನೇತೃತ್ವ ವಹಿಸಿದ್ದ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ‘ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವ ವಿಚಾರದಲ್ಲಿ ಸರ್ಕಾರಗಳು ಕೇವಲ ಮನವಿ ಸ್ವೀಕರಿಸಿ ಕೈಬಿಡುತ್ತಿವೆ. ಈಗ 14 ದಿನಗಳ ಕೂಡಲಸಂಗಮದ ಸತ್ಯಾಗ್ರಹದ ನಂತರ ‘ಮಾಡು ಇಲ್ಲವೆ ಮಡಿ’ ಮಾದರಿಯಲ್ಲಿ ಮೀಸಲಾತಿ ಹೋರಾಟ ತೀವ್ರಗೊಳಿಸಲಾಗಿದೆ’ ಎಂದರು.

ರಾಣಾ ದಂಪತಿ ಜೈಲಿನಿಂದ ಬಿಡುಗಡೆ

ಮುಂಬೈ(ಪಿಟಿಐ): ದೇಶದ್ರೋಹ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ಪಕ್ಷೇತರ ಸಂಸದೆ ನವನೀತ್ ಕೌರ್ ಹಾಗೂ ಅವರ ಪತಿ ಶಾಸಕ ರವಿ ರಾಣಾ ಅವರು ಮುಂಬೈನ ಪ್ರತ್ಯೇಕ ಜೈಲುಗಳಿಂದ ಗುರುವಾರ ಬಿಡುಗಡೆಯಾದರು.

ಕೌರ್ ಮತ್ತು ರವಿ ಅವರಿಗೆ ಬುಧವಾರವೇ ಜಾಮೀನು ಸಿಕ್ಕಿತ್ತು. ಆದರೆ ಬಿಡುಗಡೆಯ ಆದೇಶದ ದಾಖಲೆಗಳು ಸಕಾಲದಲ್ಲಿ ಬೈಕುಲಾ ಜೈಲಿನ ಅಧಿಕಾರಿಗಳಿಗೆ ತಲುಪದ ಕಾರಣ ಅವರ ಬಿಡುಗಡೆ ವಿಳಂಬವಾಗಿತ್ತು. ನವನೀತ್ ಅವರು ಬೈಕುಲ್ಲಾದ ಮಹಿಳಾ ಕಾರಾಗೃಹದಿಂದ ಬಿಡುಗಡೆಯಾದರೆ, ರವಿ ನವಿ ಮುಂಬೈನಲ್ಲಿರುವ ತಲೋಜಾ ಜೈಲಿನಿಂದ ಬಿಡುಗಡೆಯಾದರು. ನವನೀತ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅವರ ಪರ ವಕೀಲರು ತಿಳಿಸಿದರು.


ದೇಶದ್ರೋಹ ಮತ್ತು ವಿವಿಧ ಸಮುದಾಯಗಳ ನಡುವೆ ದ್ವೇಷ ಹರಡಿದ ಪ್ರಕರಣದಡಿ ರಾಣಾ ದಂಪತಿಯನ್ನು ಏಪ್ರಿಲ್ 14 ರಂದು ಬಂಧಿಸಲಾಗಿತ್ತು.

‘5 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರಯಾಣಕ್ಕೆ ಅವಕಾಶ’

ಚೆನ್ನೈ (ಪಿಟಿಐ): ಸರ್ಕಾರಿ ಬಸ್ಸುಗಳಲ್ಲಿ 5 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸುವುದಾಗಿ ಗುರುವಾರ ತಮಿಳುನಾಡು ಸರ್ಕಾರ ಘೋಷಿಸಿದೆ.

ಸಾರಿಗೆ ಸಂಸ್ಥೆಗಳ ಆದಾಯವನ್ನು ಹೆಚ್ಚಿಸಲು ಪ್ರಾಯೋಗಿಕವಾಗಿ ದೂರ ಪ್ರಯಾಣದ ಬಸ್‌ಗಳಲ್ಲಿ ಪಾರ್ಸೆಲ್ ಮತ್ತು ಕೊರಿಯರ್ ಸೇವೆಗಳಿಗೆ ಶುಲ್ಕ ವಿಧಿಸಲಾಗುತ್ತದೆ. ಹಾಗೆಯೇ ಎಲ್ಲಾ ಸಾರ್ವಜನಿಕ ಸಾರಿಗೆಗಳಲ್ಲಿ ಸ್ವಯಂಚಾಲಿತ ಟಿಕೆಟ್ ವ್ಯವಸ್ಥೆಯನ್ನು ಪರಿಚಯಿಸಲಾಗುತ್ತದೆ. ಪ್ರಯಾಣಿಕರ ಸಮಸ್ಯೆಗಳನ್ನು ಆಲಿಸಲು ಕುಂದುಕೊರತೆ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ ಎಂದು ಸಾರಿಗೆ ಸಚಿವ ಎಸ್.ಎಸ್.ಶಿವಶಂಕರ್ ವಿಧಾನಸಭೆಯಲ್ಲಿ ಹೇಳಿದರು.

5 ಶಿಖರವನ್ನೇರಿದ ಮೊದಲ ಭಾರತೀಯ ಮಹಿಳೆ ಪ್ರಿಯಾಂಕಾ



ಪ್ರಿಯಾಂಕಾ ಮೋಹಿತೆ

ಮುಂಬೈ(ಪಿಟಿಐ): ಮಹಾರಾಷ್ಟ್ರದ ಸತಾರ ಮೂಲದ ಪ್ರಿಯಾಂಕಾ ಮೋಹಿತೆ (30) ಅವರು ಗುರುವಾರ ಕಾಂಚನಗಂಗಾ ಶಿಖರವನ್ನೇರಿದ್ದಾರೆ. ಈ ಮೂಲಕ 8,000 ಮೀಟರ್‌ಗಿಂತ ಹೆಚ್ಚಿನ ಎತ್ತರದ ಐದು ಶಿಖರವನ್ನು ಏರಿದ ಮೊದಲ ಭಾರತೀಯ ಮಹಿಳೆ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

ತೇನ್‌ಸಿಂಗ್ ನೋರ್ಗೆ ಸಾಹಸ ಪ್ರಶಸ್ತಿ ಪುರಸ್ಕೃತೆ ಪ್ರಿಯಾಂಕಾ ಅವರು ಗುರುವಾರ ಸಂಜೆ 4.52ಕ್ಕೆ ವಿಶ್ವದ ಮೂರನೇ ಅತಿ ಎತ್ತರದ ಶಿಖರ ಕಾಂಚನಗಂಗಾದ (8,586 ಮೀ) ಪರ್ವತಾರೋಹಣವನ್ನು ಪೂರ್ಣಗೊಳಿಸಿದ್ದಾರೆ.

'ಒಳನುಸುಳುವಿಕೆ, ಕಳ್ಳಸಾಗಣೆ ತಡೆಯುವುದು ಕಷ್ಟ'

ಕೋಲ್ಕತ್ತಾ (ಪಿಟಿಐ): 'ಸ್ಥಳೀಯ ಆಡಳಿತದ ಬೆಂಬಲವಿಲ್ಲದೆ ಒಳನುಸುಳುವಿಕೆ ಹಾಗೂ ಕಳ್ಳಸಾಗಣೆ ತಡೆಯುವುದು ಕಷ್ಟ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಉತ್ತರ 24 ಪರಗಣ ಜಿಲ್ಲೆಯಲ್ಲಿ ಬಿಎಸ್‌ಎಫ್ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಗಡಿಗಳು ಅಭೇದ್ಯವಾಗಿರುವಂತೆ ಬಿಎಸ್‌ಎಫ್ ಯೋಧರು ನೋಡಿಕೊಳ್ಳಬೇಕು. ಗಡಿಗಳ ರಕ್ಷಣೆ ಅವರ ಸಾಂವಿಧಾನಿಕ ಹಕ್ಕು. ಸ್ಥಳೀಯ ಬೆಂಬಲವಿಲ್ಲದೇ ಒಳನುಸುಳುವಿಕೆ ಹಾಗೂ ಕಳ್ಳಸಾಗಣೆಯನ್ನು ತಡೆಯುವುದು ಕಷ್ಟ. ಸಾರ್ವಜನಿಕರ ಒತ್ತಡದಿಂದ, ಸ್ಥಳೀಯ ಅಧಿಕಾರಿಗಳು ಬಲವಂತವಾಗಿ ಸಹಾಯ ಮಾಡುವಂತಹ ರಾಜಕೀಯ ಪರಿಸ್ಥಿತಿ ಬರಬಹುದು' ಎಂದರು.

ಅಮಿತ್ ಶಾ ಹೇಳಿಕೆಗೆ ಪ್ರತಿಕ್ರಿಯಿಸಿರುವ ತೃಣಮೂಲ ಕಾಂಗ್ರೆಸ್, 'ಗಡಿಗಳನ್ನು ರಕ್ಷಿಸುವುದು ಬಿಎಸ್‌ಎಫ್ ಕರ್ತವ್ಯ. ಅಮಿತ್ ಶಾ ಇತರರ ಮೇಲೆ ಜವಾಬ್ದಾರಿಯನ್ನು ಹಾಕಲು ಪ್ರಯತ್ನಿಸುತ್ತಿದ್ದಾರೆ' ಎಂದಿದೆ.

2020–2021ರಲ್ಲಿ ಭಾರತದಲ್ಲಿ 47 ಲಕ್ಷ ಜನರ ಸಾವು ● ಡಬ್ಲ್ಯುಎಚ್‌ಒ ವರದಿಗೆ ಭಾರತದ ಆಕ್ಷೇಪ

ಕೋವಿಡ್‌ನಿಂದ 1.5 ಕೋಟಿ ಸಾವು



ವಿಶ್ವಸಂಸ್ಥೆ (ರಾಯಿಟರ್ಸ್): ಕೋವಿಡ್ ಸೋಂಕು ಮತ್ತು ಅದಕ್ಕೆ ಸಂಬಂಧಿಸಿದ ಪರಿಣಾಮಗಳಿಂದ 2020 ಮತ್ತು 2021ರಲ್ಲಿ ವಿಶ್ವದಾದ್ಯಂತ ಸುಮಾರು 1.5 ಕೋಟಿ ಜನರು ಮೃತಪಟ್ಟಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಅಂದಾಜು ಮಾಡಿದೆ.

ಗುರುವಾರ ಈ ಕುರಿತ ವರದಿ ಬಿಡುಗಡೆ ಮಾಡಿದ್ದು, 2021ರ ಅಂತ್ಯದ ವೇಳೆಗೆ ಕೋವಿಡ್‌ಗೆ ಸಂಬಂಧಿಸಿ 1.49 ಕೋಟಿ ಸಾವು ಸಂಭವಿಸಿವೆ ಎಂದು ತಿಳಿಸಿದೆ. ಇದು, ಈ ಮೊದಲು ಅಧಿಕೃತವಾಗಿ ಬಿಡುಗಡೆ ಮಾಡಲಾಗಿದ್ದ ಸಂಖ್ಯೆಗಿಂತಲೂ ಬಹುತೇಕ 3 ಪಟ್ಟು ಹೆಚ್ಚಿದೆ.

ವಿಶ್ವ ಆರೋಗ್ಯ ಸಂಸ್ಥೆಯು ಅಂದಾಜು ಮಾಡಿರುವಂತೆ ಈ ಸಾವುಗಳು ಪ್ರತ್ಯಕ್ಷವಾಗಿ ಕೋವಿಡ್‌ನಿಂದ ಮತ್ತು ಪರೋಕ್ಷವಾಗಿ ಆರೋಗ್ಯ ಸೇವೆ ವ್ಯತ್ಯಯ, ಕೋವಿಡ್ ಅಲೆಯಿಂದಾದ ಪ್ರತಿಕೂಲ ಪರಿಣಾಮಗಳಿಂದ ಸಂಭವಿಸಿದ್ದಾಗಿ ವಿವರಿಸಿದೆ.

ಕೆಲ ರಾಷ್ಟ್ರಗಳಲ್ಲಿ ಸಾವುಗಳ ಸಂಖ್ಯೆಯನ್ನು ಸಮರ್ಪಕವಾಗಿ ದಾಖಲಿಸದಿರುವುದು ಈಗ ಸಂಖ್ಯೆ ಏರುಮುಖವಾಗಲು ಕಾರಣ. ಕೋವಿಡ್ ಸೋಂಕಿಗಿಂತ ಮೊದಲೂ ವಿಶ್ವಾದ್ಯಂತ ಪ್ರತಿ 10ರಲ್ಲಿ ಆರು ಸಾವುಗಳು ದಾಖಲಾಗುತ್ತಿರಲಿಲ್ಲ ಎಂದು ವರದಿ ತಿಳಿಸಿದೆ.

ವರದಿಯ ಪ್ರಕಾರ, ಕೋವಿಡ್ ಸೋಂಕಿನ ಪರಿಣಾಮ ಉತ್ತುಂಗದಲ್ಲಿ ಇದ್ದ 2021ರ ಮೇ ಮತ್ತು ಜೂನ್ ತಿಂಗಳಲ್ಲಿ ಭಾರತದಲ್ಲಿ ಸುಮಾರು 47 ಲಕ್ಷ ಜನರು ಮೃತಪಟ್ಟಿದ್ದಾರೆ. ಈ ಪೈಕಿ ಅವರ ಗುರುತಿಸಲಾದ ಅರ್ಧದಷ್ಟು ಸಾವುಗಳು ಭಾರತಕ್ಕೆ ಸಂಬಂಧಿಸಿದ್ದಾಗಿವೆ.

ಆದರೆ, ಭಾರತ ಸರ್ಕಾರವು 2020ರಿಂದ ಡಿಸೆಂಬರ್ 2021ರ ಅವಧಿಯಲ್ಲಿ 4.80 ಲಕ್ಷ ಜನರು ಮೃತಪಟ್ಟಿದ್ದಾರೆ ಎಂದು ಪ್ರಕಟಿಸಿದೆ.

'ಕೋವಿಡ್ ಸಾವುಗಳಿಗೆ ಸಂಬಂಧಿಸಿ ಭಾರತ ಈ ವಾರ ಹೊಸದಾಗಿ ಒದಗಿಸಿರುವ ಅಂಕಿ ಅಂಶಗಳನ್ನು ಇನ್ನೂ ಪರಿಶೀಲಿಸಬೇಕಿದೆ' ಎಂದು ಡಬ್ಲ್ಯುಎಚ್‌ಒ ತಿಳಿಸಿದೆ. ಹೆಚ್ಚಿನ ಸಾವುಗಳು ಆಗ್ನೇಯ ಏಷ್ಯಾ, ಯುರೋಪ್ ಮತ್ತು ಅಮೆರಿಕದಲ್ಲಿ ಸಂಭವಿಸಿವೆ ಎಂದು ವರದಿ ಉಲ್ಲೇಖಿಸಿದೆ.

ಡಬ್ಲ್ಯುಎಚ್‌ಒ ಮುಖ್ಯಸ್ಥ ಟೆಡ್ರೊಸ್ ಅಧಾನೊಮ್ ಫೆಬ್ರೆಯೆಸಸ್ ವರದಿ ಬಿಡುಗಡೆಗೊಳಿಸಿ, 'ಅಂಕಿ ಅಂಶಗಳು ಸಮಚಿತ್ತದಿಂದ ಕೂಡಿವೆ' ಎಂದು ಪ್ರತಿಪಾದಿಸಿದರು. 'ಭವಿಷ್ಯದಲ್ಲಿ ಆರೋಗ್ಯ ಮೂಲಸೌಕರ್ಯ ಉತ್ತಮಪಡಿಸಲು ದೇಶಗಳು ಹೆಚ್ಚಿನ ಆದ್ಯತೆ ನೀಡಬೇಕಿದೆ' ಎಂದು ಹೇಳಿದರು.

2020ರ ಜನವರಿಯಿಂದ 2021ರ ಅಂತ್ಯದವರೆಗೆ 1.33 ಕೋಟಿಯಿಂದ 1.66 ಕೋಟಿ ಜನರು ಸತ್ತಿದ್ದು, ಕೋವಿಡ್ ಸ್ಥಿತಿ ಇದಕ್ಕೆ ಪ್ರತ್ಯಕ್ಷ, ಪರೋಕ್ಷವಾಗಿ ಕಾರಣವಾಗಿದೆ ಎಂದು ಡಬ್ಲ್ಯುಎಚ್‌ಒ ನಿಯೋಜಿಸಿದ್ದ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ವರದಿ ರೂಪಿಸಲು ಡಬ್ಲ್ಯುಎಚ್‌ಒ ರಚಿಸಿದ್ದ ಅಂತರರಾಷ್ಟ್ರೀಯ ಪರಿಣತರ ತಂಡವು, ಅಂಕಿ ಅಂಶ ಕುರಿತು ತಿಂಗಳು ಕಾಲ ಕೆಲಸ ಮಾಡಿದೆ. ರಾಷ್ಟ್ರೀಯ ಮತ್ತು ಸ್ಥಳೀಯ ಮಟ್ಟದ ಅಂಕಿ ಅಂಶಗಳನ್ನು ಕ್ರೋಡೀಕರಿಸಿ ವಿಶ್ಲೇಷಿಸಿದೆ. ಈ ಮಾದರಿಯನ್ನೇ ಭಾರತ ತೀವ್ರವಾಗಿ ಆಕ್ಷೇಪಿಸಿದೆ.

ಪ್ರತ್ಯೇಕವಾಗಿ ನಡೆದಿರುವ 'ಇತರೆ ಸ್ವತಂತ್ರ ಅಧ್ಯಯನಗಳಲ್ಲಿ ಕೂಡಾ ಸಾವಿನ ಸಂಖ್ಯೆಯು ಭಾರತ ಸರ್ಕಾರ ಹೇಳಿದ್ದಕ್ಕಿಂತಲೂ ಹೆಚ್ಚಾಗಿದೆ ಎಂದು ಪ್ರತಿಪಾದಿಸಿವೆ. ವಿಜ್ಞಾನದಲ್ಲಿ ಪ್ರಕಟವಾದ ವರದಿಯೊಂದರ ಪ್ರಕಾರ, ಭಾರತದಲ್ಲಿ ಕೋವಿಡ್‌ನಿಂದ ಸುಮಾರು 30 ಲಕ್ಷ ಜನರು ಸತ್ತಿದ್ದಾರೆ.

ಡಬ್ಲ್ಯುಎಚ್‌ಒ ಅಂಕಿ ಅಂಶ ವಿಭಾಗದ ಸಹಾಯಕ ನಿರ್ದೇಶಕ ಸಮಿರಾ ಅಸ್ಮಾ ಅವರು, 'ಈ ವರದಿಯು ಸಾರ್ವಜನಿಕ ಆರೋಗ್ಯದ ಜೀವ. ಕೋವಿಡ್ ಸಂಕಷ್ಟದಲ್ಲಿ ಏನಾಯಿತು ಎಂಬುದನ್ನು ವಿಶ್ಲೇಷಿಸಿ, ಅದರಿಂದ ಪಾಠ ಕಲಿಯಬೇಕಾಗಿದೆ' ಎಂದರು.

ಹೋಲಿಕೆಗಾಗಿ 1918ರಲ್ಲಿ ಕಾಣಿಸಿಕೊಂಡಿದ್ದ ಸ್ಪ್ಯಾನಿಷ್ ಫ್ಲೂ ಸೋಂಕಿನಿಂದ ಸುಮಾರು 5 ಕೋಟಿ ಜನರು ವಿಶ್ವದಾದ್ಯಂತ ಮೃತಪಟ್ಟಿದ್ದರೆ, 1980ರಲ್ಲಿ ಎಚ್‌ಐವಿ ಕಾಣಿಸಿಕೊಂಡಾಗಿನಿಂದ ಇಲ್ಲಿಯವರೆಗೂ ಸುಮಾರು 3.6 ಕೋಟಿ ಜನರು ಮೃತಪಟ್ಟಿದ್ದಾರೆ.

ವರದಿ ಪ್ರಶ್ನಾರ್ಹ –ಭಾರತದ ತಕರಾರು

ನವದೆಹಲಿ (ಪಿಟಿಐ): ಕೋವಿಡ್ ಸಾವುಗಳಿಗೆ ಸಂಬಂಧಿಸಿದ ಡಬ್ಲ್ಯುಎಚ್‌ಒ ವರದಿಯನ್ನು ಭಾರತ ತೀಕ್ಷ್ಣವಾಗಿ ಆಕ್ಷೇಪಿಸಿದೆ. 'ಸಾವಿನ ಪ್ರಮಾಣವನ್ನು ಅಂದಾಜಿಸಲು ಡಬ್ಲ್ಯುಎಚ್‌ಒ ಅನುಸರಿಸಿರುವ ಮಾದರಿ ಹಾಗೂ ಅಂಕಿ-ಅಂಶಗಳ ಸಂಗ್ರಹ ಕ್ರಮವು ಪ್ರಶ್ನಾರ್ಹವಾದವು' ಎಂದು ಹೇಳಿದೆ.

ಭಾರತದಲ್ಲಿ ಕೋವಿಡ್‌ನಿಂದಾಗಿ 47 ಲಕ್ಷ ಜನರು ಮೃತಪಟ್ಟಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಇದು, ಸರ್ಕಾರ ಅಧಿಕೃತವಾಗಿ ಘೋಷಿಸಿದ್ದಕ್ಕಿಂತಲೂ ಬಹುತೇಕ 10 ಪಟ್ಟು ಹೆಚ್ಚಾಗಿದೆ.

'ಸಾವಿನ ಪ್ರಮಾಣ ಅಂದಾಜಿಸಲು ಡಬ್ಲ್ಯುಎಚ್‌ಒ ಮಾದರಿಯನ್ನು ಭಾರತ ನಿರಂತರವಾಗಿ ಆಕ್ಷೇಪಿಸುತ್ತಿದೆ. ತೀವ್ರ ಆಕ್ಷೇಪದ ನಂತರವೂ ಸಂಬಂಧಿತ ಅಂದಾಜು ವರದಿಯನ್ನು ವಿಶ್ವ ಆರೋಗ್ಯ ಸಂಸ್ಥೆ ಬಿಡುಗಡೆ ಮಾಡಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಹೇಳಿಕೆ ನೀಡಿದೆ.

ಡಬ್ಲ್ಯುಎಚ್‌ಒ ಸಾಮಾನ್ಯ ಸಭೆ ಹಾಗೂ ಇತರ ಪ್ರಮುಖ ವೇದಿಕೆಗಳಲ್ಲೂ ಭಾರತವು ಈ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸುವ ಸಾಧ್ಯತೆಯಿದೆ.

'ಸಾವುಗಳಿಗೆ ಸಂಬಂಧಿಸಿದಂತೆ ನಾಗರಿಕ ನೋಂದಣಿ ವ್ಯವಸ್ಥೆಯಿಂದ (ಸಿಆರ್‌ಎಸ್) ಅಧಿಕೃತ, ವಿಶ್ವಸನೀಯ ಅಂಕಿ ಅಂಶಗಳು ಲಭ್ಯವಿವೆ. ಹೀಗಾಗಿ, ಹೆಚ್ಚುವರಿ ಸಾವುಗಳನ್ನು ಬಿಂಬಿಸಲು ಗಣಿತ ಮಾದರಿಯನ್ನು ಅನುಸರಿಸಬಾರದು' ಎಂದು ಭಾರತ ಬಲವಾಗಿ ಪ್ರತಿಪಾದಿಸಿದೆ.

ನಟಿಗೆ ಬೆದರಿಕೆ: ನಿರ್ಮಾಪಕನ ಬಂಧನ

ತಿರುವನಂತಪುರ(ಪಿಟಿಐ): ಮಲಯಾಳ ನಟಿ ಮಂಜು ವಾರಿಯರ್ ಅವರಿಗೆ ಬೆದರಿಕೆಯೊಡ್ಡಿದ ಆರೋಪದಲ್ಲಿ ಚಿತ್ರ ನಿರ್ಮಾಪಕ ಸನಲ್ ಕುಮಾರ್ ಶಶಿಧರನ್ ಅವರನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ಅಪಪ್ರಚಾರ ಮಾಡುವ ಮೂಲಕ ತಮ್ಮ ಘನತೆಗೆ ಧಕ್ಕೆ ತಂದಿದ್ದಾರೆ ಹಾಗೂ ಬೆದರಿಕೆಯೊಡ್ಡಿದ್ದಾರೆ ಎಂದು ಆರೋಪಿಸಿ ಮಂಜು ವಾರಿಯರ್ ನೀಡಿರುವ ದೂರಿನ ಅನ್ವಯ ಸನಲ್ ಅವರನ್ನು ಕೊಚ್ಚಿಯಲ್ಲಿ ಬಂಧಿಸಲಾಗಿದೆ. ಈ ಬಗ್ಗೆ ಎಲಮಕ್ಕರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಹೊಸ ಪಕ್ಷ ಸ್ಥಾಪನೆ ಸದ್ಯಕ್ಕೆ ಇಲ್ಲ: ಪ್ರಶಾಂತ್ ಕಿಶೋರ್

ಬಿಹಾರದಲ್ಲಿ ಪಾದಯಾತ್ರೆಗೆ ನಿರ್ಧಾರ

ಪಟ್ನಾ (ಪಿಟಿಐ): ದೇಶದ ಹಲವು ರಾಜಕೀಯ ಪಕ್ಷಗಳಿಗೆ ಚುನಾವಣಾ ಕಾರ್ಯತಂತ್ರ ಪರಿಣತನಾಗಿ ಕೆಲಸ ಮಾಡಿದ್ದ ಪ್ರಶಾಂತ್ ಕಿಶೋರ್ (ಪಿಕೆ) ಅವರು ತಮ್ಮ ತವರು ರಾಜ್ಯ ಬಿಹಾರದಲ್ಲಿ ಪರಿವರ್ತನೆ ತರುವ ಉದ್ದೇಶದಿಂದ ಸಮಾನ ಮನಸ್ಕರ 'ಜನ ಸುರಾಜ್' ವೇದಿಕೆಯನ್ನು ರೂಪಿಸಲು ಮುಂದಾಗಿದ್ದಾರೆ.

ಕಿಶೋರ್ ಅವರು ಹೊಸ ಪಕ್ಷವನ್ನು ಘೋಷಿಸಲಿದ್ದಾರೆ ಎಂಬ ನಿರೀಕ್ಷೆ ಇತ್ತು. ಆದರೆ ವೇದಿಕೆಯೊಂದನ್ನು ಘೋಷಿಸಿರುವ ಅವರು, ಮುಂದಿನ ದಿನಗಳಲ್ಲಿ ಅದನ್ನು ಪಕ್ಷವಾಗಿ ಪರಿವರ್ತಿಸುವ ಸಾಧ್ಯತೆಯನ್ನು ಪ್ರಸ್ತಾಪಿಸಿದ್ದಾರೆ. 'ಜನರ ಬಳಿ ಹೋಗುತ್ತೇನೆ' ಎಂದು ಇತ್ತೀಚೆಗೆ ಘೋಷಿಸಿದ್ದ ಅವರು, ಮಹಾತ್ಮಾ ಗಾಂಧೀಜಿಯಿಂದ ಪ್ರೇರಣೆ ಪಡೆದು ವೇದಿಕೆಯೊಂದನ್ನು ವಿನ್ಯಾಸಗೊಳಿಸಿದ್ದಾಗಿ ಹೇಳಿದ್ದಾರೆ.

18 ಸಾವಿರ ಜನರ ಜೊತೆ ಸಂಪರ್ಕದಲ್ಲಿ ಇರುವುದಾಗಿ ಕಿಶೋರ್ ಹೇಳಿದ್ದಾರೆ. ಅವರ ಜೊತೆಗೂಡಿ 3 ಸಾವಿರ ಕಿಲೋಮೀಟರ್ 'ಪಾದಯಾತ್ರೆ' ಹಮ್ಮಿಕೊಳ್ಳಲು ನಿರ್ಧರಿಸಿದ್ದಾರೆ. ಅಕ್ಟೋಬರ್ 2ರಂದು ಚಂಪಾರಣ್‌ನ ಗಾಂಧಿ ಆಶ್ರಮದಿಂದ ಅವರು ಪಾದಯಾತ್ರೆ ಆರಂಭಿಸಲಿದ್ದಾರೆ. ಒಂದು ವರ್ಷದಲ್ಲಿ ಈ ಯಾತ್ರೆ ಪೂರ್ಣಗೊಳ್ಳಲಿದೆ. 'ಈ ಪಾದಯಾತ್ರೆಯ ಮೂಲಕ ರಾಜ್ಯದ ಪ್ರತಿ ಮೂಲೆಯನ್ನೂ ತಲುಪಿ, ಜನರ ಬೇಕುಬೇಡಗಳನ್ನು ಅರಿತುಕೊಳ್ಳುವ ಯತ್ನ ಮಾಡುತ್ತೇನೆ' ಎಂದು ಅವರು ಹೇಳಿದ್ದಾರೆ.

ರಾಜಕೀಯ ಸಲಹಾ ಸಂಘಟನೆ 'ಐಪ್ಯಾಕ್'ನ ಸ್ಥಾಪಕ ಕಿಶೋರ್, ಬಿಹಾರದ ಇಬ್ಬರು ಮುಖ್ಯಮಂತ್ರಿಗಳಾದ ನಿತೀಶ್ ಕುಮಾರ್ ಹಾಗೂ ಲಾಲು ಪ್ರಸಾದ್ ಅವರ ಜೊತೆ ಕೆಲಸ ಮಾಡಿದ್ದಾರೆ. 'ಬಿಹಾರವು ಅಭಿವೃದ್ಧಿಯ ಹಲವು ವಲಯಗಳಲ್ಲಿ ಕೊನೆಯ ಸ್ಥಾನದಲ್ಲೇ ಮುಂದುವರಿಯುತ್ತಿದೆ. ರಾಜ್ಯಕ್ಕೆ ಪರ್ಯಾಯ ರಾಜಕೀಯದ ಅಗತ್ಯವಿದೆ. ರಾಜ್ಯದ ಅಭಿವೃದ್ಧಿಗೆ ಪೂರ್ಣವಾಗಿ ತೊಡಗಿಸಿಕೊಳ್ಳುತ್ತೇನೆ' ಎಂದು ಅವರು ಹೇಳಿದ್ದಾರೆ.

ಕಿಶೋರ್ ಅವರು ಈ ಮುನ್ನ ಆರಂಭಿಸಲು ಉದ್ದೇಶಿಸಿದ್ದ 'ಬಾತ್ ಬಿಹಾರ್ ಕಿ' ಎಂಬ ಅಭಿಯಾನವು ಕೋವಿಡ್ ಕಾರಣದಿಂದ ನನೆಗುದಿಗೆ ಬಿದ್ದಿತ್ತು. ಅದು ಈಗ ಘೋಷಿಸಿರುವ ಜನ ಸುರಾಜ್ ಅನ್ನೇ ಅದು ಹೋಲುತ್ತಿತ್ತು.

> ಕಿಶೋರ್ ಅವರನ್ನು ಬಿಹಾರದಲ್ಲಿ ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ. ತೇಜಸ್ವಿ ಯಾದವ್ ಅವರನ್ನು ಭವಿಷ್ಯದ ನಾಯಕ ಎಂದು ರಾಜ್ಯ ನಿರ್ಧರಿಸಿದೆ
> **ಮೃತ್ಯುಂಜಯ ತಿವಾರಿ,** ಆರ್‌ಜೆಡಿ ವಕ್ತಾರ

> ಪ್ರಶಾಂತ್ ಕಿಶೋರ್ ಅವರು ರಾಜಕೀಯ ದಲ್ಲಾಳಿ. ಕಿಶೋರ್ ಅವರು ಪ್ರಬಲ ಶಕ್ತಿಗಳ ಹೆಚ್ಚುವರಿ ಅಸ್ತ್ರವಾಗಿ ಬಳಕೆಯಾಗಬಹುದು
> **ನಿಖಿಲ್ ಆನಂದ್,** ಬಿಜೆಪಿ ವಕ್ತಾರ

ಕುನಾಲ್ ಕಮ್ರಾ ವಿರುದ್ಧ ಕ್ರಮಕ್ಕೆ ಆಗ್ರಹ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ರಾಷ್ಟ್ರಭಕ್ತಿ ಗೀತೆ ಹಾಡಿದ ಬಾಲಕನ ತಿರುಚಿದ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡ ಆರೋಪದ ಮೇಲೆ ಕಮಿಡಿಯನ್ ಕುನಾಲ್ ಕಮ್ರಾ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಒತ್ತಾಯಿಸಿದೆ.

ಟ್ವಿಟರ್ ಜಾಲತಾಣದ ಕುಂದು ಕೊರತೆ ಅಧಿಕಾರಿಗೆ ಪತ್ರ ಬರೆದಿರುವ ಆಯೋಗ, ವಿಡಿಯೊವನ್ನು ತಕ್ಷಣ ತೆಗೆದು ಹಾಕುವಂತೆ ಸೂಚಿಸಿದೆ. ಅಲ್ಲದೆ ಅವರ ಅಧಿಕೃತ ಖಾತೆಯ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದೆ.

ಈ ಸಂಬಂಧ ಸಲ್ಲಿಕೆಯಾದ ದೂರನ್ನು ಆಯೋಗ ಗಂಭೀರವಾಗಿ ಪರಿಗಣಿಸಿದೆ. ರಾಜಕೀಯ ವರ್ಚಸ್ಸು ಹೆಚ್ಚಿಸಿಕೊಳ್ಳಲು ಅಪ್ರಾಪ್ತ ವಯಸ್ಸಿನವರನ್ನು ಬಳಸಿಕೊಳ್ಳುವುದು 2015ರ ಬಾಲಾಪರಾಧಿ ನ್ಯಾಯ ಕಾಯ್ದೆ ಮತ್ತು 2021ರ ಐಟಿ ನಿಯಮಗಳ ಉಲ್ಲಂಘನೆ ಎಂದು ಆಯೋಗ ಪರಿಗಣಿಸಿದೆ.

ದೇಶದ್ರೋಹ ಕಾನೂನು ರದ್ದು: ಅರ್ಜಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ್ರೋಹ ಕಾನೂನಿನ ಸಾಂವಿಧಾನಿಕ ಮಾನ್ಯತೆಯನ್ನು ಪ್ರಶ್ನಿಸಿರುವ ಅರ್ಜಿಗಳನ್ನು ವಿಸ್ತೃತ ಸಂವಿಧಾನ ಪೀಠಕ್ಕೆ ವರ್ಗಾಯಿಸುವ ಸಂಬಂಧ ಪರಿಶೀಲನೆ ನಡೆಸಲು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ.

ದೇಶದ್ರೋಹ ಕಾನೂನನ್ನು ರದ್ದುಪಡಿಸಬೇಕು ಎಂದು ಕೋರಿ ಸಲ್ಲಿಸಲಾಗಿರುವ ಹಲವು ಅರ್ಜಿಗಳ ವಿಚಾರಣೆ ವೇಳೆ ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು, ಇದೇ 10ರಂದು ಈ ವಿಚಾರಣೆ ನಡೆಸುವುದಾಗಿ ಹೇಳಿದೆ.

ಇದಕ್ಕೂ ಮುನ್ನ ಈ ಅರ್ಜಿಗಳನ್ನೇ ವಜಾ ಮಾಡಬೇಕು ಎಂದು ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಅಟಾರ್ನಿ ಜನರಲ್ ಕೆ.ಕೆ.ವೇಣುಗೋಪಾಲ್ ವಾದಿಸಿದರು. 'ಈ ಕಾನೂನು ಸಂವಿಧಾನಬದ್ಧವಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಭದ್ರತೆಯನ್ನು ಕೇದಾರನಾಥ್ ಪ್ರಕರಣದಲ್ಲೇ ಸ್ಪಷ್ಟಪಡಿಸಲಾಗಿದೆ. ಈ ಕಾನೂನಿನ ದುರ್ಬಳಕೆಯನ್ನು ತಡೆಯಲು ನ್ಯಾಯಾಲಯವು ಮಾರ್ಗಸೂಚಿಗಳನ್ನು ಹೊರಡಿಸಬಹುದು' ಎಂದು ಅವರು ಪ್ರತಿಪಾದಿಸಿದರು. ಜತೆಗೆ ಅರ್ಜಿಗಳನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸುವುದನ್ನು ವಿರೋಧಿಸಿದರು.

ಅರ್ಜಿದಾರರ ಪರವಾಗಿ ಹಾಜರಿದ್ದ ಕಪಿಲ್ ಸಿಬಲ್ ಅವರು, 'ಈ ಕಾನೂನಿನ ಹಲವು ಅಂಶಗಳು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿರ್ಬಂಧಿಸುತ್ತವೆ. ಕೇದಾರನಾಥ್ ಪ್ರಕರಣದ ತೀರ್ಪಿನ ನಂತರ ಹಲವು ದಶಕಗಳು ಕಳೆದಿವೆ, ಸಾಕಷ್ಟು ಬದಲಾವಣೆಯಾಗಿದೆ' ಎಂದು ಹೇಳಿದರು.

ಕಲ್ಲಿದ್ದಲು ಸಾಗಣೆ 42 ಪ್ರಯಾಣಿಕ ರೈಲು ರದ್ದು

ನವದೆಹಲಿ (ಪಿಟಿಐ): ದೇಶದ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ಉಂಟಾಗಿರುವ ಕಲ್ಲಿದ್ದಲು ಕೊರತೆ ನಿವಾರಿಸಲು, ಕಲ್ಲಿದ್ದಲು ಸಾಗಣೆಯ ಗೂಡ್ಸ್ ರೈಲುಗಳ ಸಂಚಾರಕ್ಕಾಗಿ ದೇಶದಾದ್ಯಂತ 42 ಪ್ರಯಾಣಿಕ ರೈಲುಗಳನ್ನು ರೈಲ್ವೆಯು ರದ್ದುಗೊಳಿಸಿದೆ ಎಂದು ರಾಷ್ಟ್ರೀಯ ಸಾರಿಗೆ ಗುರುವಾರ ತಿಳಿಸಿದೆ.

ಆಗ್ನೇಯ ಕೇಂದ್ರ ರೈಲ್ವೆ ವಲಯದಲ್ಲಿ 34 ಮತ್ತು ಉತ್ತರ ರೈಲ್ವೆಯಲ್ಲಿ 8 ರೈಲುಗಳ ಸಂಚಾರ ರದ್ದಾಗಲಿದೆ. 40 ರೈಲುಗಳ ಸಂಚಾರವನ್ನು ಮೇ 24ರವರೆಗೆ ರದ್ದುಪಡಿಸಿದ್ದರೆ, ಇನ್ನೆರಡು ರೈಲುಗಳು ಮೇ 8ರಿಂದ ಸಂಚಾರ ಆರಂಭಿಸಲಿವೆ.

ಈ ಹಿಂದೆ ರದ್ದುಪಡಿಸಿದ ರೈಲುಗಳು ಸೇರಿ ಒಟ್ಟು 40 ರೈಲುಗಳ ಸಂಚಾರ ರದ್ದುಗೊಳಿಸಲಾಗಿದೆ. ಇದು ಮೇ 24ರವರೆಗೆ ಮುಂದುವರಿಯುವುದರಿಂದ ಒಟ್ಟು 1,081 ಟ್ರಿಪ್‌ಗಳನ್ನು ರದ್ದುಪಡಿಸಿದಂತಾಗಿದೆ ಎಂದು ರೈಲ್ವೆಯ ವಕ್ತಾರರು ತಿಳಿಸಿದ್ದಾರೆ.

ಅತ್ಯಾಚಾರ ಕುರಿತ ಹೇಳಿಕೆ: ಸಚಿವೆ ವಿರುದ್ಧ ಆಕ್ರೋಶ

ಅಮರಾವತಿ (ಪಿಟಿಐ): 'ಕೆಲವು ಘಟನೆಗಳು ಅರಿವಿಲ್ಲದೆ ಸಂಭವಿಸುತ್ತವೆ' ಎಂದು ಆಂಧ್ರ ಪ್ರದೇಶದ ಗೃಹ ಸಚಿವೆ ಟಿ. ವನಿತಾ ಅವರು ಅತ್ಯಾಚಾರ ಪ್ರಕರಣವೊಂದಕ್ಕೆ ಸಂಬಂಧಿಸಿ ನೀಡಿದ್ದ ಹೇಳಿಕೆ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ಷೇಪಕ್ಕೆ ಕಾರಣವಾಗಿದೆ.

ಮೇ 1ರಂದು 25 ವರ್ಷದ ಗರ್ಭಿಣಿಯೊಬ್ಬರ ಮೇಲೆ ರೇಪಲ್ಲೆ ರೈಲು ನಿಲ್ದಾಣದಲ್ಲಿ ದುಷ್ಕರ್ಮಿಗಳು ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಇದಕ್ಕೆ ಪ್ರತಿಕ್ರಿಯಿಸಿ ಗೃಹ ಸಚಿವೆ ಈ ಹೇಳಿಕೆ ನೀಡಿದ್ದರು.

'ಅತ್ಯಾಚಾರ ಎಸಗಿದ ಆರೋಪಿಗಳು ಸಂತ್ರಸ್ತೆಯ ಪತಿಯಿಂದ ಹಣವನ್ನು ದೋಚುವ ಉದ್ದೇಶ ಹೊಂದಿದ್ದರು ಎನಿಸುತ್ತದೆ. ಆರೋಪಿಗಳು ಕುಡಿದು, ಸಂತ್ರಸ್ತೆಯ ಪತಿಗೆ ಹೊಡೆಯುತ್ತಿದ್ದಾಗ, ಗಂಡನನ್ನು ರಕ್ಷಣೆ ಮಾಡಲು ಮಹಿಳೆ ಮುಂದಾಗಿರಬಹುದು. ಈ ಸಮಯದಲ್ಲಿ ಅಂತಹದ್ದೇನೋ ಸಂಭವಿಸಿದೆ' ಎಂದು ಹೇಳಿಕೆ ನೀಡಿದ್ದರು.

ಗೃಹ ಸಚಿವೆ ನೀಡಿದ ವಿವಾದಾತ್ಮಕ ಹೇಳಿಕೆಗೆ ಗುರುವಾರ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ವೈ. ಎಸ್. ಜಗನ್ ಮೋಹನ್ ರೆಡ್ಡಿ ಅವರು, ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಭಾಗಿಯಾಗುವವರು ಕೇವಲ ತೆಲುಗು ದೇಶಂ ಪಕ್ಷದ ಪುರುಷರೇ ಎಂದು ಆರೋಪಿಸಿದ್ದಾರೆ.



ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕಣಿವೆಬಿಳಚಿಯ ಗುಡ್ಡದ ಬಳಿ ಭದ್ರಾ ನಾಲೆಯ ಸೇತುವೆ ಗುರುವಾರ ನಸುಕಿನಲ್ಲಿ ಭಾರಿ ಮಳೆಯಿಂದ ಕುಸಿದು ಬಿದ್ದಿದೆ.

ಸಿಡಿಲು: ಮನೆಗೆ ಹಾನಿ– ಮೂವರಿಗೆ ಗಾಯ

ಚಿತ್ರದುರ್ಗ: ಚಳ್ಳಕೆರೆ ತಾಲ್ಲೂಕಿನ ತಳುಕು ಹೋಬಳಿಯ ಮಲ್ಲೂರಹಳ್ಳಿ ಗ್ರಾಮದ ಪರ್ವತಯ್ಯ ಎಂಬುವರ ಮನೆಗೆ ಸಿಡಿಲು ಬಡಿದು ಮೂವರು ಗಾಯಗೊಂಡಿದ್ದಾರೆ.

ಪರ್ವತಯ್ಯ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಗುಡುಗು, ಬಿರುಗಾಳಿ ಸಹಿತ ಮಳೆ ಆರಂಭವಾಗುತ್ತಿದ್ದಂತೆ ಮನೆಗೆ ಸಿಡಿಲು ಅಪ್ಪಳಿಸಿತು. ಗಾಯಾಳುಗಳು ನಾಯಕನಹಟ್ಟಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಚಿತ್ರದುರ್ಗ ತಾಲ್ಲೂಕಿನ ಕೂನಬೇವು ಸಮೀಪ ಎರಡು ಮರಗಳು ಧರೆಗೆ ಉರುಳಿದ ಪರಿಣಾಮ ತುರುವನೂರು ರಸ್ತೆ ಸಂಪರ್ಕ ಕಡಿತಗೊಂಡಿದೆ. ಹುಣಸೆಕಟ್ಟೆ ಸಮೀಪ ಮರವೊಂದು ಉರುಳಿಬಿದ್ದು, ಐದು ದ್ವಿಚಕ್ರ ವಾಹನಗಳು ಜಖಂಗೊಂಡಿವೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ ಸಮೀಪದ ಕಣಿವೆಬಿಳಚಿಯ ಗುಡ್ಡದ ಬದಿ ಇರುವ ಭದ್ರಾ ನಾಲೆಯ ಸೇತುವೆ ಗುರುವಾರ ನಸುಕಿನಲ್ಲಿ ಬಿದ್ದ ಭಾರಿ ಮಳೆಯಿಂದ ಕುಸಿದುಬಿದ್ದಿದೆ. ಸೇತುವೆಯ ಮೇಲ್ಭಾಗದಲ್ಲಿ ಇರುವ 120 ಮನೆಗಳಲ್ಲಿ ಇರುವ ಸುಮಾರು 300 ಜನ ಸಂಪರ್ಕವಿಲ್ಲದೇ ಅತಂತ್ರರಾಗಿದ್ದಾರೆ.

ಒಂದು ಸಾವಿರ ಟನ್ ದ್ರಾಕ್ಷಿ ನಾಶ

ಗುಡಿಬಂಡೆ (ಚಿಕ್ಕಬಳ್ಳಾಪುರ ಜಿಲ್ಲೆ): ತಾಲ್ಲೂಕಿನಲ್ಲಿ ಬುಧವಾರ, ಗುರುವಾರ ಸುರಿದ ಆಲಿಕಲ್ಲುಸಹಿತ ಮಳೆಗೆ ಸುಮಾರು ಒಂದು ಸಾವಿರ ಟನ್ ದ್ರಾಕ್ಷಿ ಫಸಲು ನಾಶವಾಗಿದೆ. ಸುಮಾರು ₹ 25 ಲಕ್ಷ ನಷ್ಟವಾಗಿದೆ ಎಂದು ತೋಟಗಾರಿಕಾ ಇಲಾಖೆ ಅಧಿಕಾರಿಗಳು ಅಂದಾಜಿಸಿದ್ದಾರೆ.

ತಾಲ್ಲೂಕಿನಲ್ಲಿ 25 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿರುವ ದ್ರಾಕ್ಷಿ ಆಲಿಕಲ್ಲು ಮಳೆಯಿಂದ ಹಾನಿಗೆ ಒಳಗಾಗಿದೆ. 'ಆಲಿಕಲ್ಲು ಮಳೆಯಿಂದ ದ್ರಾಕ್ಷಿ ಕೊಳೆಯುತ್ತದೆ. ಬೆಳೆ ನಷ್ಟದ ವರದಿಯನ್ನು ತಹಶೀಲ್ದಾರ್ ಅವರಿಗೆ ಸಲ್ಲಿಸುತ್ತೇವೆ' ಎಂದು ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ದಿವಾಕರ್ ತಿಳಿಸಿದ್ದಾರೆ.

ಕುರಿ– ಮೇಕೆ ಬಲಿ: ಬಾಗೇಪಲ್ಲಿಯ ಪೈಪಾಳ್ಯ ಗ್ರಾಮದ ಬಳಿ ವೆಂಕಟರಾಮಪ್ಪ ಎಂಬುವರಿಗೆ ಸೇರಿದ 10 ಕುರಿಗಳು, 4 ಮೇಕೆಗಳು ಸಿಡಿಲು ಬಡಿದು ಮೃತಪಟ್ಟಿವೆ.

ಸಿಡಿಲು ಬಡಿದು ಮಹಿಳೆ ಸಾವು

ತುಮಕೂರು: ಜಿಲ್ಲೆಯ ಕೆಲವು ಭಾಗಗಳಲ್ಲಿ ಗುರುವಾರವೂ ಮಳೆ ಸುರಿದಿದ್ದು, ಕುಣಿಗಲ್ ತಾಲ್ಲೂಕಿನ ಕಸಬಾ ಹೋಬಳಿಯ ಬೂದನಹಳ್ಳಿ ಬಳಿ ಸಿಡಿಲು ಬಡಿದು ಲಕ್ಕಮ್ಮ (65) ಎಂಬುವರು ಗುರುವಾರ ಮೃತಪಟ್ಟಿದ್ದಾರೆ.

ದನ ಮೇಯಿಸಲು ಹೋಗಿದ್ದಾಗ ಈ ಅವಘಡ ಸಂಭವಿಸಿದೆ. ಹುಲಿಯೂರುದುರ್ಗ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೊರಟಗೆರೆ ತಾಲ್ಲೂಕಿನ ತೋವಿನಕೆರೆಯಲ್ಲಿ ಮಳೆಯಾಗಿದೆ. ಕುಣಿಗಲ್, ಗುಬ್ಬಿ, ತಿಪಟೂರು ತಾಲ್ಲೂಕಿನ ಕೆಲವು ಕಡೆ ಮಳೆ ಬಿದ್ದಿದೆ. ಮಳೆಗೆ ಚಿಕ್ಕನಾಯಕನಹಳ್ಳಿ ಸಮೀಪದ ತೀರ್ಥರಾಮೇಶ್ವರ ವಜ್ರದ ಹಳ್ಳ ಹರಿಯುತ್ತಿದೆ. ತುರುವೇಕೆರೆ ತಾಲ್ಲೂಕಿನ ವಿವಿಧೆಡೆ ಮಳೆ, ಗಾಳಿಗೆ ವಿದ್ಯುತ್ ಕಂಬಗಳು, ಮರ ನೆಲಕ್ಕುರುಳಿವೆ. ಲೋಕಮ್ಮನಹಳ್ಳಿಯಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ.

ವಿವಿಧೆಡೆ ಧಾರಾಕಾರ ಮಳೆ

ಹುಬ್ಬಳ್ಳಿ/ಮೈಸೂರು: ನಗರದಲ್ಲಿ ಗುರುವಾರ ಸಂಜೆ ಭಾರೀ ಗಾಳಿ ಹಾಗೂ ಗುಡುಗು ಸಮೇತ ಧಾರಾಕಾರ ಮಳೆ ಸುರಿಯಿತು.

ಸಂಜೆ 5.45ಕ್ಕೆ ಆರಂಭಗೊಂಡು ಸುಮಾರು ಅರ್ಧ ತಾಸು ಸುರಿದ ಮಳೆ ಅಬ್ಬರಕ್ಕೆ ನಗರದ ಕೆಲವೆಡೆ ಮರಗಳು ಹಾಗೂ ಕೊಂಬೆಗಳು ಧರೆಗುರುಳಿವೆ. ಬಾದಾಮಿ ನಗರದಲ್ಲಿ ಶಾಸಕ ಜಗದೀಶ ಶೆಟ್ಟರ್ ಅವರ ಮನೆ ಮುಂದೆ ನಿಲ್ಲಿಸಿದ್ದ ಬೆಂಗಾವಲು ವಾಹನದ ಮೇಲೆ ಮರವೊಂದು ಉರುಳಿ ಬಿದ್ದಿದೆ. ಗೋಕುಲ ರಸ್ತೆಯ ಕುಮಾರಪಾರ್ಕ್‌ನ ಮನೆಯ ಆವರಣದಲ್ಲಿ ನಿಲ್ಲಿಸಿದ್ದ ಕಾರಿನ ಮೇಲೆ ಮರ ಉರುಳಿಬಿದ್ದಿದೆ. ಹಳೇ ಹುಬ್ಬಳ್ಳಿಯ ದುರ್ಗದ ಬೈಲ್‌ನ ಮಹಾತ್ಮ ಗಾಂಧಿ ಮಾರುಕಟ್ಟೆಯ ಹಳೆಯ ಕಟ್ಟಡದ ಚಾವಣಿ ಮಳೆಯ ಹೊಡೆತಕ್ಕೆ ಕುಸಿದಿದೆ. ಸ್ಥಳದಲ್ಲಿ ಯಾರೂ ಇಲ್ಲದಿದ್ದರಿಂದ ಅಪಾಯ ಸಂಭವಿಸಿಲ್ಲ.

ಮೈಸೂರು, ಹಾಸನ ನಗರ ಹಾಗೂ ತಾಲೂಕಿನ ವಿವಿಧೆಡೆ ಮಳೆ ಸುರಿದಿದೆ.

ಆಲಿಕಲ್ಲು ಮಳೆ: ಕೊಪ್ಪಳ ಜಿಲ್ಲೆಯ ಅಳವಂಡಿಯಲ್ಲಿ ಗುರುವಾರ ಆಲಿಕಲ್ಲು ಸಹಿತ ಭಾರಿ ಮಳೆಯಾಗಿದ್ದು, ವಿವಿಧೆಡೆ ಬೆಳೆಗೆ ಹಾನಿಯಾಗಿದೆ. ಬಿರುಗಾಳಿಯಿಂದ ಕೆಲ ಗುಡಿಸಲುಗಳ ಮೇಲ್ಛಾವಣಿ ಹಾರಿಹೋದವು. ಹಟ್ಟಿ, ಬೆಳಗಟ್ಟಿ, ಹಲವಾಗಲಿ, ಬೈರಾಪುರ ಹಾಗೂ ಮಂತಾದ ಗ್ರಾಮಗಳಲ್ಲಿ ಬಾಳೆ, ಹತ್ತಿ, ಕಬ್ಬು, ಬಾಳೆ ಸೇರಿದಂತೆ ಇತರೆ ಬೆಳೆಗಳಿಗೆ ಹಾನಿಯಾಗಿದೆ.

ಅತ್ಯಾಚಾರ ಆರೋಪ ಎಎಸ್‌ಐ ಬಂಧನ

ಕೋಟಾ, ರಾಜಸ್ಥಾನ (ಪಿಟಿಐ): ರಾಜಸ್ಥಾನದ ಜಲಾವರ್ ಜಿಲ್ಲೆಯಲ್ಲಿ ಬುಡಕಟ್ಟು ಜನಾಂಗದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಪೊಲೀಸ್ ಅಧಿಕಾರಿಯೊಬ್ಬರನ್ನು ಬಂಧಿಸಲಾಗಿದೆ.

ಈ ಕುರಿತು ಮಾಹಿತಿ ನೀಡಿದ ಸರ್ಕಲ್ ಇನ್‌ಸ್ಪೆಕ್ಟರ್ ಗಿರ್ಧರ್ ಸಿಂಗ್, 'ಬಾಲ್ಟಾ ಪೊಲೀಸ್ ಠಾಣೆಯ ಎಎಸ್‌ಐ ಜಗದೀಶ್ ಪ್ರಸಾದ್ ಬಂಧಿತ ಆರೋಪಿ. ಅತ್ಯಾಚಾರ ಸಂತ್ರಸ್ತೆಯು ಜನವರಿ ತಿಂಗಳಿನಲ್ಲಿ ತಮ್ಮ ಅತ್ತೆಯ ವಿರುದ್ಧ ದಾಖಲಿಸಿದ ಪ್ರಕರಣದಲ್ಲಿ ಪ್ರಸಾದ್ ತನಿಖಾಧಿಕಾರಿ ಆಗಿದ್ದರು' ಎಂದು ತಿಳಿಸಿದರು.

ಹೊಳಲ್ಕೆರೆ: ಬಿಜೆಪಿ ಶಾಸಕರ ಕುಟುಂಬದ ವಿರುದ್ಧ ಎಫ್‌ಐಆರ್



ಎಂ.ಚಂದ್ರಪ್ಪ



ಚಂದ್ರಕಲಾ



ರಘುಚಂದನ್

ಚಿತ್ರದುರ್ಗ: ಜನರಲ್ ಪವರ್ ಆಫ್ ಅಟಾರ್ನಿ (ಜಿಪಿಎ) ದುರುಪಯೋಗ ಮಾಡಿಕೊಂಡು ಆಸ್ತಿ ಕಬಳಿಸಿದ ಆರೋಪದ ಮೇರೆಗೆ ಹೊಳಲ್ಕೆರೆ ಬಿಜೆಪಿ ಶಾಸಕ ಎಂ.ಚಂದ್ರಪ್ಪ ಅವರ ಪತ್ನಿ ಹಾಗೂ ಇಬ್ಬರು ಪುತ್ರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಶಾಸಕ ಎಂ.ಚಂದ್ರಪ್ಪ ಅವರ ಪತ್ನಿ ಚಂದ್ರಕಲಾ, ಪುತ್ರರಾದ ಎಂ.ಸಿ. ರಘುಚಂದನ್, ಎಂ.ಸಿ. ದೀಪ್ ಚಂದನ್, ಉದ್ಯಮಿ ಕೆ.ನಾಗರಾಜ್, ಉಪನೋಂದಣಾಧಿಕಾರಿ ನಾಗರತ್ನಮ್ಮ ಸೇರಿ ಇತರರ ವಿರುದ್ಧ ಪಟ್ಟಣದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಖಾಸಗಿ ದೂರಿನ ವಿಚಾರಣೆ ನಡೆಸಿದ ಹೊಳಲ್ಕೆರೆಯ ಹಿರಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಸೂಚನೆಯ ಮೇರೆಗೆ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ.

ಹೊಳಲ್ಕೆರೆಯ ಎಂ.ಜಿ. ಶ್ರೀಧರ್ ಎಂಬುವರು ಉದ್ಯಮಿ ಕೆ. ನಾಗರಾಜ್ ಅವರಿಗೆ ವ್ಯವಹಾರದ ಉದ್ದೇಶದಿಂದ ಜಿಪಿಎ ಅಧಿಕಾರವನ್ನು 2016ರಲ್ಲಿ ನೀಡಿದ್ದರು. ಈ ನಡುವೆ ಶ್ರೀಧರ್ ಸಹೋದರಿ ಲತಾ ಸುಂದರ್ ಎಂಬುವರು ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೇಳಿ ನ್ಯಾಯಾಲಯದ ಮೊರೆಹೋಗಿದ್ದರು. ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥವಾಗುವ ಮೊದಲೇ ಶ್ರೀಧರ್ ಮೃತಪಟ್ಟಿದ್ದರು.

'ಆಗಿನ ಸಂದರ್ಭವನ್ನು ದುರುಪಯೋಗಮಾಡಿಕೊಂಡ ನಾಗರಾಜ್, ಶಾಸಕರ ಕುಟುಂಬದ ಸದಸ್ಯರ ಹೆಸರಿಗೆ ಆಸ್ತಿ ಕ್ರಯಪತ್ರ ಮಾಡಿಕೊಟ್ಟಿದ್ದಾರೆ. ಹೊಳಲ್ಕೆರೆ ಉಪನೋಂದಣಾಧಿಕಾರಿ ನಾಗರತ್ನಮ್ಮ ಅವರೂ ಇದರಲ್ಲಿ ಶಾಮೀಲಾಗಿದ್ದಾರೆ. ಆಸ್ತಿ ಕಬಳಿಕೆಗೆ ಪ್ರಯತ್ನಿಸಿದವರ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ಶ್ರೀಧರ್ ಅವರ ಮತ್ತೊಬ್ಬ ಸಹೋದರಿ ಎ.ಜಿ.ಪದ್ಮಜಾ ನ್ಯಾಯಾಲಯದ ಮೆಟ್ಟಿಲೇರಿದ್ದರು.

ವಾಚ್ ಪ್ರಕರಣವೇನು ₹ 300 ಕೋಟಿ ಅವ್ಯವಹಾರವೇ?: ಸಿದ್ದರಾಮಯ್ಯ

ಮೈಸೂರು: 'ಮತ್ತೆ ವಾಚ್ ಪ್ರಕರಣ ಕೆದಕುತ್ತಿದ್ದಾರೆ. ಕಳ್ಳತನದ ವಾಚ್ ಎಂದು ಕುಮಾರಸ್ವಾಮಿ ಹೇಳಿದ್ದರಿಂದ ಪ್ರಕರಣವನ್ನು ಆಗಲೇ ಎಸಿಬಿಗೆ ವಹಿಸಿದ್ದೆ. ವಾಚ್ ಕೊಟ್ಟ ದುಬೈನ ಡಾ. ವರ್ಮಾ ಎಂಬುವರು ರಸೀದಿ ಕೂಡ ನೀಡಿದ್ದು, ತನಿಖೆಯಾಗಿ ಪ್ರಕರಣ ಇತ್ಯರ್ಥವಾಗಿದೆ. ಸರ್ಕಾರಕ್ಕೇ ವಾಚ್ ಒಪ್ಪಿಸಿದ್ದೇನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಸಿದ್ದರಾಮಯ್ಯ ವಾಚ್ ಕಟ್ಟಿಕೊಂಡಿರಲಿಲ್ವಾ ಎಂದು ಈಗ ಪ್ರತಿವಾದ ಮಾಡಿದರೆ ಹೇಗೆ? ಆ ವಾಚ್‌ಗೆ ₹35 ಲಕ್ಷದಿಂದ ₹ 40 ಲಕ್ಷ ಇರಬಹುದು. ಹಾಗೆಂದು ನಾನೇನೂ ಸಮರ್ಥಿಸಿಕೊಳ್ಳುತ್ತಿಲ್ಲ. ಆದರೆ, ಇದೇನು ಈಗ ನಡೆದಿರುವ ₹ 300 ಕೋಟಿ ಅವ್ಯವಹಾರವೇ' ಎಂದು ಪ್ರಶ್ನಿಸಿದರು.

'ಮಧ್ಯವರ್ತಿಗಳನ್ನು ಮಾತ್ರ ಬಂಧಿಸಲಾಗಿದೆ. ಎಡಿಜಿಪಿ, ಡಿವೈಎಸ್ಪಿಯನ್ನು ವರ್ಗಾವಣೆ ಮಾಡಲಾಗಿದೆ. ಅಕ್ರಮ ನಡೆದಿಲ್ಲವೆಂದು ಗೃಹ ಸಚಿವ ಆರಗ ಜ್ಞಾನೇಂದ್ರ ಸದನದಲ್ಲಿ ಹೇಳಿ ದಾರಿ ತಪ್ಪಿಸಿದ್ದಾರೆ. ಅಧಿಕಾರದಲ್ಲಿರಲು ಇವರು ಲಾಯಕ್ಕಲ್ಲ' ಎಂದು ವಾಗ್ದಾಳಿ ನಡೆಸಿದರು.

'ಕವಲಂದೆ ಬೋಲೆ ತೋ ಛೋಟಾ ಪಾಕಿಸ್ತಾನ್': ವಿಡಿಯೊ ವೈರಲ್

ಪ್ರಜಾವಾಣಿ ವಾರ್ತೆ

ಮೈಸೂರು: 'ಕವಲಂದೆ ಬೋಲೆ ತೋ ಛೋಟಾ ಪಾಕಿಸ್ತಾನ್' (ಕವಲಂದೆ ಎಂದರೆ ಪುಟ್ಟ ಪಾಕಿಸ್ತಾನ) ಎನ್ನುವ ಹಿನ್ನೆಲೆ ಧ್ವನಿ ಇರುವ ವಿಡಿಯೊವೊಂದು ಗುರುವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ನಂಜನಗೂಡು ತಾಲ್ಲೂಕಿನ ಕವಲಂದೆ ಗ್ರಾಮದಲ್ಲಿ ಈದ್ ಉಲ್ ಫಿತ್ರ್ ಅಂಗವಾಗಿ ಪ್ರಾರ್ಥನೆ ಸಲ್ಲಿಸಿ ನೂರಾರು ಸಂಖ್ಯೆಯಲ್ಲಿ ಮುಸ್ಲಿಮರು ಹೊರಟಿರುವ ದೃಶ್ಯಕ್ಕೆ ವ್ಯಕ್ತಿಯೊಬ್ಬ ಹಿನ್ನೆಲೆಯಲ್ಲಿ 'ಕವಲಂದೆ ಬೋಲೆ ತೋ ಛೋಟಾ ಪಾಕಿಸ್ತಾನ್' ಎಂದು ಹೇಳುತ್ತಾನೆ. ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಸದ್ದು ಮಾಡುತ್ತಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, 'ವಿಡಿಯೊ ವೈರಲ್ ಆಗಿರುವುದು ಗಮನಕ್ಕೆ ಬಂದಿದೆ. ತನಿಖೆ ನಡೆಸಲಾಗುವುದು' ಎಂದರು.

'ಈದ್ ಉಲ್ ಫಿತ್ರ್ ದಿನ ಮೆರವಣಿಗೆಯಲ್ಲಿ ಹೊರಟ ಮುಸ್ಲಿಮರು ಈ ಘೋಷಣೆ ಕೂಗಿಲ್ಲ. ಠಾಣೆಯ ಮುಂಭಾಗ ಇರುವ ದರ್ಗಾದ ಸಮೀಪ ಪ್ರಾರ್ಥನೆ ಮಾಡಿ ಅವರೇ ಮನೆಗೆ ಹೊರಡಿ ಎಂದು ಎಲ್ಲರನ್ನೂ ಕಳುಹಿಸುತ್ತಾರೆ. ಆದರೆ, ವ್ಯಕ್ತಿಯೊಬ್ಬ ವಿಡಿಯೊಕ್ಕೆ ಈ ರೀತಿ ಧ್ವನಿ ನೀಡಿದ್ದಾನೆ. ಈ ಕುರಿತು ಪರಿಶೀಲಿಸಲಾಗುತ್ತಿದೆ' ಎಂದು ಕವಲಂದೆ ಪೊಲೀಸರು ತಿಳಿಸಿದರು.

ಪ್ರಕರಣ ದಾಖಲಾಗುತ್ತಿದ್ದಂತೆ ಠಾಣೆಗೆ ಬಂದ ಗ್ರಾಮದ ಮುಸ್ಲಿಂ ಮುಖಂಡರು, ಹಿನ್ನೆಲೆ ಧ್ವನಿ ಇರುವ ವಿಡಿಯೊ ಮಾಡಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಘಟನೆ ಖಂಡಿಸಿ ನಂಜನಗೂಡು ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಯುವ ಬ್ರಿಗೇಡ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

'ಕ್ರಮ ಕೈಗೊಳ್ಳದಿದ್ದರೆ ಕವಲಂದೆ ಚಲೋ'

ಬೆಳಗಾವಿ: 'ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಕವಲಂದೆಯನ್ನು 'ಛೋಟಾ ಪಾಕಿಸ್ತಾನ್' ಎಂದು ಘೋಷಣೆಗಳನ್ನು ಕೂಗಿರುವವರು ದೇಶದ್ರೋಹಿಗಳು. ಆ ದೇಶದ ಮೇಲೆ ಪ್ರೀತಿ ಇದ್ದವರು ಅಲ್ಲಿಗೆ ಹೋಗಲಿ. ಸರ್ಕಾರವು ಇಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ 'ಕವಲಂದೆ ಚಲೋ ಚಳವಳಿ' ನಡೆಸಬೇಕಾಗುತ್ತದೆ' ಎಂದು ಶ್ರೀರಾಮ ಸೇನೆಯ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಇಲ್ಲಿ ಎಚ್ಚರಿಕೆ ನೀಡಿದರು.

'ಸಂವಿಧಾನಕ್ಕೆ ಹೊರಟ್ಟಿ ಅಪಚಾರ'

ಪ್ರಜಾವಾಣಿ ವಾರ್ತೆ



ಬಿ.ಕೆ. ಹರಿಪ್ರಸಾದ್

ಬೆಂಗಳೂರು: 'ಸಾಂವಿಧಾನಿಕ ಹುದ್ದೆಯಾದ ವಿಧಾನ ಪರಿಷತ್ ಸಭಾಪತಿ ಸ್ಥಾನದಲ್ಲಿ ಇರುವಾಗಲೇ ಬಸವರಾಜ ಹೊರಟ್ಟಿಯವರು ಬಿಜೆಪಿ ಸೇರುತ್ತೇನೆಂದು ಘೋಷಿಸಿರುವುದು ಸಂವಿಧಾನಕ್ಕೆ ಮಾಡಿದ ಅಪಚಾರ. ತಕ್ಷಣ ತಮ್ಮ ಸ್ಥಾನಕ್ಕೆ ಅವರು ರಾಜೀನಾಮೆ ನೀಡಬೇಕು' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ತಮ್ಮ ಸಿದ್ಧಾಂತ, ತತ್ವಕ್ಕೆ ಸರಿ ಹೊಂದುವ ಪಕ್ಷ ಆಯ್ಕೆ ಮಾಡಿಕೊಳ್ಳುವ ಅಧಿಕಾರವಿದೆ. ಆದರೆ, ಸಾಂವಿಧಾನಿಕ ಹುದ್ದೆಯಲ್ಲಿರುವವರು ಪಕ್ಷಾತೀತರಾಗಿರಬೇಕು. ಹಿರಿಯರಾದ ಹೊರಟ್ಟಿ ಅವರಿಂದ ಸಂವಿಧಾನ ವಿರೋಧಿ ನಡೆ ನಿರೀಕ್ಷಿಸಿರಲಿಲ್ಲ' ಎಂದರು.

'ದಿನಾಂಕ, ಪಂಚಾಂಗ ನೋಡಿ ಹೊರಟ್ಟಿ ಬಿಜೆಪಿ ಸೇರ್ಪಡೆಯಾಗಲಿ. ಆದರೆ, ಈ ದೇಶ ನಡೆಯುತ್ತಿರುವುದು ಸಂವಿಧಾನದ ಮೇಲೆ. ಅವರು ಪಕ್ಷದ್ರೋಹ ಮಾತ್ರವಲ್ಲ, ಸಂವಿಧಾನಕ್ಕೂ ದ್ರೋಹ ಬಗೆದಿದ್ದಾರೆ. ಅವರ ನಡೆ ಸಂವಿಧಾನದ ಹತ್ತನೇ ಅನುಚ್ಛೇದದ ಸ್ಪಷ್ಟ ಉಲ್ಲಂಘನೆ. ಜೆಡಿಎಸ್ ಸದಸ್ಯರಾಗಿರುವ ಹೊರಟ್ಟಿ, ಬೇರೆ ಪಕ್ಷಕ್ಕೆ ಸೇರ್ಪಡೆಯಾಗಲಿದ್ದೇನೆ ಎಂಬ ಹೇಳಿಕೆ ನೀಡಿರುವುದು ಪಕ್ಷಾಂತರ ಕಾಯ್ದೆಯ ಉಲ್ಲಂಘನೆ' ಎಂದರು.

'ಸಂವಿಧಾನದ ಮೌಲ್ಯವನ್ನೇ ಬುಡಮೇಲು ಮಾಡಲು ಹೊರಟಿರುವ ಬಿಜೆಪಿಗೆ ಹೊರಟ್ಟಿಯವರು ಸೇರ್ಪಡೆಯಾಗುತ್ತಿರುವುದು ದುರದೃಷ್ಟಕರ. ಅವರು ಆಪರೇಷನ್ ಕಮಲದ ಇನ್ನೊಂದು ವಿಕೆಟ್' ಎಂದರು.

'ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಬಹುತೇಕ ಮಂತ್ರಿಗಳು ಭಾಗಿಯಾಗಿದ್ದಾರೆ. ಗೃಹ ಸಚಿವ ಆರಗ ಜ್ಞಾನೇಂದ್ರ ಮೊದಲು ರಾಜೀನಾಮೆ ನೀಡಲಿ. ಸಚಿವ ಅಶ್ವತ್ಥ ನಾರಾಯಣ ಕುಟುಂಬಸ್ಥರು ಈ ಹಗರಣದಲ್ಲಿ ಇರುವುದು ಸತ್ಯ. ನೈತಿಕತೆ ಇದ್ದರೆ ಅವರು ಅಶ್ವತ್ಥನಾರಾಯಣ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

ವಿಧಾನ ಪರಿಷತ್ ಮುಖ್ಯ ಸಚೇತಕ ಪ್ರಕಾಶ್ ರಾಥೋಡ್ ಇದ್ದರು.

17 ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಮುಖ್ಯಮಂತ್ರಿಯ ಕಾರ್ಯದರ್ಶಿ ವಿ. ಪೊನ್ನುರಾಜ್ ಸೇರಿದಂತೆ 17 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

ತುಷಾರ್ ಗಿರಿನಾಥ್ ಅವರನ್ನು ಬಿಬಿಎಂಪಿ ಮುಖ್ಯ ಆಯುಕ್ತರಾಗಿ ನೇಮಿಸಲಾಗಿದೆ. ಗೌರವ್ ಗುಪ್ತ ಅವರನ್ನು ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಅಲ್ಲದೆ, ಕೆಪಿಎಸ್‌ಸಿ ಕಾರ್ಯದರ್ಶಿಯಾಗಿ ಬಾಗಲಕೋಟೆ ಜಿಲ್ಲಾಧಿಕಾರಿ ಕ್ಯಾ. ಕೆ. ರಾಜೇಂದ್ರ ಅವರನ್ನು ನಿಯೋಜಿಸಲಾಗಿದೆ.

ವರ್ಗಾವಣೆಗೊಂಡವರು: ಟಿ.ಕೆ. ಅನಿಲ್ ಕುಮಾರ್ – ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ವಿ. ಪೊನ್ನುರಾಜ್– ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ– ಆಡಳಿತ). ಹೆಚ್ಚುವರಿಯಾಗಿ ಕೆಪಿಸಿಎಲ್ ವ್ಯವಸ್ಥಾಪಕ ನಿರ್ದೇಶಕ, ಮನೋಜ್ ಜೈನ್– ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಖುಷ್ಬೂ ಜಿ. ಚೌಧರಿ– ಉಪ ಸ್ಥಾನೀಯ ಆಯುಕ್ತರು, ಕರ್ನಾಟಕ ಭವನ, ದೆಹಲಿ, ಎಂ.ಜಿ. ಹಿರೇಮಠ– ವ್ಯವಸ್ಥಾಪಕ ನಿರ್ದೇಶಕ, ಕೆಆರ್‌ಐಡಿಎಲ್, ನಿತೇಶ್ ಪಾಟೀಲ್ – ಜಿಲ್ಲಾಧಿಕಾರಿ, ಬೆಳಗಾವಿ, ಗುರುದತ್ ಹೆಗಡೆ– ಜಿಲ್ಲಾಧಿಕಾರಿ, ಧಾರವಾಡ, ನವೀನ್ ಭಟ್ ವೈ– ನಿರ್ದೇಶಕ (ಸಿಬ್ಬಂದಿ), ಕೆಎಸ್‌ಆರ್‌ಟಿಸಿ, ಟಿ. ಭೂಬಾಲನ್ – ಜಿಲ್ಲಾಧಿಕಾರಿ, ಬಾಗಲಕೋಟೆ, ದಿಲೀಷ್ ಶಶಿ– ನಿರ್ದೇಶಕ, ಇಡಿಸಿಎಸ್, ಡಿಪಿಎಆರ್ (ಇ–ಆಡಳಿತ), ಭರತ್ ಎಸ್ – ವ್ಯವಸ್ಥಾಪಕ ನಿರ್ದೇಶಕ, ವಾಯವ್ಯ ಸಾರಿಗೆ ನಿಗಮ, ಎಂ. ಶಿಲ್ಪಾ– ಜಂಟಿ ವ್ಯವಸ್ಥಾಪಕ ನಿರ್ದೇಶಕಿ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ನಿಗಮ, ಎಚ್. ಪ್ರಸನ್ನ– ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಉಡುಪಿ, ಗಿರೀಶ್ ದಿಲೀಪ್ ಬಾಡೋಳೆ – ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಕಲಬುರಗಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಬಾಳನ್ನು ಹಸನಾಗಿಸಿಕೊಳ್ಳಬೇಕು.
ಪ್ರಹಸನವಾಗಿಸಿಕೊಳ್ಳಬಾರದು.

-ಕೆ.ಎಸ್. ನಿಸಾರ್ ಅಹಮದ್

ಆರ್‌ಬಿಐನಿಂದ ರೆಪೊ ದರ ಹೆಚ್ಚಳ ಅನಿವಾರ್ಯವಾಗಿತ್ತು, ತಡವಾಯಿತು

ಚಿಲ್ಲರೆ ಹಣದುಬ್ಬರ ಪ್ರಮಾಣವು ದೇಶದಲ್ಲಿ ಜನವರಿಯ ನಂತರದಲ್ಲಿ ಮಿತಿಯನ್ನು ಮೀರಿ ನಿಂತಿದೆ. ಕಳೆದ ವರ್ಷದ ಸೆಪ್ಟೆಂಬರ್‌ನಿಂದ ಹಣದುಬ್ಬರವು ಕಡಿಮೆ ಆಗಿಯೇ ಇಲ್ಲ. ಅದು ಪ್ರತಿ ತಿಂಗಳೂ ಅಷ್ಟಿಷ್ಟು ಜಾಸ್ತಿ ಆಗುತ್ತಿದೆ. ಮಿತಿಯನ್ನು ಮೀರಿರುವ ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ತಾನು ಬ್ಯಾಂಕ್‌ಗಳಿಗೆ ಸಾಲ ನೀಡುವುದಕ್ಕೆ ವಿಧಿಸುವ ಬಡ್ಡಿ ದರವನ್ನು (ರೆಪೊ ದರವನ್ನು) ಶೇಕಡ 0.40ರಷ್ಟು ಹೆಚ್ಚಳ ಮಾಡಿದೆ. ಈ ಹೆಚ್ಚಳವು ಈಗಿನ ಸಂದರ್ಭದಲ್ಲಿ 'ಸ್ವಾಗತಾರ್ಹ' ಎಂದು ಹೇಳುವುದಕ್ಕಿಂತ, 'ಇದು ಅನಿವಾರ್ಯವಾಗಿತ್ತು' ಎಂದೇ ಹೇಳಬೇಕಾಗುತ್ತದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಗರಿಷ್ಠ ಮಟ್ಟವಾದ ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಹಾಗೂ ಠೇವಣಿಗಳ ಮೇಲಿನ ಬಡ್ಡಿ ದರವು ಶೇ 6ಕ್ಕಿಂತ ಕಡಿಮೆ ಇದ್ದಾಗ, ಉಳಿತಾಯಕ್ಕೆ ಹೆಚ್ಚಿನ ಅರ್ಥ ಇಲ್ಲ. ಹಣದುಬ್ಬರ ಪ್ರಮಾಣವನ್ನು ನಿಯಂತ್ರಣದಲ್ಲಿ ಇರಿಸುವ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವ ಆರ್‌ಬಿಐ ಈ ವಾಸ್ತವವನ್ನು ಒಪ್ಪಿಕೊಂಡಿದೆ. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರ ಮಾತಿನಲ್ಲಿ ಇದು ವ್ಯಕ್ತವಾಗಿದೆ. 'ಹಣದುಬ್ಬರ ಹೆಚ್ಚಿನ ಮಟ್ಟದಲ್ಲಿ ಉಳಿದುಕೊಂಡರೆ ಉಳಿತಾಯಕ್ಕೆ, ಹೂಡಿಕೆಗಳಿಗೆ, ಸ್ಪರ್ಧಾತ್ಮಕತೆಗೆ ಧಕ್ಕೆಯಾಗುತ್ತದೆ' ಎಂದು ದಾಸ್ ಹೇಳಿದ್ದಾರೆ. ಹಣದುಬ್ಬರವು ಜನರ ಕೊಳ್ಳುವ ಶಕ್ತಿಯನ್ನು ಕುಗ್ಗಿಸಿ, ಬಡ ವರ್ಗದ ಜನರ ಮೇಲೆ ದುಷ್ಪರಿಣಾಮ ಉಂಟುಮಾಡುತ್ತದೆ ಎಂದೂ ಅವರು ಹೇಳಿದ್ದಾರೆ. ಅವರ ಮಾತಿನಲ್ಲಿ ಎಳ್ಳಷ್ಟೂ ತಪ್ಪಿಲ್ಲ. ಆದರೆ, ಹಣದುಬ್ಬರದ ಅಪಾಯವನ್ನು ಆರ್‌ಬಿಐ ದೀರ್ಘ ಅವಧಿಗೆ ನಿರ್ಲಕ್ಷಿಸಿತೇ ಎಂಬ ಪ್ರಶ್ನೆಗೆ ಅವರೇ ಉತ್ತರ ನೀಡಬೇಕು.



ಹಣದುಬ್ಬರಕ್ಕೆ ಕಾರಣವಾಗಿರುವ ತೈಲೋತ್ಪನ್ನಗಳ ಬೆಲೆ ಇಳಿಸಲು, ಅಡುಗೆ ಎಣ್ಣೆಗಳ ಬೆಲೆ ತಗ್ಗಿಸಲು ಸರ್ಕಾರಗಳು ತ್ವರಿತವಾಗಿ ಕ್ರಮ ಕೈಗೊಳ್ಳದೆ ಇದ್ದರೆ, ಆರ್‌ಬಿಐ ಕ್ರಮದಿಂದ ಹೆಚ್ಚಿನ ಪ್ರಯೋಜನ ಆಗದಿರಬಹುದು

ರೆಪೊ ದರವನ್ನು ತೀರ್ಮಾನಿಸುವ ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಜೂನ್‌ನಲ್ಲಿ ದರ ಹೆಚ್ಚಳ ಮಾಡಬಹುದು ಎಂಬ ನಿರೀಕ್ಷೆ ಬಹುತೇಕ ಅರ್ಥಶಾಸ್ತ್ರಜ್ಞರಲ್ಲಿ ಇತ್ತು. ಆ ಸೂಚನೆಯು ಏಪ್ರಿಲ್‌ನಲ್ಲಿ ನಡೆದ ಎಂಪಿಸಿ ಸಭೆಯ ನಂತರ ಸಿಕ್ಕಿತ್ತು ಸಹ. ಆದರೆ, ಅದು ಮಧ್ಯಂತರದಲ್ಲಿಯೇ ದರ ಹೆಚ್ಚಳ ಮಾಡಿರುವುದು ಅನಿರೀಕ್ಷಿತ. ಹೀಗಾಗಿಯೇ, ರೆಪೊ ದರ ಹೆಚ್ಚಳದ ಸುದ್ದಿಯನ್ನು ಕೇಳಿದ ನಂತರದಲ್ಲಿ ಬಂಡವಾಳ ಮಾರುಕಟ್ಟೆ ಸೂಚ್ಯಂಕಗಳು ಪತನ ಕಂಡವು. ಹೂಡಿಕೆದಾರರ ಸಂಪತ್ತು ₹ 6.27 ಲಕ್ಷ ಕೋಟಿಯಷ್ಟು ಕರಗಿತು. ಬಡ್ಡಿ ದರ ಹೆಚ್ಚಳವು ಬಂಡವಾಳ ಮಾರುಕಟ್ಟೆಗಳ ಪಾಲಿಗೆ ತೀರಾ ಒಳ್ಳೆಯ ಸುದ್ದಿಯಂತೂ ಅಲ್ಲ. ಈಗ ಅಮೆರಿಕದ ಫೆಡರಲ್ ರಿಸರ್ವ್ ಸಹ ಬಡ್ಡಿ ದರವನ್ನು ಶೇ 0.50ರಷ್ಟು ಹೆಚ್ಚಳ ಮಾಡಿದೆ. ಇದರ ಪರಿಣಾಮವಾಗಿ ದೇಶದ ಬಂಡವಾಳ ಮಾರುಕಟ್ಟೆಗಳಿಂದ ಇನ್ನಷ್ಟು ಹಣ ಹೊರಹೋಗುವ ಸಾಧ್ಯತೆಗಳು ಇವೆ. ಬಡ್ಡಿ ದರ ಹೆಚ್ಚಳದ ಪರಿಣಾಮವಾಗಿ, ರಿಯಲ್ ಎಸ್ಟೇಟ್ ಮತ್ತು ವಾಹನ ಉದ್ಯಮ ಹಿನ್ನಡೆ ಕಾಣಬೇಕಾಗಬಹುದು ಎಂದು ಅಂದಾಜು ಮಾಡಲಾಗಿದೆ. ಸಾಲದ ಮೇಲಿನ ಬಡ್ಡಿ ಹೆಚ್ಚಳದಿಂದಾಗಿ ಕಾರ್ಪೊರೇಟ್ ವಲಯದ ವೆಚ್ಚಗಳಲ್ಲಿ ಏರಿಕೆ ಆಗಬಹುದು. ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ವಲಯದ ಉದ್ದಿಮೆಗಳಿಗೆ ಮಾರುಕಟ್ಟೆಯಿಂದ ಬಂಡವಾಳ ಸಂಗ್ರಹಿಸುವ ಸಾಮರ್ಥ್ಯ ಕಡಿಮೆ ಇರುತ್ತದೆ. ಈ ವಲಯದ ಉದ್ದಿಮೆಗಳು ತಮ್ಮ ಬಂಡವಾಳದ ಅಗತ್ಯಗಳಿಗೆ ಬ್ಯಾಂಕ್ ಮೊರೆ ಹೋಗುವುದು ಸಹಜ. ಅವು ಈಗ ಹೆಚ್ಚಿನ ಮೊತ್ತವನ್ನು ಬಡ್ಡಿ ಪಾವತಿಗೆ ಮೀಸಲಿಡಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ವ್ಯವಸ್ಥೆಯು ಹೇಗೆ ನಿಭಾಯಿಸಲಿದೆ ಎಂಬುದನ್ನು ಕಾದು ನೋಡಬೇಕು.

ಈಗಿನ ರೆಪೊ ದರ ಹೆಚ್ಚಳದ ಪರಿಣಾಮವಾಗಿ ಹಣದುಬ್ಬರ ದರವು ತಕ್ಷಣಕ್ಕೆ ಕಡಿಮೆ ಆಗುವ ಸಾಧ್ಯತೆಯೇನೂ ಇಲ್ಲ. ಏಪ್ರಿಲ್ ತಿಂಗಳ ಚಿಲ್ಲರೆ ಹಣದುಬ್ಬರವು ಮಾರ್ಚ್ ತಿಂಗಳ ಮಟ್ಟಕ್ಕಿಂತ ಹೆಚ್ಚಾಗಿರುವ ಅಂದಾಜು ಇದೆ. ಈಗ ಕಂಡುಬಂದಿರುವ ಹಣದುಬ್ಬರ ಹೆಚ್ಚಳಕ್ಕೆ ಕಾರಣ ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಎಂಬ ಅಭಿಪ್ರಾಯ ಇದೆ. ಹೀಗಾಗಿ, ಉಕ್ರೇನ್-ರಷ್ಯಾ ಯುದ್ಧ ಕೊನೆಗೊಳ್ಳದೆ, ಕಚ್ಚಾ ತೈಲದ ಬೆಲೆಯು ಕಡಿಮೆ ಆಗದೆ ಈಗಿನ ಹಣದುಬ್ಬರ ಪ್ರಮಾಣವನ್ನು ರೆಪೊ ದರ ಏರಿಕೆ ಮಾತ್ರದಿಂದ ಎಷ್ಟರಮಟ್ಟಿಗೆ ನಿಯಂತ್ರಿಸಬಹುದು ಎಂಬುದು ಅಂದಾಜಿಗೆ ನಿಲುಕುವುದು ಕಷ್ಟ. ಹಣದುಬ್ಬರ ನಿಯಂತ್ರಣದ ಹೊಣೆ ಇರುವುದು ಆರ್‌ಬಿಐ ಮೇಲೆ ಎನ್ನುವುದು ಹೌದಾದರೂ ಸರ್ಕಾರಗಳ ನೆರವು ಇಲ್ಲದೆ ಅದನ್ನು ನಿಭಾಯಿಸುವುದು ಆಗದ ಕೆಲಸ. ಹಣದುಬ್ಬರಕ್ಕೆ ಕಾರಣವಾಗಿರುವ ತೈಲೋತ್ಪನ್ನಗಳ ಬೆಲೆ ಇಳಿಸಲು, ಅಡುಗೆ ಎಣ್ಣೆಗಳ ಬೆಲೆ ತಗ್ಗಿಸಲು ಸರ್ಕಾರಗಳು ತ್ವರಿತವಾಗಿ ಕ್ರಮ ಕೈಗೊಳ್ಳದೆ ಇದ್ದರೆ, ಆರ್‌ಬಿಐ ಕ್ರಮದಿಂದ ಹೆಚ್ಚಿನ ಪ್ರಯೋಜನ ಆಗದಿರಬಹುದು.

ದಿನದ ಟ್ವೀಟ್

ಭಾರತವನ್ನು ಉಳಿಸಿ



ಹೈದರಾಬಾದ್‌ನಿಂದ ಭಯಾನಕ ಸುದ್ದಿಯೊಂದು ಬಂದಿದೆ. ಮುಸ್ಲಿಂ ಯುವತಿಯನ್ನು ಹಿಂದೂ ಯುವಕ ಮದುವೆಯಾದ. ಯುವತಿಯ ಸಹೋದರರು ಆ ಯುವಕನನ್ನು ಕ್ಯಾಮೆರಾ ಎದುರಿನಲ್ಲೇ ಹೊಡೆದು ಸಾಯಿಸಿದರು. ದ್ವೇಷವು ಮನುಕುಲವನ್ನು ರಿಪೇರಿ ಮಾಡಲಾಗದಷ್ಟು ಹಾಳುಮಾಡಬಹುದು. ತೀರಾ ತಡವಾಗುವ ಮೊದಲೇ ಈ ಮತಾಂಧರನ್ನು ಶಿಕ್ಷಿಸಿ. ಭಾರತವನ್ನು ಉಳಿಸಿ.

ಎಸ್. ಇರ್ಫಾನ್ ಹಬೀಬ್, ಇತಿಹಾಸಕಾರ

ಕಿಡಿನುಡಿ



ಪಂಚಮಸಾಲಿ ಸಮುದಾಯಕ್ಕೆ ಹಿಂದುಳಿದ ವರ್ಗಗಳ ಪ್ರವರ್ಗ 2ಎ ಅಡಿ ಮೀಸಲಾತಿ ನೀಡದಿದ್ದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮತ್ತೊಂದು ಆತಂಕ ಖಂಡಿತ ಎದುರಾಗುತ್ತದೆ. ನಾವು ಅವರಿಗೆ ಟೆನ್ಷನ್ ಕೊಡುತ್ತಲೇ ಇರುತ್ತೇವೆ.

ಬಸನಗೌಡ ಪಾಟೀಲ ಯತ್ನಾಳ್, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಮಂಗಳವಾರ, 6-5-1997

• ದಳ ಅಧ್ಯಕ್ಷತೆ: ಪಟೇಲ್‌ಗೆ ಆಯ್ಕೆ ಅಧಿಕಾರ

ಬೆಂಗಳೂರು, ಮೇ 5– ರಾಜ್ಯ ಜನತಾದಳದ ಅಧ್ಯಕ್ಷ ಪದವಿಗೆ ಸರ್ವಸಮ್ಮತವಾದ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಸಂಪುಟದ ಹಿರಿಯ ಸಚಿವರ ಸಭೆಯು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರಿಗೆ ಇಂದು ಇಲ್ಲಿ ಅಧಿಕಾರ ನೀಡಿತು.

ಸಭೆಯ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಈ ತಿಂಗಳು 10 ರಂದು ಪಕ್ಷದ ರಾಜ್ಯ ಘಟಕದ ಪದಾಧಿಕಾರಿಗಳ ಹುದ್ದೆಗಳಿಗೆ ಚುನಾವಣೆ ನಡೆಯಲಿದೆ ಎಂದರು.

ಪಕ್ಷದ ಹಿತದೃಷ್ಟಿಯಿಂದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುವುದು ಬೇಡ ಎಂದು ಅಭಿಪ್ರಾಯಪಟ್ಟ ಸಭೆಯು ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ಮುಖ್ಯಮಂತ್ರಿ ಅವರಿಗೆ ಬಿಟ್ಟಿದೆ ಎಂದು ಅವರು ಹೇಳಿದರು.

• ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಅಸ್ತು

ನವದೆಹಲಿ, ಮೇ 5– ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಯೋಜನೆಗೆ ಒಪ್ಪಿಗೆ ಕೊಡಲಾಗಿದೆ ಎಂದು ನಾಗರಿಕ ವಿಮಾನಯಾನ ಖಾತೆ ಸಚಿವ ಸಿ.ಎಂ.ಇಬ್ರಾಹಿಂ ಅವರು ಇಂದು ಇಲ್ಲಿ ತಿಳಿಸಿದರು. ವಿಮಾನ ನಿಲ್ದಾಣವನ್ನು ನಿರ್ಮಿಸಿದ ನಂತರ ಸ್ವಂತವಾಗಿ ನಿರ್ವಹಿಸಿ ಬಳಸಿ ವರ್ಗಾವಣೆ ಮಾಡಬೇಕೆಂಬ (ಬಿಒಟಿ) ಷರತ್ತಿನ ಅನ್ವಯ ಒಪ್ಪಿಗೆ ಕೊಡಲಾಗಿದೆ ಎಂದು ಅವರು ಹೇಳಿದರು.

ಈ ಬದಲಾವಣೆಗೆ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯದ ಜತೆಗೆ ಕರ್ನಾಟಕ ಸರ್ಕಾರ ಮತ್ತು ಉದ್ದೇಶಿತ ವಿಮಾನ ನಿಲ್ದಾಣ ಯೋಜನೆಯ ಗುತ್ತಿಗೆ ಪಡೆದಿರುವ ಟಾಟಾ ಸಂಸ್ಥೆಯು ಒಪ್ಪಿವೆ ಎಂದು ಅವರು 'ಪ್ರಜಾವಾಣಿ'ಗೆ ವಿವರಿಸಿದರು.

50 ವರ್ಷಗಳ ಹಿಂದೆ

ಶನಿವಾರ, 6-5-1972

• ಫಿರಂಗಿ ಬೆಂಬಲದೊಡನೆ ಭಾರತ ಸೇನಾ ಸ್ಥಾನದ ಮೇಲೆ ಪಾಕ್ ದಾಳಿ

ನವದೆಹಲಿ, ಮೇ 5– ಫಿರಂಗಿಗಳ ಬೆಂಬಲದೊಡನೆ ಪಾಕಿಸ್ತಾನಿ ಸೈನಿಕರು ಇಂದು ಬೆಳಿಗ್ಗೆ ಕಾಶ್ಮೀರದ ಕೈಯಾನ್ ಪ್ರದೇಶದಲ್ಲಿ ಭಾರತ ಸೇನೆಯ ವಶದಲ್ಲಿರುವ ಸ್ಥಾನವೊಂದರ ಮೇಲೆ ದಾಳಿ ನಡೆಸಿದರು.

ಈ ಸ್ಥಾನವು ತಿತ್ವಾಲ್‌ಗೆ ಆಗ್ನೇಯಕ್ಕೆ ಹದಿನಾರು ಕಿಲೋಮೀಟರ್ ದೂರದಲ್ಲಿದೆ.

ಕಳೆದ ಡಿಸೆಂಬರ್‌ನಲ್ಲಿ ನಡೆದ ಯುದ್ಧದ ಬಳಿಕ ಪಾಕಿಸ್ತಾನವು ಎಸಗಿರುವ ಕದನವಿರಾಮ ಉಲ್ಲಂಘನೆಯಲ್ಲಿ ಇಂದಿನದು ಅತ್ಯಂತ ತೀವ್ರ ಸ್ವರೂಪದ್ದೆಂದು ಹೇಳಲಾಗಿದೆ.

• ದಕ್ಷಿಣ ವಿಯಟ್ನಾಂಗೆ ಅಮೆರಿಕದಿಂದ ಹೆಚ್ಚು ವಿಮಾನಗಳ ರವಾನೆ

ನ್ಯೂಯಾರ್ಕ್, ಮೇ 5– ಆರು ವಾರಗಳಲ್ಲಿ 2ನೇ ಬಾರಿಗೆ ಪ್ಯಾರಿಸ್ ಶಾಂತಿ ಮಾತುಕತೆಯನ್ನು ಏಕಪಕ್ಷೀಯವಾಗಿ ರದ್ದುಪಡಿಸಿದ ನಿಕ್ಸನ್ ಆಡಳಿತ ಇಂದು ವಿಯಟ್ನಾಂ ಪ್ರದೇಶಕ್ಕೆ 6ನೇ ವಿಮಾನ ವಾಹಕ ನೌಕೆಯೊಂದನ್ನೂ, ಹೆಚ್ಚು ವಿಮಾನಗಳನ್ನೂ ಕಳುಹಿಸುವುದರ ಮೂಲಕ ಅಲ್ಲಿ ತನ್ನ ವಾಯುಪಡೆಯ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಿತು. ಅಮೆರಿಕದ ವಿಮಾನ ಪಡೆ ವಿಯಟ್ನಾಂದಲ್ಲಿ ಈಗ ಒಂದು ಸಾವಿರದಷ್ಟು ಹೋರಾಟದ ವಿಮಾನಗಳನ್ನು ಹೊಂದಿದಂತಾಗುತ್ತದೆ.

ಜನಮುಖಿಯಾಗಲಿ ತಂತ್ರಜ್ಞಾನ

ಜನಹಿತ, ನೈತಿಕತೆ ಹಾಗೂ ಪರಿಸರದ ಸ್ವಾಸ್ಥ್ಯ ಕಾಪಾಡುವ ತಂತ್ರಜ್ಞಾನಗಳ ಜರೂರತ್ತಿದೆ ಈಗ



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಅನುಕೂಲಸ್ಥರು ತಾವು ಧರಿಸಿದ ರಫ್ತಿನ ಗುಣಮಟ್ಟದ ಬಟ್ಟೆ, ಕೈಗಡಿಯಾರ ಇತ್ಯಾದಿಗಳನ್ನು ನಾಲ್ಕು ಜನರೆದುರು ಪ್ರದರ್ಶಿಸಿ ಬೀಗುವ ಸಂಗತಿ ಎಪ್ಪತ್ತು-ಎಂಬತ್ತರ ದಶಕಗಳಲ್ಲಿ ಸಾಮಾನ್ಯವಾಗಿತ್ತು. 'ಹಾಗಾದರೆ, ಜನಸಾಮಾನ್ಯರಿಗೆ ಮಾರುಕಟ್ಟೆಯಲ್ಲಿ ದೊರಕುವ ಉತ್ಪನ್ನಗಳೆಲ್ಲ ಕಳಪೆಯವೇ?' ಇಂಥದೊಂದು ಪ್ರಶ್ನೆಯನ್ನು ಆ ಕಾಲಘಟ್ಟದ ಕಾರ್ಯಾಗಾರವೊಂದರಲ್ಲಿ ಪ್ರಸಿದ್ಧ ವಿಜ್ಞಾನಿ ಎ.ಕೆ.ಎನ್. ರೆಡ್ಡಿ ಅವರ ಮುಂದಿಟ್ಟಾಗ, ಅವರ ಉತ್ತರ ಮಾರ್ಮಿಕವಾಗಿತ್ತು. 'ವಿಜ್ಞಾನ- ತಂತ್ರಜ್ಞಾನಗಳು ಯಾವಾಗಲೂ ಉತ್ಕೃಷ್ಟವಾಗಿಯೇ ಇರುತ್ತವೆ. ಆದರೆ, ಉತ್ಪಾದಕರು ಹಾಗೂ ಮಾರಾಟಗಾರರ ನೈತಿಕತೆ ಆಧರಿಸಿ ಆ ಉತ್ಪನ್ನಗಳ ಗುಣಮಟ್ಟ ಏರುಪೇರಾದಾವು!' ಸರ್ಕಾರಿ ನಿಯಂತ್ರಣದಲ್ಲಿ ಬಂದಿಯಾಗಿದ್ದ ಅಂದಿನ ಉದ್ಯಮ ಕ್ಷೇತ್ರಕ್ಕೆ ಹಿಡಿದ ಕೈಗನ್ನಡಿಯಂತಿತ್ತು ಆ ಮಾತು.

ಕೈಗಾರಿಕಾ ಕ್ರಾಂತಿಯ ನಂತರ ತಂತ್ರಜ್ಞಾನ ಕ್ಷೇತ್ರವು ವೇಗವಾಗಿ ವಿಕಾಸವಾಯಿತು ಎಂಬುದೇನೋ ನಿಜ. ಆದರೆ, ಅದು ಅಧಿಕಾರಸ್ಥರ ಕೈವಶವಾಗುತ್ತಾ, ಜನಸಾಮಾನ್ಯರಿಗೆ ಗಗನಕುಸುಮವಾಗಿದ್ದು, ಇಪ್ಪತ್ತನೇ ಶತಮಾನದಲ್ಲಿ ಜಗತ್ತಿನಾದ್ಯಂತ ಕಂಡ ವಿದ್ಯಮಾನ. ಹಾಗೆಂದೇ, ಗುಣಮಟ್ಟದ ಉತ್ಪನ್ನ ಹಾಗೂ ಸೇವೆಗಳನ್ನು ಎಲ್ಲರ ಕೈಗಿಡುವ ದಾರಿಗಳನ್ನು ಪ್ರಪಂಚದೆಲ್ಲೆಡೆ ಸಮಾಜಮುಖಿ ಚಿಂತಕರೆಲ್ಲ ಶೋಧಿಸುತ್ತಲೇ ಬಂದರು. ಅಂಥ ಪ್ರಯತ್ನಗಳ ಫಲವಾಗಿ ರೂಪುಗೊಂಡಿದ್ದರಲ್ಲಿ 'ಜನ-ವಿಜ್ಞಾನ ಆಂದೋಲನ'ವೂ ಒಂದು.

ಆದರೆ, ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಸ್ಫೋಟಗೊಂಡ ಆರ್ಥಿಕ ಉದಾರೀಕರಣ ಚಿಂತನೆಗಳು, ಈ ಜನಕೇಂದ್ರಿತ ವಿಜ್ಞಾನ- ತಂತ್ರಜ್ಞಾನಗಳ ಪ್ರಯತ್ನಗಳನ್ನು ಮೂಲೆಗುಂಪಾಗಿಸಿದವು. ಉದ್ಯಮಗಳ ಖಾಸಗೀಕರಣವಾಗಿಬಿಟ್ಟರೆ ತಂತ್ರಜ್ಞಾನವು ಸುಲಭವಾಗಿ ಜನಸಾಮಾನ್ಯರ ಮಡಿಲು ಸೇರುತ್ತದೆ ಎಂಬ ವಾದವನ್ನು ಆಕರ್ಷಕವಾಗಿ ಮುಂದಿಡಲಾಯಿತು. ಎಂಬತ್ತು-ತೊಂಬತ್ತರ ದಶಕಗಳಲ್ಲಿ ದೇಶದಲ್ಲಿ ನಡೆದ 'ಗ್ಯಾಟ್' ಒಪ್ಪಂದದ ಚರ್ಚೆಗಳಿರಲೀ, ಆನಂತರದಲ್ಲಿ ಸರ್ಕಾರ ಕೈಗೊಂಡ ಆರ್ಥಿಕ ಉದಾರೀಕರಣದ ಪ್ರಕ್ರಿಯೆಗಳಿರಲೀ, ಈ ಸಂಕಥನವನ್ನೇ ನಿರೂಪಿಸಿದವಲ್ಲವೇ? ದೇಶವು ಉದಾರೀಕರಣಕ್ಕೆ ತೆರೆದುಕೊಂಡು ಈಗ ಮೂರು ದಶಕಗಳೇ ಸಂದಿವೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಗಳಿಗೆಯಲ್ಲಿ ಒಮ್ಮೆ ಹಿಂತಿರುಗಿ ಅವಲೋಕಿಸಿದರೆ ಕಾಣುವುದೇನು? ಬಟ್ಟೆ, ಕೈಗಡಿಯಾರ, ಕೃಷಿ ಸಲಕರಣೆ, ವಿದ್ಯುನ್ಮಾನ ಉಪಕರಣ ಅಥವಾ ಇನ್ನೇನೇ ಇರಲಿ, ಗೊಂದಲಕ್ಕೀಡಾಗುವಷ್ಟು ಥರಾವರಿ ಬಗೆಗಳು ಮಾರುಕಟ್ಟೆಯನ್ನು ವ್ಯಾಪಿಸಿವೆ. ಅವುಗಳಲ್ಲಿ ನಿಜಕ್ಕೂ ಅವಶ್ಯಕವಾದವುಗಳು ಯಾವುವು? ಅವುಗಳ ಗುಣಮಟ್ಟವೇನು? ಕೊಳ್ಳಲು ತಾವೆಷ್ಟು ಶಕ್ತರು? ಇತ್ಯಾದಿಗಳೆಲ್ಲ ಅರ್ಥವಾಗದೆ ಬಹುತೇಕ ಜನಸಾಮಾನ್ಯರು ದಿಗ್ಭ್ರಮೆಗೆ ಒಳಗಾಗಿದ್ದಾರೆ!

ಸರ್ಕಾರಿ ಕ್ಷೇತ್ರ ಹಾಗೂ ಖಾಸಗಿ ವಲಯಗಳೆರಡೂ ನಿತ್ಯಜೀವನಕ್ಕೆ ಅವಶ್ಯವಿರುವ ತಂತ್ರಜ್ಞಾನಗಳನ್ನು ತಮ್ಮದೇ ರೀತಿಯಲ್ಲಿ ಜನರಿಂದ ದೂರವಿರಿಸಲು ಪ್ರಯತ್ನಿಸುತ್ತಿರುವಂತಿವೆ. ಜನರನ್ನು ಸದಾ ತಮ್ಮ ಅವಲಂಬಿಗಳನ್ನಾಗಿಸುವುದರಲ್ಲೇ ಅವುಗಳ ಅಸ್ತಿತ್ವ ಅಡಗಿದೆಯಲ್ಲವೇ? ಹಾಗಾದರೆ, ಜನಸಾಮಾನ್ಯರ ಅಗತ್ಯದ ತಂತ್ರಜ್ಞಾನ ಎಂದರೇನು? ಅದು ಯಾವುದು? ಇದಕ್ಕೆ ಸರಳವಾಗಿ ಉತ್ತರಿಸಬೇಕೆಂದರೆ, 'ದೇಶಕಾಲಕ್ಕೆ ಅನುಗುಣವಾಗಿ ಸಮುದಾಯಗಳೇ ತಮ್ಮ ಆದ್ಯತೆಗಳನ್ನು ಕಂಡುಕೊಂಡು ಅಳವಡಿಸಿಕೊಳ್ಳುವ ತಂತ್ರಜ್ಞಾನ' ಎನ್ನಬಹುದು. ಅದಕ್ಕೆ ಅಗತ್ಯವಾದ ಪೂರಕ ಆವರಣವನ್ನು ನಿರ್ಮಿಸುವ ಜವಾಬ್ದಾರಿಯು ಸರ್ಕಾರ ಹಾಗೂ ಖಾಸಗಿ ಕ್ಷೇತ್ರಗಳದ್ದಾಗಬೇಕು. ಗಾಂಧೀಜಿಯ ಸ್ವದೇಶಿ ಕಲ್ಪನೆಯ ಮೂಲದ್ರವ್ಯ ಅದು. ತಂತ್ರಜ್ಞಾನವನ್ನು ಈ ರೀತಿಯಲ್ಲಿ ಸಮಾಜ-ಮುಖಿಯಾಗಿಸಲು ಯತ್ನಿಸಿ, ಅದರ ವಿಧಿ-ವಿಧಾನಗಳ ಕುರಿತೂ ಚಿಂತಿಸಿದ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಇ.ಎಫ್. ಶುಮೇಕರ್ ತರಹದ ಚಿಂತಕರ ಶ್ರಮದ ಫಲವಾಗಿ, ಅದು 'ಸೂಕ್ತ-ತಂತ್ರಜ್ಞಾನ' (Appropriate Technology) ಎಂದೇ ಪ್ರಚಲಿತವಾಯಿತು. ಭಾರತದಲ್ಲಿ ಸಹ ಸ್ವಾತಂತ್ರ್ಯ ಬಂದಮೇಲೆ ಈ ಬಗೆಯ 'ಸೂಕ್ತ-ತಂತ್ರಜ್ಞಾನ'ಗಳ ಅಭಿವೃದ್ಧಿ ಹಾಗೂ ಅಳವಡಿಕೆಯ ವ್ಯಾಪಕ ಪ್ರಯತ್ನಗಳಾದವು. ಎ.ಕೆ.ಎನ್. ರೆಡ್ಡಿ ಅವರು ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದಲ್ಲಿ ಸ್ಥಾಪಿಸಿದ 'ಅಸ್ತ್ರ' ಕೇಂದ್ರವು ಈ ನಿಟ್ಟಿನಲ್ಲಿ ಕೈಗೊಂಡ ಸಂಶೋಧನೆ ಹಾಗೂ ವಿಸ್ತರಣೆ ಕಾರ್ಯಗಳು ಜಾಗತಿಕ ಮೌಲ್ಯವನ್ನು ಹೊಂದಿದ್ದಂತಹವು. ಸಗಣಿಯಿಂದ ಗೋಬರ್ ಗ್ಯಾಸ್ ತಯಾರಿಸುವ ಯಂತ್ರ, ಸೌರಒಲೆ, ಕಡಿಮೆ ಕಟ್ಟಿಗೆ ಬಳಸುವ ಹೊಗೆರಹಿತ ಒಲೆ, ಬೀಜದಿಂದ ಸಿಪ್ಪೆ ಬಿಡಿಸುವ ಯಂತ್ರ, ಕಸದಿಂದ ವಿದ್ಯುತ್ ಉತ್ಪಾದನೆ ಇತ್ಯಾದಿ. ದೇಶದಾದ್ಯಂತ ಕೋಟ್ಯಂತರ ಕುಟುಂಬಗಳ ಬದುಕನ್ನು ಬದಲಾಯಿಸಿದ ಮೌನಕ್ರಾಂತಿಯದು.

ಹಾಗಾದರೆ, ಈ 'ಸೂಕ್ತ-ತಂತ್ರಜ್ಞಾನ'ಗಳ ಸ್ವರೂಪವೇನು? ಇದನ್ನು ಮೂರು ಆಯಾಮಗಳಲ್ಲಿ ಗುರುತಿಸಬಹುದು. ಮೊದಲಿನದು, ಅದರ ಮೂಲದ ಕುರಿತು. 'ಗೋಬರ್-ಅನಿಲ'ವನ್ನೇ ಒಮ್ಮೆ ಗಮನಿಸಿ. ಸಗಣಿಯಲ್ಲಿನ ಸೂಕ್ಷ್ಮಾಣು ಜೀವಿಗಳು ಆಮ್ಲಜನಕರಹಿತ ಸ್ಥಿತಿಯಲ್ಲಿ ಉತ್ಪಾದಿಸುವ ಮಿಥೇನ್ ಅನಿಲ ಆಧಾರಿತ ಈ ಇಂಧನವು ಆಧುನಿಕ ಜೀವವಿಜ್ಞಾನದ ಕಾಣ್ಕೆ. ಮಲೆನಾಡು ಅಥವಾ ಕರಾವಳಿಯ ಹಳ್ಳಿಗಳಲ್ಲಿ ನದಿ-ತೊರೆಗಳಿಗೆ ಅಡ್ಡಲಾಗಿ ಸ್ಥಳೀಯರೇ ನಿರ್ಮಿಸುವ ಒಡ್ಡುಗಳು, ಲಾಗಾಯ್ತಿನಿಂದಲೂ ಬೇಸಿಗೆಯಲ್ಲಿ ನೀರು ಪೂರೈಸುವ ಒಂದು ಯಶಸ್ವೀ ತಂತ್ರ. ಪಾರಂಪರಿಕ ಜ್ಞಾನದ ಕೊಡುಗೆಯದು. ಹಳ್ಳಿ-ನಗರವಾಸಿಗಳ ವರ್ತಮಾನದ ಬದುಕಿನ ಸಮಸ್ಯೆಗಳಿಗೆ ತಂತ್ರಜ್ಞಾನದ ಪರಿಹಾರ ಕಂಡುಕೊಳ್ಳಲು, ಪ್ರಾಚೀನ ಹಾಗೂ ಅರ್ವಾಚೀನ ಜ್ಞಾನ ಮೂಲಗಳೆರಡನ್ನೂ ಸೂಕ್ತವಾಗಿ ಒಗ್ಗಿಸಿಕೊಳ್ಳುವುದೇ ಇಲ್ಲಿರುವ ಮೂಲಸೂತ್ರ.



ಎರಡನೆಯದು, ಇದರ ಲಭ್ಯತೆ ಹಾಗೂ ನಿರ್ವಹಣೆ ಕುರಿತಾಗಿ. 'ಸೂಕ್ತ-ತಂತ್ರಜ್ಞಾನ'ಗಳು ಸುಲಭವಾಗಿ ಜನರ ಕೈಗೆಟುಕಬೇಕು. ಕಡಿಮೆ ಕಟ್ಟಿಗೆ ಬೇಡುವ ಸುಧಾರಿತ ಒಲೆಗಳು ಇದಕ್ಕೆ ಒಳ್ಳೆಯ ಉದಾಹರಣೆ. ಕಡಿಮೆ ವೆಚ್ಚ ಹಾಗೂ ಸರಳ ತಂತ್ರಗಳ ಈ ಒಲೆಗಳು, ಗ್ರಾಮೀಣ ಕುಟುಂಬಗಳ ಉರುವಲು ಕಟ್ಟಿಗೆ ಅವಲಂಬನೆಯನ್ನು ಕಡಿಮೆ ಮಾಡಬಲ್ಲವು. ಜೊತೆಗೆ, ಮನೆಗಳನ್ನು ಹೊಗೆ ರಹಿತವಾಗಿಸಿ ಕುಟುಂಬದ ಆರೋಗ್ಯವನ್ನೂ ಕಾಯಬಲ್ಲವು. ಇವುಗಳ ಸ್ಥಾಪನೆ ಹಾಗೂ ನಿರ್ವಹಣೆಯು ತರಬೇತಿ ಪಡೆದ ಸ್ಥಳೀಯ ಕುಶಲ ಕರ್ಮಿಗಳಿಂದಲೇ ಸಾಧ್ಯ. ಎಂಬತ್ತರ ದಶಕದಲ್ಲಿ ಕೊಳವೆಬಾವಿಗಳ ಮೂಲಕ ರಾಜ್ಯದೆಲ್ಲೆಡೆ ಕುಡಿಯುವ ನೀರಿನ ಬವಣೆ ನೀಗಿಸಿದ ನಜೀರ್ ಸಾಬ್ ಅವರ ಸಾಧನೆಯಲ್ಲಿ, ಕೊಳವೆಬಾವಿಗಳಿಗೆ ಅಳವಡಿಸಿದ ಸರಳ ಕೈ-ಪಂಪುಗಳ ಕೊಡುಗೆ ಮಹತ್ವದ್ದಾಗಿತ್ತಲ್ಲವೇ? ಸರಳ ತಂತ್ರಜ್ಞಾನವನ್ನು ತಳಮಟ್ಟದಲ್ಲಿ ಅರ್ಥಪೂರ್ಣವಾಗಿ ಅಳವಡಿಸಿದ ಯಶೋಗಾಥೆಗಳಿವು.


ಕೊನೆಯದಾಗಿ, ಇವುಗಳ ಸುಸ್ಥಿರತೆ ಮತ್ತು ಸರ್ವಸ್ಪರ್ಶಿ ಗುಣ. ಇವು ಪರಿಸರ ಸುರಕ್ಷತೆ ಪಾಲಿಸಬೇಕು ಹಾಗೂ ಬಡವ-ಬಲ್ಲಿದರೆನದೆ ಸರ್ವರಿಗೂ ಲಭ್ಯವಾಗಬೇಕು. ಕೇರಳವನ್ನು ಕರ್ಮಭೂಮಿಯನ್ನಾಗಿಸಿಕೊಂಡ ಬ್ರಿಟಿಷ್ ಮೂಲದ ವಾಸ್ತುಶಿಲ್ಪಿ ಲಾರಿ ಬೇಕರ್, ಸ್ಥಳೀಯ ಮಣ್ಣಿನಿಂದಲೇ ಗುಣಮಟ್ಟದ ಇಟ್ಟಿಗೆ ತಯಾರಿಸುವ ವಿಧಾನ ಅಭಿವೃದ್ಧಿಪಡಿಸಿ, ಕಟ್ಟಡ ವಿನ್ಯಾಸ ಹಾಗೂ ನಿರ್ಮಾಣ ಕ್ಷೇತ್ರಕ್ಕೆ ನೀಡಿದ ಕಾಣಿಕೆ ಅದ್ಭುತವಾದುದು. ಈ ಇಟ್ಟಿಗೆ ಬಳಸಿ ನಿರ್ಮಿಸಿದ ಕಟ್ಟಡಗಳ ತಾಪಮಾನವು ಸಿಮೆಂಟ್ ಇಟ್ಟಿಗೆ ಮನೆಗಳಿಗಿಂತ ಕಡಿಮೆಯಿದ್ದು ಹಿತವಾದ ಪರಿಸರ ನಿರ್ಮಿಸಬಲ್ಲವು. ನಿರ್ಮಾಣ ವೆಚ್ಚ ಅಲ್ಪವಾದ್ದರಿಂದ, ಎಲ್ಲರ ಕೈಗೆಟುಕಬಲ್ಲದು ಕೂಡ. ನಮ್ಮಂಥ ಉಷ್ಣವಲಯದ ದೇಶಕ್ಕೆ ಹೇಳಿಮಾಡಿಸಿದ ತಂತ್ರಜ್ಞಾನವಿದು!

ಆದರೆ, 'ಅಭಿವೃದ್ಧಿ'ಯನ್ನೇ ಸ್ವಂತ ಲಾಭದ ಉದ್ಯಮವಾಗಿಸಿಕೊಳ್ಳುತ್ತಿರುವ ಇಂದಿನ ಆಡಳಿತ ವ್ಯವಸ್ಥೆಗಳು ಹಾಗೂ ಖಾಸಗಿ ಉದ್ಯಮ ವಲಯಗಳಿಗೆ ಇದು ಬೇಕಿರುವಂತಿಲ್ಲ. ಇದಕ್ಕೆ ಬಹಳಷ್ಟು ಪುರಾವೆಗಳು ದೊರಕುತ್ತವೆ. ಮಲೆನಾಡು-ಕರಾವಳಿಯಲ್ಲಿ ರೈತರು ನಿರ್ಮಿಸುವ ಸರಳ ಒಡ್ಡುಗಳ ಸಂಗತಿಯನ್ನೇ ನೋಡಿ. ಅದಕ್ಕೆ ಹಳ್ಳಿಗರಿಗೆ ಬೇಕಾದ್ದು ಸರ್ಕಾರದ ಇನಿತು ಸಹಾಯ ಹಸ್ತ ಮಾತ್ರ. ಆದರೆ, ಸಣ್ಣ ನೀರಾವರಿ ಇಲಾಖೆಯು ಅದನ್ನು ಮಾಡದೆ, ರೈತ ಕಲ್ಯಾಣದ ಹೆಸರಿನಲ್ಲಿ ಕಾಂಕ್ರೀಟ್ ಅಣೆಕಟ್ಟುಗಳನ್ನು ಕಟ್ಟುವ 'ಪಶ್ಚಿಮವಾಹಿನಿ ಯೋಜನೆ' ಕೈಗೊಳ್ಳುತ್ತಿದೆ. ಇದು, ಸಾವಿರಾರು ಕೋಟಿ ಹಣ ಬೇಡುವ ಯೋಜನೆ. ಸರಳ ಒಡ್ಡು ಕಟ್ಟುವ ರೈತರ ಕೌಶಲವನ್ನೇ ಇದು ನುಂಗಿಹಾಕುತ್ತದೆ! ಸೂಕ್ತ ತಂತ್ರಜ್ಞಾನದಿಂದ ಜನರನ್ನು ದೂರವಿರಿಸುವ ಅವಿವೇಕಕ್ಕೆ ತಾಜಾ ಉದಾಹರಣೆಯಿದು.

ಕನಿಷ್ಠ ಹಣ ಹಾಗೂ ಗರಿಷ್ಠ ಜನಸಹಭಾಗಿತ್ವವಿರುವ 'ಸೂಕ್ತ-ತಂತ್ರಜ್ಞಾನ'ಗಳಿಗೆ ಸಮಾಜವು ಈಗಲಾದರೂ ಒತ್ತಾಸೆಯಾಗಿ ನಿಲ್ಲಬೇಕಿದೆ.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ನಿಂಬೆ ಮಹಾತ್ಮೆ!

• ಬಿ.ಎನ್. ಮಲ್ಲೇಶ್

'ಹಲೋ.. ಕೆಇಬಿನಾ? ಕರೆಂಟ್ ಯಾವಾಗ ಬರುತ್ತೆ?'

'ಗೊತ್ತಿಲ್ಲ, ಲೈನ್ ರಿಪೇರಿ ಇದೆ. ಯಾರು ಮಾತಾಡೋದು?'

'ನಾನು ಲೆಮನ್ ಮರ್ಚೆಂಟ್ ತೆಪರೇಸಿ ಅಂತ. ಅಲ್ರೀ ತೆಗೆಯೋದು ಗೊತ್ತಾಗುತ್ತೆ, ಕೊಡೋದು ಗೊತ್ತಾಗಲ್ವಾ? ಯಾವಾಗ ನೋಡಿದ್ರು ಕರೆಂಟಿರಲ್ಲ, ಬಿಲ್ ಮಾತ್ರ ಯದ್ವಾತದ್ವಾ ಬಂದಿರುತ್ತೆ...'

'ಜುಜುಬಿ ನಿಂಬೆಹಣ್ಣು ಮಾರೋನು ನೀನು, ಎಷ್ಟ್ ಮಾತಾಡ್ತೀಯ, ತಡ್ಕೋ ಬರುತ್ತೆ...'

'ರೀ ಸ್ವಾಮಿ, ಜುಜುಬಿ ಗಿಜುಬಿ ಅಂದ್ರೆ ಅಷ್ಟೆ, ಈಗ ನಿಂಬೆಹಣ್ಣಿನ ರೇಟು ಕೇಳಿದೀರಾ?'

'ಹೋಗ್ಲಿ ಎಷ್ಟಪ್ಪ ಕೇಜಿಗೆ?'

'ಕೇಜಿ ಗೀಜಿ ಇಲ್ಲ, ಒಂದಕ್ಕೆ ಇಪ್ಪತ್ತು, ಮೂರಕ್ಕೆ ಐವತ್ತು...'

'ನಮಗಾದ್ರೆ ಎಷ್ಟಕ್ಕೆ ಕೊಡ್ತೀಯ?'

'ನಿಮಗಾದ್ರೆ ಐವತ್ತಕ್ಕೆ ಒಂದು'

'ಅರೆ, ಯಾಕಪ್ಪಾ?'

'ಅದು ಹಂಗೇ... ನಿಮಗೆ ಐವತ್ತಕ್ಕೊಂದು, ಪಾನಕ, ಚಿತ್ರಾನ್ನ ಮಾಡೋರಿಗೆ ಇಪ್ಪತ್ತಕ್ಕೆ ಮೂರು, ಗಾಡಿ ಪೂಜೆ ಮಾಡೋರಿಗೆ ಇಪ್ಪತ್ತಕ್ಕೆ ಎರಡು, ರಾಜಕಾರಣಿಗಳ ಕೈಗೆ ಕೊಡೋಕಾದ್ರೆ ನೂರಕ್ಕೆ ಮೂರು, ಮಾಟ ಮಂತ್ರ ಮಾಡೋರಿಗೆ ಕೊಡೋದೇ ಇಲ್ಲ...'

'ಇದೇನಯ್ಯ ಅನ್ಯಾಯ? ಅದೇ ನಿಂಬೆಹಣ್ಣು, ರೇಟು ಮಾತ್ರ ಬೇರೆಬೇರೆ?'

'ಮತ್ತೆ ನೀವು ಕರೆಂಟ್‌ನೋರು ಮಾಡೋದೇನು? ಒಂದೇ ಕರೆಂಟು, ಮನೆಗೆ ಒಂದು ರೇಟು, ಅಂಗಡಿಗೆ ಒಂದು ರೇಟು, ಕೈಗಾರಿಕೆಗೆ ಇನ್ನೊಂದು ರೇಟು... ಹಂಗೆ ನಾವೂನು...' ತೆಪರೇಸಿ ತಿರುಗೇಟು ಕೊಟ್ಟ.

'ನಾವು ಚಿತ್ರಾನ್ನಕ್ಕೆ ಅಂತ ತಗೊಂಡ್ ಹೋಗಿ ರಾಜಕಾರಣಿಗಳ ಕೈಗೆ ಕೊಟ್ರೆ?'

'ಅದೆಲ್ಲ ನಡೆಯಲ್ಲ, ಬ್ಲೂ ಟೂತ್ ತರ ನಾವೂ ನಿಂಬೆಹಣ್ಣಲ್ಲಿ ಗ್ರೀನ್ ಟೂತ್ ಇಟ್ಟಿರ್ತೀವಿ... ಚೇಂಜ್ ಮಾಡಿದ್ರೆ ಶಾಕ್ ಹೊಡೆಯುತ್ತೆ...'

'ಹೌದೇನಯ್ಯ, ನಿಜಾನಾ?'

'ಅಯ್ಯೋ ಯಾವ ಟೂತೂ ಇಲ್ಲ, ಈಗೇನು ಕರೆಂಟ್ ಕೊಡ್ತೀರೋ ಅಥ್ವ ನಿಮ್ ಮೇಲೆ ನಿಂಬೆಹಣ್ಣಿನ ಮಾಟ ಮಾಡಿಸ್ಲೋ?'

ಫೋನ್ ಕಟ್ಟಾಯಿತು, ಕರೆಂಟ್ ಬಂತು!

ಸಂಗತ

ಮಾನವ ಸಂಪನ್ಮೂಲ: ಅಸಮಾನ ಹಂಚಿಕೆ

ಯಾವ ಕ್ಷೇತ್ರದಲ್ಲಿ ಎಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂಬ ಕುರಿತು ಸರ್ಕಾರ ಅಂಕಿಅಂಶ ಒದಗಿಸಿ ವಿದ್ಯಾರ್ಥಿಗಳ ಹಿತ ಕಾಯಬೇಕಿದೆ

• ಎಚ್.ಕೆ.ಶರತ್

ಮುಂದೇನು ಓದುವುದು? ಯಾವ ಪದವಿ ಅಥವಾ ಕೋರ್ಸ್ ಮುಗಿಸಿದರೆ ಕೆಲಸ ಸಿಗಲಿದೆ? ಯಾವ ಕ್ಷೇತ್ರದಲ್ಲಿ ಗುಣಮಟ್ಟದ ಉದ್ಯೋಗಾವಕಾಶಗಳಿವೆ? ಈ ಪ್ರಶ್ನೆಗಳು ಹಿಂದಿನಿಂದಲೂ ಕಾಲೇಜು ಹಂತದ ವಿದ್ಯಾರ್ಥಿಗಳನ್ನು ಕಾಡುತ್ತಲೇ ಬಂದಿವೆ. ನಿರುದ್ಯೋಗ ಸಮಸ್ಯೆ ಮತ್ತು ಗುಣಮಟ್ಟದ ಉದ್ಯೋಗಗಳ ಅಲಭ್ಯತೆ ಹೆಚ್ಚುತ್ತಿರುವ ಪ್ರಸ್ತುತ ಸಂದರ್ಭದಲ್ಲಿ, ವಿದ್ಯಾರ್ಥಿಗಳ ಎದುರು ಇರುವ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ನೆರವಾಗಬಹುದಾದ ಅಂಕಿ-ಅಂಶಗಳನ್ನು ಒದಗಿಸಲು ಸರ್ಕಾರ ಮುಂದಾಗಬೇಕಿದೆ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಮಾಡುವ ಕಾರ್ಯಸೂಚಿಯ ಭಾಗವಾಗಿ ಪದವಿ ಹಂತದ ಶಿಕ್ಷಣದಲ್ಲಿ ತರಲು ಹೊರಟಿರುವ ಬದಲಾವಣೆಗಳು ವಿದ್ಯಾರ್ಥಿಗಳಲ್ಲಿ ಗೊಂದಲಗಳನ್ನು ಹುಟ್ಟುಹಾಕುತ್ತಿವೆ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಮೆಷಿನ್ ಲರ್ನಿಂಗ್, ರೊಬಾಟಿಕ್ಸ್, ಆಟೊಮೇಷನ್ ಮುಂತಾದ ವಿಷಯಗಳಲ್ಲಿ ಪದವಿ ಪೂರೈಸಿದರೆ ಮುಂದೆ ಉದ್ಯೋಗಾವಕಾಶಗಳು ದೊರೆಯಲಿವೆಯೇ? ಉದ್ಯೋಗದಾತರು ತಮ್ಮನ್ನು ಸ್ವೀಕರಿಸಲಿದ್ದಾರೆಯೇ? ಸರ್ಕಾರಿ ಉದ್ಯೋಗಗಳನ್ನು ಪಡೆಯಲು ಯಾವ ಅಡೆತಡೆಯೂ ಇರುವುದಿಲ್ಲವೇ? ಹೀಗೆ ಹಲವು ಗೊಂದಲಗಳು ವಿದ್ಯಾರ್ಥಿ ಸಮೂಹವನ್ನು ಬಾಧಿಸತೊಡಗಿವೆ.

ಉದ್ಯಮ ವಲಯದೊಂದಿಗೆ ಸಮಾಲೋಚಿಸಿ, ಮುಂಬರುವ ದಿನಗಳಲ್ಲಿ ಯಾವ ಕ್ಷೇತ್ರದಲ್ಲಿ ಎಷ್ಟು ಉದ್ಯೋಗಾವಕಾಶಗಳು ಲಭ್ಯವಾಗಬಹುದು ಮತ್ತು ಉದ್ದಿಮೆಗಳಿಗೆ ಬೇಕಿರುವ ಕೌಶಲಗಳು ಏನೇನು ಎಂಬುದನ್ನು ತಿಳಿಸುವ ಪ್ರಯತ್ನವನ್ನು ಸರ್ಕಾರ ಮಾಡಿದರೆ, ಗೊಂದಲಗಳನ್ನು ತಕ್ಕಮಟ್ಟಿಗೆ ನಿವಾರಿಸಬಹುದು.

ಎಂಜಿನಿಯರಿಂಗ್ ಶಿಕ್ಷಣ ಕ್ಷೇತ್ರದಲ್ಲಿನ ಇತ್ತೀಚೆಗಿನ ಬೆಳವಣಿಗೆಗಳನ್ನು ಗಮನಿಸಿದರೂ ಸಾಕು, ಈ ರೀತಿಯ ಅಂಕಿ-ಅಂಶದ ಅಗತ್ಯ ಮನದಟ್ಟಾಗಲಿದೆ. ಕೆಲ ವರ್ಷಗಳಿಂದೀಚೆಗೆ ವಿದ್ಯಾರ್ಥಿಗಳು ಕಂಪ್ಯೂಟರ್ ಸೈನ್ಸ್‌ಗೆ ಸಂಬಂಧಿಸಿದ ಎಂಜಿನಿಯರಿಂಗ್ ಪದವಿಗೆ ಪ್ರವೇಶ ಪಡೆಯಲು ಮುಗಿಬೀಳುತ್ತಿದ್ದಾರೆ. ಕಂಪ್ಯೂಟರ್ ಸೈನ್ಸ್‌ಗೆ ಬೇಡಿಕೆ ಹೆಚ್ಚಿರುವುದನ್ನು ಮನಗಂಡಿರುವ ಕಾಲೇಜುಗಳು ಸೀಟುಗಳನ್ನು ಗಣನೀಯವಾಗಿ ಹೆಚ್ಚಳ ಮಾಡಿವೆ. ಇದೇ ವೇಳೆ, ಉಳಿದ ಎಂಜಿನಿಯರಿಂಗ್ ವಿಭಾಗಗಳಾದ ಮೆಕ್ಯಾನಿಕಲ್, ಸಿವಿಲ್ ಮತ್ತು ಎಲೆಕ್ಟ್ರಿಕಲ್ ವಿಭಾಗಗಳಿಗೆ ವಿದ್ಯಾರ್ಥಿಗಳು ಪ್ರವೇಶ ಪಡೆಯುವುದು ತೀವ್ರಗತಿಯಲ್ಲಿ ಕುಸಿದಿದೆ. ಎಷ್ಟೋ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ದಾಖಲಾಗದ ಕಾರಣಕ್ಕೆ ಮೆಕ್ಯಾನಿಕಲ್ ಮತ್ತು ಸಿವಿಲ್ ಎಂಜಿನಿಯರಿಂಗ್ ವಿಭಾಗಗಳನ್ನೇ ಮುಚ್ಚಲಾಗಿದೆ. ಇನ್ನು ಕೆಲವೆಡೆ ಮುಚ್ಚುವ ಹಂತದಲ್ಲಿವೆ. ಡಿಪ್ಲೊಮಾ ಕಾಲೇಜುಗಳಲ್ಲೂ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ.

ಓದು ಮುಗಿಸಿದ ಕೂಡಲೇ ಉದ್ಯೋಗ ಅರಸಲು ಬರುವ ಅನನುಭವಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರರನ್ನು ನೇಮಕ ಮಾಡಿಕೊಳ್ಳಲು ಇದುವರೆಗೂ ಪಾಲಿಸುತ್ತಿದ್ದ ಮಾನದಂಡಗಳನ್ನು ಬದಿಗಿರಿಸಬೇಕಾದ ಅನಿವಾರ್ಯ, ಗುಣಮಟ್ಟದ ವಾಹನ ತಯಾರಿಕೆಗೆ ಹೆಸರುವಾಸಿಯಾದ ಬಹುರಾಷ್ಟ್ರೀಯ ಸಂಸ್ಥೆಯೊಂದರ ಮಾನವ ಸಂಪನ್ಮೂಲ ವಿಭಾಗಕ್ಕೆ ಇತ್ತೀಚೆಗೆ ಎದುರಾಯಿತು. 'ಎಲ್ಲ ವಿಷಯಗಳನ್ನೂ ಮೊದಲ ಪ್ರಯತ್ನದಲ್ಲೇ ಪಾಸು ಮಾಡಿರಬೇಕು' ಎಂಬ ಮಾನದಂಡ ಆಧರಿಸಿ ಮೊದಲ ಹಂತದಲ್ಲಿ ಅಭ್ಯರ್ಥಿಗಳನ್ನು ಸೋಸುತ್ತಿದ್ದ ಸಂಸ್ಥೆಗೆ, ಇದೇ ನಿಯಮ ಮುಂದಿಟ್ಟುಕೊಂಡು ಉದ್ಯೋಗಕ್ಕೆ ಅರ್ಜಿ ಆಹ್ವಾನಿಸಿದರೆ ಅಗತ್ಯವಿರುವಷ್ಟು ಅಭ್ಯರ್ಥಿಗಳೇ ಸಿಗದಿರುವ ಸನ್ನಿವೇಶ ಈ ಬಾರಿ ನಿರ್ಮಾಣವಾಯಿತು.

ತಮ್ಮ ನಿರೀಕ್ಷೆಗೆ ತಕ್ಕ ಉದ್ಯೋಗಾಕಾಂಕ್ಷಿಗಳು ಕೆಲಸ ಅರಸಿ ಬಾರದಿರುವ ಕಾರಣಕ್ಕೆ, ಬರುವವರಲ್ಲೇ ಪರವಾಗಿಲ್ಲ ಎನಿಸುವವರನ್ನು ಆರಿಸಿಕೊಳ್ಳುವ ಅನಿವಾರ್ಯ ಇದೆ ಎಂದು ಬೆಂಗಳೂರಿನಲ್ಲೂ ತಯಾರಿಕಾ ಘಟಕಗಳನ್ನು ಹೊಂದಿರುವ ಆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಚಿತರೊಬ್ಬರು ಅಲವತ್ತುಕೊಂಡರು.



ಬೇಡಿಕೆ ಇದೆ ಎನ್ನುವ ಕಾರಣಕ್ಕೆ ಬಹುಪಾಲು ವಿದ್ಯಾರ್ಥಿಗಳು ಕಂಪ್ಯೂಟರ್ ಸೈನ್ಸ್‌ಗೆ ಸಂಬಂಧಿಸಿದ ವಿಷಯಗಳಿಗೆ ಪ್ರವೇಶ ಪಡೆದರೆ, ಮಾಹಿತಿ ತಂತ್ರಜ್ಞಾನ (ಐ.ಟಿ) ಕ್ಷೇತ್ರಕ್ಕೆ ಅಗತ್ಯಕ್ಕಿಂತಲೂ ಹೆಚ್ಚು ಮಾನವ ಸಂಪನ್ಮೂಲ ಲಭ್ಯವಾಗಲಿದೆ. ಇದೇ ವೇಳೆ ತಯಾರಿಕಾ ವಲಯವು ಗುಣಮಟ್ಟದ ಮಾನವ ಸಂಪನ್ಮೂಲದ ಅಭಾವ ಎದುರಿಸಬೇಕಾದ ಸಂದರ್ಭ ಎದುರಾಗಲೂಬಹುದು. ನೋಟು ರದ್ದತಿ, ಜಿಎಸ್‌ಟಿ ಜಾರಿ, ಲಾಕ್‌ಡೌನ್, ಕಚ್ಚಾ ವಸ್ತುಗಳ ಬೆಲೆ ಏರಿಕೆ, ಆರ್ಥಿಕ ಕುಸಿತ ಹೀಗೆ ಹಲವು ಹೊಡೆತಗಳನ್ನು ತಿಂದಿರುವ ತಯಾರಿಕಾ ಕ್ಷೇತ್ರದ ಬೆಳವಣಿಗೆ ಮಂದಗತಿಯಲ್ಲಿರುವುದು ಕಣ್ಣೆದುರಿನ ವಾಸ್ತವ. ಹಾಗಂತ ಈ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳೇ ಸೃಷ್ಟಿಯಾಗುತ್ತಿಲ್ಲ ಎನ್ನುವ ಪರಿಸ್ಥಿತಿಯೂ ಇಲ್ಲ. ವಿದ್ಯಾರ್ಥಿಗಳು ತಯಾರಿಕಾ ಕ್ಷೇತ್ರಕ್ಕೆ ಮಾನವ ಸಂಪನ್ಮೂಲ ಒದಗಿಸುವ ಎಂಜಿನಿಯರಿಂಗ್, ಡಿಪ್ಲೊಮಾ ಕೋರ್ಸ್‌ಗಳಿಗೆ ದಾಖಲಾಗಲು ಹಿಂಜರಿಯುತ್ತಿರುವುದರಿಂದ ಈ ಕ್ಷೇತ್ರದಲ್ಲಿ ಸೃಷ್ಟಿಯಾಗಲಿರುವ ಉದ್ಯೋಗಗಳಿಗೆ ಅರ್ಹ ಅಭ್ಯರ್ಥಿಗಳು ದೊರಕದೇ ಹೋಗಬಹುದು.

ಅರ್ಹ ಉದ್ಯೋಗಾಕಾಂಕ್ಷಿಗಳ ಅಭಾವವನ್ನು ತಯಾರಿಕಾ ವಲಯದ ಕಾರ್ಖಾನೆಗಳು ನಿಜಕ್ಕೂ ಅನುಭವಿಸುತ್ತಿವೆಯೇ ಎಂಬುದನ್ನು ಅರಿಯಲು ಸರ್ಕಾರ ಮುಂದಾಗಬೇಕಿದೆ. ವಿವಿಧ ಉದ್ಯಮ ಕ್ಷೇತ್ರದ ಪರಿಣತರೊಂದಿಗೆ ಸಮಾಲೋಚಿಸಿ, ಮುಂಬರುವ ದಿನಗಳಲ್ಲಿ ಯಾವ ಕ್ಷೇತ್ರದಲ್ಲಿ ಎಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂಬ ಕುರಿತು ಅಂಕಿ-ಅಂಶ ಒದಗಿಸಿದರೆ ಏಕಕಾಲಕ್ಕೆ ವಿದ್ಯಾರ್ಥಿ ಸಮೂಹ ಹಾಗೂ ಉದ್ಯಮ ವಲಯದ ಹಿತ ಕಾಯ್ದಂತೆ ಆಗಲಿದೆ.

ವಾಚಕರ ವಾಣಿ

ಜಲಸಾಕ್ಷರತೆ ಕೊರತೆಯ ಪರಿಣಾಮ

ಬೆಂಗಳೂರಿನ ಕೆಲವು ಬಡಾವಣೆಗಳಲ್ಲಿ ನೀರು ಸಮರ್ಪಕವಾಗಿ ಪೂರೈಕೆಯಾಗದ ಕಾರಣ ಜನ ಒದ್ದಾಡುವಂತಾಗಿದೆ. ಮತ್ತೊಂದೆಡೆ ಈ ಬೇಸಿಗೆಯಲ್ಲಿ ಬಿದ್ದ ಮಳೆಯಿಂದ ಕೆಲವೆಡೆ ಪ್ರವಾಹದ ಸ್ಥಿತಿ ಉಂಟಾಗಿದೆ. ಇದು ಈ ನಗರದ ವೈರುಧ್ಯ!

ನೀರಿನ ಕೊರತೆ ಮತ್ತು ಪ್ರವಾಹ ಈ ಎರಡೂ ಬಗೆಯ ಸಮಸ್ಯೆಗಳಿಗೆ ಜಲಸಾಕ್ಷರತೆ ಇಲ್ಲದಿರುವುದೇ ಕಾರಣವಾಗಿದೆ. ನದಿಗಳ ನೀರನ್ನು ಕಲುಷಿತಗೊಳಿಸುತ್ತಿದ್ದೇವೆ. ಅದೇ ನೀರನ್ನು ದೂರದಿಂದ ತಂದು ಕುಡಿಯಲು ಪೂರೈಸುತ್ತಿದ್ದೇವೆ. ಲೀಟರ್ ಬಾಟಲಿ ನೀರಿಗೆ 20 ರೂಪಾಯಿ ಕೊಟ್ಟು ಕುಡಿಯುತ್ತಿದ್ದೇವೆ. ಆದರೆ ಮನೆ ತಾರಸಿ ಮೇಲೆ ಬೀಳುವ ಪರಿಶುದ್ಧ ಮಳೆ ನೀರನ್ನು ಸಂಗ್ರಹಿಸಿ ಬಳಕೆ ಮಾಡಲು ನಮ್ಮಿಂದ ಆಗುತ್ತಿಲ್ಲ. ಜಲಜ್ಞಾನ ಇಲ್ಲದಿರುವುದೇ ಇದಕ್ಕೆ ಕಾರಣ.

ರಾಜಕಾಲುವೆಗಳು ಕಬಳಿಕೆ ಆಗಿವೆ, ಕೆರೆಗಳನ್ನು ಆಪೋಶನ ಪಡೆದಿದ್ದೇವೆ. ಮರಗಳ ಮಾರಣಹೋಮ ಆಗಿದೆ. ಎಲ್ಲೆಲ್ಲೂ ಕಾಂಕ್ರೀಟ್‌ಮಯ. ಹಾಗಾಗಿ ಮಳೆನೀರು ಭೂಮಿಯಲ್ಲಿ ಇಂಗದೆ ಪ್ರವಾಹಕ್ಕೆ ಕಾರಣವಾಗಿದೆ. ಮಳೆನೀರು ಸಂಗ್ರಹ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನ ಆಗದೇ ಇರುವುದರಿಂದ ನೀರಿನ ದಂಧೆಕೋರರು ನಿರಂತರವಾಗಿ ಹಣ ದೋಚುತ್ತಿದ್ದಾರೆ.

ಡಾ. ಎಚ್.ಆರ್. ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಕಾಯಂ ಬೋಧಕರೇ ಇಲ್ಲ...

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿರುವ ಕರ್ನಾಟಕ ಸರ್ಕಾರವು ದೇಶಕ್ಕೆ ಮಾದರಿಯಾಗಿದೆ ಎಂದು ಕೇಂದ್ರ ಸಚಿವ ಅಮಿತ್ ಶಾ ಬಣ್ಣಿಸಿದ್ದಾರೆ (ಪ್ರ.ವಾ., ಮೇ 4). ಜಾರಿ ವಿಚಾರವೇನೋ ಸರಿ. ಆದರೆ ಪ್ರಾಥಮಿಕ ಶಾಲೆಯಿಂದ ಹಿಡಿದು ವಿಶ್ವವಿದ್ಯಾಲಯದವರೆಗೂ ಸೇವಾಭದ್ರತೆಯುಳ್ಳ ಬೋಧಕರೇ ಇಲ್ಲವಲ್ಲ! ಹೀಗಾದಾಗ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಲಭಿಸುವುದಾದರೂ ಹೇಗೆ?

ಅಷ್ಟೇ ಏಕೆ, ನಮ್ಮ ಯಾವ ಶಾಲೆಯಲ್ಲೂ ಅಗತ್ಯಕ್ಕೆ ಅನುಗುಣವಾಗಿ ಶಿಕ್ಷಕರು ಇಲ್ಲ! ಇದರಿಂದಾಗಿ ಹೆಚ್ಚಿನ ಶಾಲೆಗಳಲ್ಲಿ ಸಮರ್ಪಕವಾಗಿ ಪಾಠಪ್ರವಚನಗಳು ನಡೆಯುತ್ತಿಲ್ಲ ಎಂಬ ದೂರುಗಳಿವೆ. ಎಲ್ಲ ಕಡೆಯೂ ಬರೀ ಅತಿಥಿ ಶಿಕ್ಷಕರನ್ನು ನೇಮಿಸಿ ಹೊಸ ಶಿಕ್ಷಣ ನೀತಿ ಜಾರಿ ಮಾಡಿದರೆ ಅದು ಪರಿಣಾಮಕಾರಿ ಆಗುವುದಾದರೂ ಹೇಗೆ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹೂವಿನಹಡಗಲಿ

ನಾಯಕರ ಭೇಟಿ ಮತ್ತು ಸಂಚಾರ ದಟ್ಟಣೆ ಕಿರಿಕಿರಿ

ಪ್ರಭಾವಿ ರಾಜಕೀಯ ನಾಯಕರು ನಗರಕ್ಕೆ ಭೇಟಿ ನೀಡಿದಾಗ ಅವರಿಗೆ ಭದ್ರತೆ ಕೊಡುವುದು ಹಾಗೂ ಅವರು ರಸ್ತೆ ಮೂಲಕ ಸುಗಮವಾಗಿ ಸಂಚರಿಸಲು ಅನುಕೂಲ ಮಾಡಿಕೊಡುವುದಕ್ಕೆ ವಿರೋಧವಿಲ್ಲ. ಆದರೆ, ಈ ಸಲುವಾಗಿ ಗಂಟೆಗಟ್ಟಲೆ ರಸ್ತೆಗಳನ್ನು ಬಂದ್ ಮಾಡುವುದರಿಂದ ಸಂಚಾರ ದಟ್ಟಣೆ ಉಂಟಾಗಿ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ. ಕಚೇರಿ, ಶಾಲೆ- ಕಾಲೇಜುಗಳಿಗೆ ಹೋಗುವವರಿಗೆ, ಆಸ್ಪತ್ರೆಗೆ ಹೋಗುವಂಥ ತುರ್ತು ಇರುವವರಿಗೆ ಇದರಿಂದ ಸಮಸ್ಯೆಯಾಗುತ್ತದೆ.

ಈ ಬಗೆಯ ಸಮಸ್ಯೆ ಬಹಳ ಹಿಂದಿನಿಂದ ಇದೆಯಾದರೂ ಪರಿಹಾರ ಕಂಡುಕೊಳ್ಳುವುದು ಮುಖ್ಯವೆನಿಸಿಲ್ಲ ಎನ್ನುವುದು ವಿಷಾದಕರ ಸಂಗತಿ. ರಾಜಕೀಯ ನಾಯಕರಿಂದ ಉದ್ಘಾಟನೆಯಾಗುವ ಯೋಜನೆಗಳು, ಪಕ್ಷ ಸಂಘಟನೆಗೆ ನಡೆಸುವ ಸಮಾವೇಶಗಳನ್ನು 'ಆನ್ ಲೈನ್'ನಲ್ಲಿಯೇ ಆಯೋಜಿಸುವುದು ಸೂಕ್ತವಲ್ಲವೇ? ಇಂಥ ಪರ್ಯಾಯಗಳನ್ನು ಅಳವಡಿಸಿಕೊಳ್ಳುವ ಮೂಲಕ ನಗರ ಜೀವನವನ್ನು ಸಹ್ಯಗೊಳಿಸಬೇಕು. ಜೊತೆಗೆ ಸಮಯ, ಇಂಧನ ಉಳಿತಾಯ ಮತ್ತು ಪರಿಸರ ರಕ್ಷಣೆ ಕೂಡ ಸಾಧ್ಯವಾಗುತ್ತದೆ. ಅಧಿಕಾರಸ್ಥರು ಈ ದಿಸೆಯಲ್ಲಿ ಚಿಂತನೆ ನಡೆಸಲಿ.

ಡಾ.ಜಿ. ಬೈರೇಗೌಡ, ಬೆಂಗಳೂರು

ಆತ್ಮವಿಶ್ವಾಸ ಕಳೆದುಕೊಳ್ಳದೆ ಮರುಪರೀಕ್ಷೆಗೆ ಸಿದ್ಧರಾಗಿ

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂಬ ಕಾರಣಕ್ಕೆ ರಾಜ್ಯ ಸರ್ಕಾರವು ಮರುಪರೀಕ್ಷೆ ನಡೆಸಲು ಮುಂದಾಗಿದೆ. ಪರೀಕ್ಷೆ ಬರೆದ ಅಭ್ಯರ್ಥಿಗಳ ಪೈಕಿ ಕೆಲವರು ಅಕ್ರಮ ಎಸಗಿದ್ದಾರೆ ಎಂಬ ಅಂಶ ಹೊರಗೆ ಬಂದಿದೆ. ಅಕ್ರಮ ಎಸಗಿದವರಿಗೆ ತಕ್ಕ ಶಿಕ್ಷೆ ಆಗಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಅದನ್ನು ಬಿಟ್ಟು ಪುನಃ ಪರೀಕ್ಷೆ ನಡೆಸುವುದು ನ್ಯಾಯೋಚಿತವಾದುದಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಾಗಿ ಅಭ್ಯರ್ಥಿಗಳು ವರ್ಷಗಟ್ಟಲೆ ಕಷ್ಟಪಟ್ಟು ಓದಿ, ಪರೀಕ್ಷೆ ಬರೆದು ಯಶಸ್ವಿಯಾಗಿ, ಇನ್ನೇನು ಯಶಸ್ಸಿನ ಫಲ ಕೈಗೆ ಎಟಕುತ್ತದೆ ಎನ್ನುವ ಹೊತ್ತಿಗೆ ಈ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಿಗೆ ಬಂದಿದೆ. ಈ ಕುರಿತ ವರದಿಗಳನ್ನು ಓದಿದಾಗ ವ್ಯವಸ್ಥೆಯ ಕುರಿತು ಹೇಸಿಗೆ ಹುಟ್ಟುತ್ತದೆ.

ಸ್ಪರ್ಧಾತ್ಮಕ ಪರೀಕ್ಷೆಗೆ ಅಣಿಯಾಗಲು ಆಕಾಂಕ್ಷಿಗಳು ತಮ್ಮ ಹಳ್ಳಿಯನ್ನು ಬಿಟ್ಟು ಧಾರವಾಡ, ಬೆಂಗಳೂರಿನಂತಹ ನಗರಗಳಿಗೆ ಬಂದು ನೆಲೆಸಿ, ಅಲ್ಲಿ ತರಬೇತಿ ಪಡೆಯುತ್ತಾರೆ. ಊಟ, ವಸತಿಗೆ ತಿಂಗಳಿಗೆ ಕನಿಷ್ಠ ಎಂದರೂ ಹತ್ತು ಸಾವಿರ ರೂಪಾಯಿ ತಗಲುತ್ತದೆ. ಮಕ್ಕಳ ಭವಿಷ್ಯದ ಕಾರಣಕ್ಕಾಗಿ ಈ ವೆಚ್ಚಗಳನ್ನು ಪೋಷಕರು ಹೇಗೋ ನಿಭಾಯಿಸುತ್ತಾರೆ. ಎರಡು- ಮೂರು ವರ್ಷಗಳವರೆಗೆ ಈ ಖರ್ಚು ಭರಿಸಬೇಕಾಗುತ್ತದೆ. ಪ್ರಯತ್ನಕ್ಕೆ ಫಲ ಸಿಕ್ಕಿ, ಆಯ್ಕೆ ಪಟ್ಟಿಯಲ್ಲಿ ಹೆಸರು ಕಾಣಿಸಿಕೊಂಡ ಸಂದರ್ಭದಲ್ಲಿ ಹೀಗೆ ಆಘಾತ ಎದುರಾದರೆ ಹೇಗೆ? ಏನೇ ಇರಲಿ, ಅಭ್ಯರ್ಥಿಗಳು ಆತ್ಮವಿಶ್ವಾಸ ಕಳೆದುಕೊಳ್ಳದೆ, ಮರುಪರೀಕ್ಷೆಗೆ ಸಿದ್ಧರಾಗಬೇಕು.

ಡಾ. ಮಹೇಶ ಮೂರ್ತಿ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಾಧ್ಯಮ ದಮನ

ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ಸಂಸ್ಥೆಯ ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕ: ಭಾರತದ ರ್‍ಯಾಂಕ್ 150

ಪ್ರಜಾವಾಣಿ ವಾರ್ತೆ

ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ಸಂಸ್ಥೆಯು 2022ನೇ ಸಾಲಿನ ಮಾಧ್ಯಮ ಸ್ವಾತಂತ್ರ್ಯದ ಸೂಚ್ಯಂಕವನ್ನು ಬಿಡುಗಡೆ ಮಾಡಿದೆ. ಜಾಗತಿಕ ಮಟ್ಟದಲ್ಲಿ ಧ್ರುವೀಕರಣವು ಎರಡು ಪಟ್ಟು ಹೆಚ್ಚಳವಾಗಿದೆ. ಮಾಹಿತಿಯ ಭರಪೂರ ಮತ್ತು ಮಾಧ್ಯಮ ಧ್ರುವೀಕರಣಗಳು ದೇಶಗಳೊಳಗೆ ವಿಭಜನೆಗೆ ಕುಮ್ಮಕ್ಕು ನೀಡಿವೆ. ಜಾಗತಿಕ ಮಟ್ಟದಲ್ಲಿ ದೇಶಗಳ ನಡುವೆಯೂ ಧ್ರುವೀಕರಣ ಉಂಟಾಗಿದೆ ಎಂದು ವರದಿಯು ಹೇಳಿದೆ.

ಭಾರತದಲ್ಲಿ ಮಾಧ್ಯಮ ಸ್ವಾತಂತ್ರ್ಯವು ಶೋಚನೀಯವಾಗಿದೆ ಎಂಬುದು ವರದಿಯ ಅಭಿಪ್ರಾಯವಾಗಿದೆ. 180 ದೇಶಗಳ ರ್‍ಯಾಂಕಿಂಗ್ ಪಟ್ಟಿಯಲ್ಲಿ ಭಾರತವು 150ನೇ ಸ್ಥಾನಕ್ಕೆ ಕುಸಿದಿದೆ. 2021ಕ್ಕೆ ಹೋಲಿಸಿದರೆ ಎಂಟು ಸ್ಥಾನ ಕೆಳಕ್ಕೆ ಇಳಿದಿದೆ. 'ದೇಶದಲ್ಲಿ ಮಾಧ್ಯಮ ಪ್ರತಿನಿಧಿಗಳ ಮೇಲೆ ಹಲ್ಲೆಗಳು ನಡೆದಿವೆ. ಮಾಧ್ಯಮವು ರಾಜಕೀಯವಾಗಿ ಪಕ್ಷಪಾತಿಯಾಗಿದೆ. ಮಾಧ್ಯಮ ಸಂಸ್ಥೆಗಳ ಮಾಲೀಕತ್ವವು ಕೇಂದ್ರೀಕೃತಗೊಂಡಿದೆ. ಈ ಎಲ್ಲವುಗಳು, ಹಿಂದೂ ರಾಷ್ಟ್ರೀಯವಾದವನ್ನು ಪ್ರತಿಪಾದಿಸುವ ಬಿಜೆಪಿಯ ನರೇಂದ್ರ ಮೋದಿ ಆಳ್ವಿಕೆ ಇರುವ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ಮಾಧ್ಯಮ ಸ್ವಾತಂತ್ರ್ಯವನ್ನು ಬಿಕ್ಕಟ್ಟಿಗೆ ತಳ್ಳಿದೆ' ಎಂದು ವರದಿ ವಿವರಿಸಿದೆ.

1 — 2022ರ ಜನವರಿ 1ರ ಬಳಿಕ ಹತ್ಯೆಯಾದ ಪತ್ರಕರ್ತರ ಸಂಖ್ಯೆ

13 — ಈಗ ಸೆರೆಮನೆಯಲ್ಲಿರುವ ಪತ್ರಕರ್ತರ ಸಂಖ್ಯೆ

ಮಾಧ್ಯಮ ಲೋಕ

ಭಾರತದ ಮಾಧ್ಯಮ ಲೋಕದ ಸಮಗ್ರ ಚಿತ್ರಣವನ್ನು ವರದಿಯಲ್ಲಿ ನೀಡಲಾಗಿದೆ. 'ಭಾರತದ ಮಾಧ್ಯಮ ಲೋಕವು ಭಾರತದಂತೆಯೇ ಬೃಹತ್ ಮತ್ತು ದಟ್ಟಣೆಯಿಂದ ಕೂಡಿದ್ದಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಪತ್ರಿಕೆಗಳಿವೆ (36 ಸಾವಿರ ವಾರಪತ್ರಿಕೆಗಳೂ ಸೇರಿ). 380 ಸುದ್ದಿವಾಹಿನಿಗಳಿವೆ. ಮಾಧ್ಯಮ ಸಂಸ್ಥೆಗಳು ದೊಡ್ಡ ಸಂಖ್ಯೆಯಲ್ಲಿ ಇರುವುದರಿಂದ ಮಾಲೀಕತ್ವದ ಕೇಂದ್ರೀಕರಣವು ಗೋಚರವಾಗುತ್ತಿಲ್ಲ' ಎಂದು ವರದಿ ಹೇಳಿದೆ. ಮಾಧ್ಯಮ ಲೋಕವನ್ನು ನಿಯಂತ್ರಣದಲ್ಲಿ ಇರಿಸಿಕೊಂಡಿರುವ ಕೆಲವು ಸಂಸ್ಥೆಗಳನ್ನು ವರದಿಯಲ್ಲಿ ಹೆಸರಿಸಲಾಗಿದೆ. ಹಿಂದಿ ಭಾಷೆಯ ನಾಲ್ಕನೇ ಮೂರು ಭಾಗ ಓದುಗರನ್ನು ಮೂರೇ ಪತ್ರಿಕೆಗಳು ಹೊಂದಿವೆ. ಪ್ರಾದೇಶಿಕ ಮಟ್ಟದಲ್ಲಿ ಈ ಕೇಂದ್ರೀಕರಣ ಇನ್ನೂ ಗಾಢವಾಗಿದೆ. ಪಶ್ಚಿಮ ಬಂಗಾಳದಲ್ಲಿ ಆನಂದಬಜಾರ್ ಪತ್ರಿಕಾ, ಮಹಾರಾಷ್ಟ್ರದಲ್ಲಿ ಲೋಕಮತ, ಕೇರಳದಲ್ಲಿ ಮಲಯಾಳ ಮನೋರಮಾದಂತಹ ಪತ್ರಿಕೆಗಳ ಪಾರಮ್ಯ ಇದೆ. ಮುದ್ರಣ ಮಾಧ್ಯಮದ ರೀತಿಯಲ್ಲಿಯೇ ಸುದ್ದಿವಾಹಿನಿಗಳ ಮಾಲೀಕತ್ವವೂ ಕೇಂದ್ರೀಕರಣಗೊಂಡಿದೆ. ರೇಡಿಯೊ ಕ್ಷೇತ್ರದಲ್ಲಿ ಆಕಾಶವಾಣಿಯ ಏಕಸ್ವಾಮ್ಯ ಇದೆ ಎಂದು ವರದಿ ವಿಶ್ಲೇಷಿಸಿದೆ.

ರಾಜಕೀಯ ಸಂದರ್ಭ

'ವಸಾಹತುಶಾಹಿ ವಿರೋಧಿ ಚಳವಳಿಯ ಉತ್ಪನ್ನವಾದ ಭಾರತದ ಮಾಧ್ಯಮವು ಪ್ರಗತಿಪರವಾಗಿಯೇ ಇತ್ತು. ಆದರೆ, 2010ನೇ ದಶಕದ ಮಧ್ಯಭಾಗದ ಬಳಿಕ ಮಾಧ್ಯಮ ಕ್ಷೇತ್ರದಲ್ಲಿ ಗಣನೀಯ ಬದಲಾವಣೆ ಆಯಿತು. ನರೇಂದ್ರ ಮೋದಿ ಅವರು ಪ್ರಧಾನಿಯಾದ ಬಳಿಕ, ತಮ್ಮ ಪಕ್ಷ ಬಿಜೆಪಿ ಮತ್ತು ಪ್ರಭಾವಿ ಮಾಧ್ಯಮ ಸಂಸ್ಥೆಗಳ ನಡುವಣ ಬಾಂಧವ್ಯವನ್ನು ಗಟ್ಟಿಗೊಳಿಸಿದರು. ಮೋದಿ ಅವರು ಪತ್ರಕರ್ತರನ್ನು ವಿಮರ್ಶಾತ್ಮಕವಾಗಿಯೇ ನೋಡಿದ್ದಾರೆ. ತಮ್ಮ ಮತ್ತು ಬೆಂಬಲಿಗರ ನೇರ ಸಂಬಂಧವನ್ನು ಈ ಪತ್ರಕರ್ತರು ಹಾಳುಗೆಡವುತ್ತಿದ್ದಾರೆ ಎಂಬ ಭಾವನೆ ಅವರಲ್ಲಿದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ. ಸರ್ಕಾರದ ಬಗ್ಗೆ ವಿಮರ್ಶಾತ್ಮಕವಾಗಿರುವ ಪತ್ರಕರ್ತರಿಗೆ ಕಿರುಕುಳ ನೀಡಲಾಗುತ್ತಿದೆ ಎಂದೂ ವರದಿಯಲ್ಲಿ ಆರೋಪಿಸಲಾಗಿದೆ.



ಕಾನೂನು ಕಾಗದದ ಮೇಲಷ್ಟೆ

'ಭಾರತದಲ್ಲಿ ಮಾಧ್ಯಮ ಸ್ವಾತಂತ್ರ್ಯ ಕಾಗದದ ಮೇಲಷ್ಟೇ ಇದೆ. ಆದರೆ, ಸರ್ಕಾರದ ವಿರುದ್ಧ ಬರೆಯುವ ಪತ್ರಕರ್ತರ ವಿರುದ್ಧ ಮಾನನಷ್ಟ ಮೊಕದ್ದಮೆ, ದೇಶದ್ರೋಹ ಪ್ರಕರಣ, ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲಾಗುತ್ತಿದೆ. ಜತೆಗೆ ಅಂತಹ ಪತ್ರಕರ್ತರಿಗೆ 'ದೇಶ ವಿರೋಧಿಗಳು' ಎಂದು ಹಣೆಪಟ್ಟಿ ಕಟ್ಟಲಾಗುತ್ತಿದೆ' ಎಂದು ಸೂಚ್ಯಂಕ ವರದಿಯಲ್ಲಿ ಹೇಳಲಾಗಿದೆ.

'ಕೋವಿಡ್-19ಕ್ಕೆ ಸಂಬಂಧಿಸಿದಂತೆ ಸರ್ಕಾರದ ಹೇಳಿಕೆ ಮತ್ತು ಸರ್ಕಾರಿ ದಾಖಲೆಗಳಲ್ಲಿ ಇರುವ ವ್ಯತಿರಿಕ್ತ ಮಾಹಿತಿಗಳ ಬಗ್ಗೆ ವರದಿ ಬರೆದ ಪತ್ರಕರ್ತರ ವಿರುದ್ಧ ಸರ್ಕಾರ ಮತ್ತು ಅದರ ಬೆಂಬಲಿಗರು ಪ್ರಕರಣ ದಾಖಲಿಸುವ ಮೂಲಕ ಯುದ್ಧವನ್ನೇ ಸಾರಿದ್ದಾರೆ. ಸರ್ಕಾರದ ವಿರುದ್ಧದ ಪ್ರತಿಭಟನೆಗಳನ್ನು ವರದಿ ಮಾಡಲು ಮುಂದಾದ ಪತ್ರಕರ್ತರನ್ನು ಬಂಧಿಸಿದ ಹಲವು ನಿದರ್ಶನಗಳಿವೆ. ಕೆಲವು ಬಾರಿ ಪೊಲೀಸರು ಪತ್ರಕರ್ತರನ್ನು ಅಮಾನವೀಯವಾಗಿ ವಶಕ್ಕೆ ಪಡೆದ ಘಟನೆಗಳೂ ನಡೆದಿವೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

ದೆಹಲಿ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲಿನ ದಾಳಿ ಬಗ್ಗೆ ವರದಿ ಮಾಡಿದ್ದ 'ದಿ ಕ್ಯಾರವಾನ್'ನ ಪತ್ರಕರ್ತ ಮನದೀಪ್ ಪುನಿಯಾ ಅವರನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದಿದ್ದರು. ಅವರನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿತ್ತು. ಇದೇ ಘಟನೆ ಬಗ್ಗೆ ವರದಿ ಮಾಡಿದ್ದ, ಸಾಮಾಜಿಕ ಜಾಲತಾಣಗಳಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದ 'ಆನ್‌ಲೈನ್ ನ್ಯೂಸ್ ಇಂಡಿಯಾ' ವರದಿಗಾರ ಧರ್ಮೇಂಧರ್ ಸಿಂಗ್ ಅವರನ್ನು ಬಂಧಿಸಿ ಬಿಡುಗಡೆ ಮಾಡಲಾಗಿತ್ತು. 'ದಿ ವೈರ್'ನ ಸಿದ್ಧಾರ್ಥ್ ವರದರಾಜನ್ ಮತ್ತು ಇಸ್ಮತ್ ಅರಾ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. 'ದಿ ಕ್ಯಾರವಾನ್'ನ ಕಾರ್ಯನಿರ್ವಾಹಕಾ ಸಂಪಾದಕ ವಿನೋದ್ ಕೆ. ಜೋಸ್, ಸಂಪಾದಕ ಅನಂತನಾಥ್, ಪತ್ರಕರ್ತೆ ಮೃಣಾಲ್ ಪಾಂಡೆ, 'ನ್ಯಾಷನಲ್ ವೀಕ್ಲಿ' ಸಂಪಾದಕ ಝುಫರ್ ಅಘಾ, ಅಂಕಣಕಾರ ರಾಜದೀಪ್ ಸರ್ದೇಸಾಯಿ ಮತ್ತು ವ್ಯಂಗ್ಯಚಿತ್ರಕಾರ ಪರೇಶ್‌ನಾಥ್ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ವಿಧಿಸಲು ಅವಕಾಶವಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಭಾರತದಲ್ಲಿ ಪತ್ರಕರ್ತರಿಗೆ ಸೂಕ್ತ ಭದ್ರತೆ ಮತ್ತು ರಕ್ಷಣೆ ಇಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ. ಕೇಂದ್ರ ಸರ್ಕಾರದ ವಿರುದ್ಧ, ಸರ್ಕಾರದ ಅವ್ಯವಸ್ಥೆ ಮತ್ತು ಅಕ್ರಮಗಳ ವಿರುದ್ಧ ಬರೆಯುವ ಪತ್ರಕರ್ತರ ಜೀವಕ್ಕೆ ಬೆದರಿಕೆ ಇದೆ. ಬಿಹಾರದ ಮಧುಬನಿ ಜಿಲ್ಲೆಯಲ್ಲಿನ ಅಕ್ರಮ ಕ್ಲಿನಿಕ್‌ಗಳ ಬಗ್ಗೆ ಯೂಟ್ಯೂಬ್‌ನಲ್ಲಿ ಸರಣಿ ವರದಿ ಪ್ರಸಾರ ಮಾಡಿದ್ದ ಅವಿನಾಶ್ ಝಾ ಎಂಬ ಪತ್ರಕರ್ತನನ್ನು ಈಚೆಗೆ ಕೊಲ್ಲಲಾಗಿತ್ತು. ಕಚೇರಿಯಿಂದ ಹೊರಟಿದ್ದ ಝಾ ಅವರನ್ನು ಹಿಂಬಾಲಿಸಿ ಕೊಂದು, ದೇಹವನ್ನು ಸುಟ್ಟು ಬಿಸಾಡಲಾಗಿತ್ತು ಎಂದು ವರದಿ ಹೇಳಿದೆ.

ಕೇಂದ್ರ ಸರ್ಕಾರ, ಅದರ ನೀತಿಗಳು ಮತ್ತು ಬಲಪಂಥೀಯ ನಿಲುವುಗಳನ್ನು ವಿರೋಧಿಸಿ ಬರೆಯುವ ಪತ್ರಕರ್ತರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮತ್ತು ಬೆದರಿಕೆಯ ಸಮರ ಸಾರಲಾಗುತ್ತಿದೆ. ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಬೆಂಬಲಿಗರು ಪತ್ರಕರ್ತೆ ರಾಣಾ ಅಯೂಬ್ ಅವರನ್ನು ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡಿದ್ದಾರೆ. ಅವರ ವಿರುದ್ಧ ಹಣ ಅಕ್ರಮ ವರ್ಗಾವಣೆ ಪ್ರಕರಣವನ್ನೂ ದಾಖಲಿಸಲಾಗಿದೆ. ಹಾಥರಸ್ ಅತ್ಯಾಚಾರ ಪ್ರಕರಣದ ವರದಿಗೆಂದು ಉತ್ತರ ಪ್ರದೇಶಕ್ಕೆ ತೆರಳಿದ್ದ ಪತ್ರಕರ್ತ ಸಿದ್ದಿಕಿ ಕಪ್ಪನ್ ವಿರುದ್ಧ ಭಯೋತ್ಪಾದನೆ, ದೇಶದ್ರೋಹ ಪ್ರಕರಣಗಳನ್ನು ದಾಖಲಿಸಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲೂ ಅವರ ಅವಹೇಳನ ಮುಂದುವರಿದಿದೆ. ಆಡಳಿತ ಪಕ್ಷ ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸುವ ಎಲ್ಲಾ ಪತ್ರಕರ್ತರನ್ನು ದೇಶದ್ರೋಹ ಮತ್ತಿತರ ಪ್ರಕರಣಗಳಿಗೆ ಗುರಿ ಮಾಡುವುದು ಒಂದೆಡೆಯಾದರೆ, ಸಾಮಾಜಿಕ ಜಾಲತಾಣಗಳಲ್ಲಿ ಅವರ ಚಾರಿತ್ರ್ಯ ವಧೆ ಮಾಡುವುದು ಇನ್ನೊಂದೆಡೆ ನಡೆಯುತ್ತಲೇ ಇದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.


ಜಾಹೀರಾತಿನ ಮೇಲೆ ಅವಲಂಬನೆ

ಭಾರತೀಯ ಮಾಧ್ಯಮವು ಬೃಹತ್ತಾಗಿ ಬೆಳೆದಿದೆ. ಆದರೆ, ದೌರ್ಬಲ್ಯಗಳನ್ನೂ ಹೊಂದಿದೆ. ಸ್ಥಳೀಯ, ಪ್ರಾದೇಶಿಕ ಸರ್ಕಾರಗಳು ನೀಡುವ ಜಾಹೀರಾತುಗಳ ಮೇಲೆ ಮಾಧ್ಯಮ ಸಂಸ್ಥೆಗಳು ಅವಲಂಬಿತವಾಗಿವೆ. ವ್ಯವಹಾರ ಹಾಗೂ ಸಂಪಾದಕೀಯ ನೀತಿಗಳ ನಡುವೆ ಇರಬೇಕಾದ ಗೆರೆ ನಾಪತ್ತೆಯಾಗಿದೆ. ತಮ್ಮ ವ್ಯಾವಹಾರಿಕ ಅಗತ್ಯಗಳಿಗಾಗಿ ಸಂಪಾದಕೀಯ ನೀತಿಯು ಒಂದಿಷ್ಟು ಹೊಂದಾಣಿಕೆ ಮಾಡಿಕೊಳ್ಳಬೇಕು ಎಂದು ಮಾಧ್ಯಮ ಸಂಸ್ಥೆಗಳು ಬಯಸುತ್ತಿವೆ. ತನ್ನ ಸಂಕಥನವನ್ನು ಹೇರುವುದಕ್ಕಾಗಿ ಈ ಅವಕಾಶವನ್ನು ಕೇಂದ್ರ ಸರ್ಕಾರವು ಬಳಸಿಕೊಳ್ಳುತ್ತದೆ. ಪ್ರತೀವರ್ಷ ಮುದ್ರಣ ಹಾಗೂ ಡಿಜಿಟಲ್ ಮಾಧ್ಯಮಗಳಲ್ಲಿ ಜಾಹೀರಾತಿಗಾಗಿ ₹13,000 ಕೋಟಿ ವ್ಯಯಿಸುತ್ತಿದೆ. ದೇಶದ ಕೆಲವು ಮಾಧ್ಯಮಗಳು 'ಗೋದಿ ಮಾಧ್ಯಮ'ಗಳಾಗಿ ಇತ್ತೀಚಿನ ದಿನಗಳಲ್ಲಿ ಬದಲಾಗಿದ್ದು, (ಮೋದಿ ಕೈಗೊಂಬೆಯಾಗಿರುವ ಮಾಧ್ಯಮ ಎಂಬ ಅರ್ಥದಲ್ಲಿ ಬಳಸಲಾಗುತ್ತದೆ) ಬಿಜೆಪಿ ಪರ ಕಾರ್ಯಸೂಚಿಯನ್ನು ಬೆರೆಸಿ ಸುದ್ದಿ ಪ್ರಸಾರ ಮಾಡುತ್ತಿವೆ. ಭಾರತದ ಬಹುತ್ವದ ಮಾಧ್ಯಮ ಮಾದರಿಗೆ ಇವು ಸವಾಲೊಡ್ಡಿವೆ ಎಂದು ವರದಿಯು ವಿವರಿಸಿದೆ.

ಕಾಣದ ವೈವಿಧ್ಯ

ಭಾರತೀಯ ಸಮಾಜದ ವೈವಿಧ್ಯವು ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಅಷ್ಟೇನೂ ಪ್ರತಿಬಿಂಬಿತವಾಗುವುದಿಲ್ಲ. ಬಹುತೇಕ, ಪ್ರಭಾವಿ ಜಾತಿಯ ಹಿಂದೂ ಪುರುಷರು ಪತ್ರಿಕೋದ್ಯಮದ ಪ್ರಮುಖ ಹುದ್ದೆಗಳಲ್ಲಿ ಕಂಡುಬರುತ್ತಾರೆ. ಹೀಗಾಗಿ ಮಾಧ್ಯಮದಲ್ಲಿ ಪ್ರಸಾರವಾಗುವ ಸುದ್ದಿಗಳಲ್ಲಿ ಪಕ್ಷಪಾತ ಪ್ರತಿಬಿಂಬಿತವಾಗುತ್ತದೆ. ಉದಾಹರಣೆಗೆ, ಸುದ್ದಿವಾಹಿನಿಗಳು ಸಂಜೆಯ ಹೊತ್ತು ನಡೆಸುವ ಚರ್ಚಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮಹಿಳೆಯರ ಪ್ರಮಾಣ ಶೇ 15ಕ್ಕಿಂತ ಕಡಿಮೆಯಿದೆ. ಕೋವಿಡ್ ತೀವ್ರವಾಗಿದ್ದ ಸಮಯದಲ್ಲಿ ಕೆಲವು ಸುದ್ದಿ ನಿರೂಪಕರು ವೈರಸ್ ಹರಡಲು ಮುಸ್ಲಿಂ ಸಮುದಾಯ ಕಾರಣ ಎಂದು ಟೀಕಿಸಿದ್ದರು. ಇಂತಹ ಮಾಧ್ಯಮಗಳ ನಡುವೆಯೂ ಗ್ರಾಮೀಣ ಭಾಗದ ಅಲ್ಪಸಂಖ್ಯಾತ ಮತ್ತು ಬುಡಕಟ್ಟು ಸಮುದಾಯಗಳನ್ನು ಪ್ರತಿನಿಧಿಸುವ ಪತ್ರಕರ್ತೆಯರಿಂದಲೇ ಕೂಡಿರುವ 'ಖಬರ್ ಲಹರಿಯಾ'ದಂತಹ ವಿಭಿನ್ನವಾದ ಮಾಧ್ಯಮಗಳೂ ಭಾರತದಲ್ಲಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

ಮಾಧ್ಯಮ ಸ್ವಾತಂತ್ರ್ಯ ಕುಸಿತದ ಹಾದಿ ಭಾರತದ ರ್‍ಯಾಂಕ್



2002ರಲ್ಲಿ ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತವು 80ನೇ ಸ್ಥಾನದಲ್ಲಿತ್ತು. 2022ರಲ್ಲಿ 150ನೇ ಸ್ಥಾನಕ್ಕೆ ಕುಸಿದಿದೆ

ಆಧಾರ: ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್‌ನ ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕ

ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 113

ನೈವೇದ್ಯ ಕದ್ದ ಗುಣನಿಧಿ

ತನ್ನ ಮನೆಯಲ್ಲಿ ನಡೆದ ಹಗರಣವೆಲ್ಲವನ್ನೂ ಕೇಳಿದ ಯಜ್ಞದತ್ತನ ಮಗನಾದ ಗುಣನಿಧಿ, ತನ್ನ ಹಿಂದಿನ ಬಾಳನ್ನು ನೆನೆದು ರೋದಿಸುತ್ತಾನೆ. ತನ್ನ ಹೀನ ಬದುಕನ್ನು ಹೀಯಾಳಿಸಿಕೊಂಡು ಯಾವುದೋ ಒಂದು ದಿಕ್ಕನ್ನು ಹಿಡಿದು ದೇಶಾಂತರ ಹೋಗುತ್ತಾನೆ. ಮನೆಮಠಗಳಿಲ್ಲದೆ, ತಂದೆತಾಯಿಗಳಿಂದ ಪರಿತ್ಯಕ್ತನಾದ ಗುಣನಿಧಿ, ಹುಟ್ಟ ಊರನ್ನು ಬಿಟ್ಟು ಸ್ವಲ್ಪದೂರ ಹೋದಮೇಲೆ, ಉತ್ಸಾಹಹೀನನಾಗಿ ಆಯಾಸದಿಂದ ಅಲ್ಲಿಯೇ ನಿಂತುಬಿಡುತ್ತಾನೆ. 'ನಾನೆಲ್ಲಿಗೆ ಹೋಗಲಿ? ಏನು ಮಾಡಲಿ? ನಾನೋ ವಿದ್ಯೆಯನ್ನು ಕಲಿತವನಲ್ಲ. ನನ್ನ ಬಳಿಯಲ್ಲಿ ಹೆಚ್ಚು ಹಣವೂ ಇಲ್ಲ'

ದೇಶಾಂತರ ಹೋಗುವಾಗ ಖರ್ಚಿಗೆ ಹಣವಿರಬೇಕು. ಹಾಗಂತ ತನ್ನ ಬಳಿ ಹಣವಿದ್ದರೆ ಕಳ್ಳರು ಕಸಿದುಕೊಳ್ಳುವ ಅಪಾಯವಿದೆ. ಅಯ್ಯೋ, ಹಣ ಇದ್ದರೂ ಕಷ್ಟ, ಇಲ್ಲದಿದ್ದರೂ ಕಷ್ಟ. ಎಲ್ಲ ಕಡೆಯೂ ಈ ಪ್ರಪಂಚ ವಿಘ್ನಗಳಿಂದ ತುಂಬಿಹೋಗಿದೆ ಅಂತ ಅನಿಸುತ್ತದೆ ಗುಣನಿಧಿಗೆ. ಸೋಮಯಾಜಿಗಳ ವಂಶದಲ್ಲಿ ಹುಟ್ಟಿದ್ದರೂ, ತನಗೇಕೆ ಜೂಜು ಮುಂತಾದ ವ್ಯಸನಗಳು ಹತ್ತಿಕೊಂಡವು? ಆಹಾ! ವಿಧಿಯ ಬಲವೇ ಬಲವು. ಕರ್ಮಗಳನ್ನು ಅದು ನಡೆಸದೇ ಬಿಡದು. ಅದನ್ನು ಅನುಭವಿಸಲೇ ಬೇಕು ಅಂತ ಪರಿತಪಿಸುತ್ತಾನೆ.

'ನನಗೆ ಭಿಕ್ಷೆ ಬೇಡುವುದೂ ಬರುವುದಿಲ್ಲ. ಯಾರ ಪರಿಚಯವೂ ಇಲ್ಲ. ನನ್ನ ಬಳಿ ಅಲ್ಪಸ್ವಲ್ಪ ಹಣವೂ ಇಲ್ಲ. ನನಗೆ ಮುಂದೇನು ಗತಿ? ಸೂರ್ಯನು ಹುಟ್ಟುವುದಕ್ಕಿಂತ ಮುಂಚೆಯೇ ನನ್ನ ತಾಯಿ ರುಚಿಕರವಾದ ತಿಂಡಿಗಳನ್ನು ಮಾಡಿಕೊಡುತ್ತಿದ್ದಳು. ಈಗ ಯಾರನ್ನೂ ಕೇಳಲಿ? ಇಲ್ಲಿ ನನ್ನ ತಾಯಿ ಇಲ್ಲವಲ್ಲ' ಎಂದು ಗೋಳಾಡುತ್ತಾನೆ. ಅತಿ ದೈನ್ಯದಿಂದ ಅಳುತ್ತಾ ಒಂದು ಮರದ ಕೆಳಗೆ ಕುಳಿತುಕೊಂಡು ಗುಣನಿಧಿ ಯೋಚಿಸುತ್ತಿರುವಂತೆಯೇ ಸೂರ್ಯನು ಅಸ್ತಮಾನವಾದ.

ಇದೇ ಸಮಯದಲ್ಲಿ ಶಿವನ ಭಕ್ತನೋರ್ವ, ಆ ದಿನ ಶಿವರಾತ್ರಿಯಾದುದರಿಂದ ಶಿವನನ್ನು ಪೂಜಿಸಬೇಕೆಂದು ಊರಿನ ಹೊರಗೆ ಇರುವ ಶಿವದೇವಾಲಯಕ್ಕೆ ತನ್ನ ಬಂಧು-ಬಳಗದವರೊಡನೆ ಹೋಗುತ್ತಿದ್ದ. ಆ ಶಿವಭಕ್ತ ತಾನು ಉಪವಾಸವಿದ್ದರೂ, ಶಿವನ ನೈವೇದ್ಯಕ್ಕಾಗಿ ನಾನಾ ವಿಧವಾದ ಭಕ್ಷ್ಯಭೋಜ್ಯಾದಿಗಳನ್ನು ಕೊಂಡೊಯ್ಯುತ್ತಿದ್ದ. ಪಕ್ವಾನ್ನಗಳ ವಾಸನೆ ಗುಣನಿಧಿ ಮೂಗಿಗೆ ಬಡಿದಿದ್ದರಿಂದ ಶಿವಭಕ್ತನನ್ನು ಹಿಂಬಾಲಿಸಿ ಶಿವದೇಗುಲಕ್ಕೆ ಬಂದ. ಶಿವಭಕ್ತ ತಾನು ತಂದಿದ್ದ ತಿಂಡಿ-ತೀರ್ಥಗಳನ್ನು ನೈವೇದ್ಯಕ್ಕಿಟ್ಟು ಶಿವನನ್ನು ಭಕ್ತಿಯಿಂದ ಪೂಜಿಸಿದ.

ಆ ರಾತ್ರಿ ಶಿವನ ಭಕ್ತರೆಲ್ಲರೂ ನಿದ್ರೆಗೆ ಜಾರಿದ ಮೇಲೆ, ತಾನು ನೈವೇದ್ಯವನ್ನೆಲ್ಲಾ ತಿಂದು ಬಿಡಬೇಕು ಅಂತ ಯೋಚಿಸಿದ ಗುಣನಿಧಿ ದೇವಾಲಯದ ಬಾಗಿಲಲ್ಲಿಯೇ ಕಾದು ಕುಳಿತಿದ್ದ. ಶಿವಭಕ್ತನು ಶಿವನಿಗೆ ಮಾಡುತ್ತಿದ್ದ ಮಹಾಪೂಜೆ, ನೃತ್ಯಗೀತಾದಿಗಳನ್ನು ನೋಡಿದ. ಎಲ್ಲಾ ಪೂಜಾವಿಧಿಗಳು ನೆರವೇರಿದ ನಂತರ ಭಕ್ತರೆಲ್ಲರೂ ಶಿವಾಲಯದ ಪ್ರಾಂಗಣದಲ್ಲೆ ಮಲಗಿದರು. ಭಕ್ತರೆಲ್ಲ ಗಾಢವಾದ ನಿದ್ದೆ ಮಾಡುತ್ತಿದ್ದಾಗ ಗುಣನಿಧಿಯು ನೈವೇದ್ಯವನ್ನು ತೆಗೆದುಕೊಳ್ಳಲು ಶಿವನ ಲಿಂಗವಿದ್ದ ಗರ್ಭಗೃಹ ಪ್ರವೇಶಿಸಿದ. ಆಗ ಅಲ್ಲಿದ್ದ ದೀಪವು ಮಂಕಾಗಿದ್ದರಿಂದ ಪಕ್ವಾನ್ನ ಎಲ್ಲಿದೆ ಎಂಬುದು ಗೊತ್ತಾಗುತ್ತಿರಲಿಲ್ಲ. ಇದಕ್ಕಾಗಿ ತನ್ನ ಬಟ್ಟೆಯ ಅಂಚಿನಿಂದಲೇ ಬತ್ತಿಯನ್ನು ಮಾಡಿ ದೀಪವನ್ನು ಬೆಳಗಿಸಿದ.

ಆಗ ಗುಣನಿಧಿಗೆ ನಿವೇದಿತವಾಗಿದ್ದ ಪಕ್ವಾನ್ನ ಕಂಡಿತು. ಅದನ್ನು ಆತುರದಿಂದ ತೆಗೆದುಕೊಂಡ ಗುಣನಿಧಿ, ಅಲ್ಲಿಂದ ಬೇಗಬೇಗನೆ ಹೊರಗಡೆ ಹೋಗುತ್ತಿದ್ದಾಗ ಮಲಗಿದ್ದವನೊಬ್ಬನನ್ನು ತುಳಿದುಬಿಟ್ಟ. ಎಚ್ಚೆತ್ತವನು 'ಯಾರಿವನು? ಆತುರದಿಂದ ಓಡಿಹೋಗುತ್ತಿದ್ದಾನೆ, ಹಿಡಿಯಿರಿ' ಎಂದು ಗಟ್ಟಿಯಾಗಿ ಕಿರಿಚಿಕೊಂಡ. ಕೂಗನ್ನು ಕೇಳಿದ ಊರಿನ ಕಾವಲುಗಾರರು ಪಕ್ವಾನ್ನ ಎತ್ತಿಕೊಂಡು ಓಡುತ್ತಿದ್ದ ಗುಣನಿಧಿಯ ಬೆನ್ನತ್ತಿದರು. ಕತ್ತಲು ಇದ್ದಿದ್ದರಿಂದ ಕಣ್ಣು ಕಾಣದೆ ತಡವರಿಸಿ ಓಡುತ್ತಿದ್ದ ಗುಣನಿಧಿಯನ್ನು ಕಾವಲುಭಟರು ಕ್ಷಣಮಾತ್ರದಲ್ಲಿ ಹಿಡಿದು, ಅಲ್ಲೇ ಅವನನ್ನು ಕೊಂದುಬಿಟ್ಟರು.

ಮೃತನಾದ ಗುಣನಿಧಿಯನ್ನು ನರಕಕ್ಕೆ ಕೊಂಡೊಯ್ಯಲು ಯಮನಭಟರು ಬಂದರು. ಅವನನ್ನು ಯಮನ ಪಟ್ಟಣವಾದ ಸಂಯಮಕ್ಕೆ ಕೊಂಡೊಯ್ಯಬೇಕೆಂದು ಹಗ್ಗದಿಂದ ಬಿಗಿದರು. ಅಷ್ಟರಲ್ಲಿಯೇ, ಕಿರುಗೆಜ್ಜೆಗಳ ಹಾರಗಳನ್ನು ಧರಿಸಿ, ಶೂಲವನ್ನು ಕೈಯಲ್ಲಿಡಿದಿರುವ ಶಿವನ ಕಿಂಕರರು ದಿವ್ಯವಾದ ವಿಮಾನದೊಂದಿಗೆ ಬಂದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬೃಹತ್ ಗುಂಪೊಂದನ್ನು ಚದುರಿಸಲು ಪೊಲೀಸರು ಲಾಠಿ ಚಾರ್ಜ್ ಮಾಡುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ಘಟನೆ ಅಸ್ಸಾಂನಲ್ಲಿ ನಡೆದಿದೆ. ಪ್ರತ್ಯೇಕ ರಾಷ್ಟ್ರಕ್ಕಾಗಿ ಬೇಡಿಕೆ ಇರಿಸಿ, ರ್‍ಯಾಲಿ ನಡೆಸುತ್ತಿದ್ದ ಮುಸ್ಲಿಮರನ್ನು ಅಸ್ಸಾಂ ಪೊಲೀಸರು ಥಳಿಸಿದ್ದಾರೆ ಎಂದು ಈ ವಿಡಿಯೊವನ್ನು ಬಿಂಬಿಸಲಾಗಿದೆ. 'ಪ್ರತ್ಯೇಕ ದೇಶಕ್ಕಾಗಿ ಆಗ್ರಹಿಸಿದ್ದ ಮುಸ್ಲಿಮರಿಗೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು ಸರಿಯಾದ ರೀತಿಯಲ್ಲಿ ಪಾಠ ಕಲಿಸಿದ್ದಾರೆ' ಎಂದು ವಿಡಿಯೊಗೆ ಅಡಿಬರಹ ನೀಡಲಾಗಿದೆ.



ಇದು ಅಸ್ಸಾಂನಲ್ಲಿ ನಡೆದ ಘಟನೆಯಲ್ಲ, ಬದಲಾಗಿ ಉತ್ತರ ಪ್ರದೇಶದ ಬರೇಲಿ ಜಿಲ್ಲೆಯಲ್ಲಿ 2020ರ ಏಪ್ರಿಲ್‌ನಲ್ಲಿ ನಡೆದ ಘಟನೆ ಎಂದು ಇಂಡಿಯಾ ಟುಡೇ ವರದಿ ಮಾಡಿದೆ. ಸಾಮಾಜಿಕ ಜಾಲತಾಣಗಳಲ್ಲಿ ಬಿಂಬಿಸಿರುವಂತೆ ಇದು ಪ್ರತ್ಯೇಕ ರಾಷ್ಟ್ರಕ್ಕಾಗಿ ನಡೆದ ರ್‍ಯಾಲಿಯಲ್ಲ. ಮೊದಲ ಲಾಕ್‌ಡೌನ್ ವೇಳೆ ಪೊಲೀಸರು ಬರೇಲಿಯ ಗ್ರಾಮವೊಂದಕ್ಕೆ ತೆರಳಿ, ಕೋವಿಡ್ ನಿಯಮಗಳನ್ನು ಪಾಲಿಸಲು ಜನರಿಗೆ ಹೇಳಿದ್ದರು. ಆ ವೇಳೆ ಸ್ಥಳೀಯರು ಪೊಲೀಸರ ಮೇಲೆ ದಾಳಿ ನಡೆಸಿದ್ದರು. ಪರಿಸ್ಥಿತಿಯನ್ನು ಹತೋಟಿಗೆ ತರಲು ಪೊಲೀಸರು ಸ್ಥಳೀಯರ ಮೇಲೆ ಲಾಠಿ ಪ್ರಹಾರ ನಡೆಸಿದ್ದರು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಧರ್ಮನಿರ್ಣಯ

ಧರ್ಮ ನಿರ್ಣಯ ನಿನಗೆ ಜನ್ಮಜನ್ಮಾಂತರದ |
ಕರ್ಮಸಂದರ್ಭದಿಂದೊಗೆವುದದನರಿತು ||
ನಿರ್ಮಮದ ನಿರ್ಮಲೋತ್ಸಹದೆ ನೀನಾಚರಿಸೆ |
ಬ್ರಹ್ಮಸಾಮೀಪ್ಯವೆಲೊ – ಮಂಕುತಿಮ್ಮ || 622 ||

ಪದ-ಅರ್ಥ: ಕರ್ಮಸಂದರ್ಭದಿಂದೊಗೆವುದನರಿತು = ಕರ್ಮ + ಸಂದರ್ಭದಿಂದ + ಒಗೆವುದು = ಬರುವುದು + ಅದನು + ಅರಿತು, ನಿರ್ಮಮದ = ಮೋಹರಹಿತವಾದ, ನಿರ್ಮಲೋತ್ಸಹದೆ = ನಿರ್ಮಲ + ಉತ್ಸಹದೆ(ಉತ್ಸಾಹದಿಂದ), ನೀನಾಚರಿಸೆ = ನೀನು + ಆಚರಿಸೆ.

ವಾಚ್ಯಾರ್ಥ: ನಿನಗೆ ಜನ್ಮಜನ್ಮಾಂತರದ ಕರ್ಮ ಮತ್ತು ಸಂಬಂಧಗಳಿಂದ ಧರ್ಮನಿರ್ಣಯ ದೊರೆಯುತ್ತದೆ. ಅದನ್ನು ನೀನು ಅರಿತು, ಮೋಹರಹಿತವಾದ ಆದರೆ ನಿರ್ಮಲವಾದ ಉತ್ಸಾಹದಿಂದ ಕರ್ಮಮಾಡಿದರೆ ಬ್ರಹ್ಮ ಸಾಮಿಪ್ಯ ದೊರೆಯತ್ತದೆ.

ವಿವರಣೆ: 'ಧರ್ಮ', 'ಧಾರ್ಮಿಕ' ಪದಗಳು ಸ್ವಯಂವೇದ್ಯವೆನ್ನಿಸಿದರೂ, ಖಚಿತವಾಗಿ ಅವುಗಳ ಅರ್ಥವನ್ನು ಹೀಗೆಯೇ ಎಂದು ನಿರೂಪಿಸುವುದು ಕಷ್ಟ. ಯಾಕೆಂದರೆ ಅವು ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆ ಬೇರೆ ಅರ್ಥಗಳನ್ನೇ ಕೊಡಬಹುದು. ಧರ್ಮ ಎಂದರೆ ಒಳ್ಳೆಯ ನಡವಳಿಕೆ. ಅದು ಆತ್ಮದ ಮೊಗ್ಗಿನ ಅರಳುವಿಕೆ. ಯಾವ ನಡವಳಿಕೆಯಿಂದ ಸಮಾಜಕ್ಕೂ, ನಮಗೂ ಒಳ್ಳೆಯದಾಗುತ್ತದೋ, ಅದು ಧರ್ಮ ಎಂಬ ಸರಳ ವ್ಯಾಖ್ಯೆಯನ್ನು ಇಟ್ಟುಕೊಂಡರೆ, ಪ್ರತಿಯೊಬ್ಬರಿಗೂ ಅವರದೇ ಆದ ಧರ್ಮವಿದೆ. ಸೈನಿಕರಿಗೆ ಸೈನ್ಯದ ಧರ್ಮ, ರಾಜಕಾರಣಿಗೆ ರಾಜಧರ್ಮ, ಸಾಹಿತಿಗಳಿಗೆ ಸಾಹಿತ್ಯಧರ್ಮ, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಧರ್ಮ ಹೀಗೆ ಎಲ್ಲ ವ್ಯಕ್ತಿಗಳಿಗೆ ವಿಶೇಷ ವೃತ್ತಿಧರ್ಮಗಳಿವೆ.

ಒಂದೊಂದು ಜೀವನದ ಸ್ವಭಾವರಚನೆಯೂ, ಸಂದರ್ಭ ಸನ್ನಿವೇಶವೂ ಒಂದೊಂದು ರೀತಿಯದ್ದಾಗಿರುತ್ತದೆ. ಆದ್ದರಿಂದ ಧರ್ಮನಿರ್ಣಯ ಮಾಡುವುದೂ ಬೇರೆ ಬೇರೆಯಾಗಿ. ಅವರವರ ಧರ್ಮ, ಕರ್ಮ ಏನು ಎನ್ನುವುದನ್ನು ಅವರವರೇ ಕಂಡುಕೊಳ್ಳಬೇಕು. ಉದಾಹರಣೆಗೆ ಧರ್ಮಪ್ರಸಕ್ತವಾದ ಯುದ್ಧದಲ್ಲಿ ನಿಂತು ಹೋರಾಡುವುದು ಕ್ಷತ್ರಿಯ ಧರ್ಮ. ಆದ್ದರಿಂದ ಅದು ಅರ್ಜುನನಿಗೆ ಕರ್ತವ್ಯವಾಯಿತು, ವೇದವ್ಯಾಸರಿಗಲ್ಲ. ಯುದ್ಧ ಮಾಡಬೇಕಾದ ಅರ್ಜುನ ಯುದ್ಧದಿಂದ ವಿಮುಖನಾಗಲು ಹೊರಟಾಗ, ಅವನನ್ನು ಕೃಷ್ಣ ಎಚ್ಚರಿಸಬೇಕಾಯಿತು. ದ್ರೋಣಾಚಾರ್ಯರು ಬ್ರಾಹ್ಮಣರು, ಗುರುಗಳು. ಅವರು ಘನಘೋರ ಯುದ್ಧ ಮಾಡಬೇಕಿರಲಿಲ್ಲ. ಆದರೂ ಮಾಡಿದರು. ಅದಕ್ಕೇ ಅವರ ತಂದೆ ಭಾರದ್ವಾಜರು ಉಳಿದ ಮಹರ್ಷಿಗಳ ಜೊತೆಗೆ ಬಂದು, ಧರ್ಮವಲ್ಲದ ಯುದ್ಧವನ್ನು ಮಾಡತಕ್ಕದ್ದಲ್ಲ ಎಂದು ತಿಳಿಸಿ ಹೋದರು. ಪಂಚಪತಿ ಸ್ವೀಕಾರ ದ್ರೌಪದಿಗೆ ಕರ್ತವ್ಯವಾಯಿತು, ಉಳಿದ ಸ್ತ್ರೀಯರಿಗಲ್ಲ. ಭರತನಿಗೆ ಯುದ್ಧ ಮಾರ್ಗವಾದರೆ ಬಾಹುಬಲಿಗೆ ತ್ಯಾಗ ಮಾರ್ಗವಾಯಿತು.

ಧರ್ಮನಿರ್ಣಯವೆನ್ನುವುದು ಜನ್ಮ ಜನ್ಮಾಂತರಗಳಿಂದ ಬಂದ ಕರ್ಮದ ವಾಸನೆಗಳು ಮತ್ತು ಸಂದರ್ಭದ ಮೇಲೆ ತೀರ್ಮಾನವಾಗುತ್ತದೆ ಎಂಬುದನ್ನು ನಾವು ಅರಿಯಬೇಕು. ಹಾಗಾದರೆ ನಮ್ಮ ಜವಾಬ್ದಾರಿ ಏನೂ ಇಲ್ಲವೆ? ಇದೆ. ನಿರ್ಮಲವಾದ ಉತ್ಸಾಹದಿಂದ, ನಮಗೆ, ನಮ್ಮ ಯೋಗ್ಯತೆಗೆ ತಕ್ಕಂತೆ ಕರ್ಮಕ್ಕೆ ಸರಿಯಾಗುವಂತೆ ದೊರೆತ ಕಾರ್ಯವನ್ನು ಬಿಡದೆ ಮಾಡುವುದು. ಇದಕ್ಕೆ ಇನ್ನೊಂದು ಷರತ್ತಿದೆ. ಅದೆಂದರೆ ಮಾಡುವ ಕಾರ್ಯದಲ್ಲಿ ಮಮಕಾರವಿರಬಾರದು. ಇದು ನನ್ನದು, ನನಗಾಗಿ ಎಂದು ಮಾಡಿದ ಕೆಲಸ ಸ್ವಾರ್ಥವಾಗುತ್ತದೆ. ಹೀಗೆ ನಿರ್ಮಮತೆಯಿಂದ, ನಿರ್ಮಲ ಉತ್ಸಾಹದಿಂದ ಮಾಡಿದ ಕಾರ್ಯವೇ ನಮ್ಮ ಬ್ರಹ್ಮದ ಸಮೀಪಕ್ಕೆ ಕರೆದೊಯ್ಯುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮೇ 6, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ಪಂಚಮಿ ಗಂ. 12-33 ನಕ್ಷತ್ರ: ಆರ್ದ್ರಾ ಗಂ. 09-20 ಯೋಗ: ಧೃತಿ ಗಂ. 19-06, ಕರಣ: ಬಾಲವ ಗಂ. 12-33, ಮೇಷ ಮಾಸದ 22 ನೇ ದಿನ. ರಾಹುಕಾಲ : ಬೆಳಿಗ್ಗೆ 10:30 – 12:00
ಸೂರ್ಯೋದಯ : 06-11 ಸೂರ್ಯಾಸ್ತ : 06-43 ಮುಸ್ಲಿಂ ದಿನಾಂಕ : 04 ಶವ್ವಾಲ್
ದಿನ ವಿಶೇಷ : ಶ್ರೀ ಶಂಕರಾಚಾರ್ಯ ಜಯಂತಿ, ಶ್ರೀ ರಾಮಾನುಜಾಚಾರ್ಯ ಜಯಂತಿ (ದ.ಭಾರತ)
ಅದೃಷ್ಟ ಸಂಖ್ಯೆ : 1, 7

ಮೇಷ: ಖಾಸಗಿ ಕಂಪನಿಯಲ್ಲಿರುವವರು ಉದ್ಯೋಗದಲ್ಲಿ ತಮ್ಮ ಮೇಲಧಿಕಾರಿಗಳಿಂದ ಅನುಕೂಲ ಪಡೆಯುವರು. ಪ್ರವಾಸದಿಂದ ಅನಿರೀಕ್ಷಿತವಾದ ಲಾಭ. ಅವಿವಾಹಿತರಿಗೆ ವಿವಾಹಯೋಗವಿದೆ.

ವೃಷಭ: ಆರನೆಯ ಇಂದ್ರಿಯದ ಸೂಚನೆಯ ಸಹಾಯ ನಿಮಗೆ ಉಪಯುಕ್ತವಾಗಲಿದೆ. ವ್ಯಾಪಾರದಲ್ಲಿ ಅತೀವ ಆಸಕ್ತಿ ಮೂಡುತ್ತದೆ. ಅದರಿಂದ ಅಧಿಕ ಲಾಭಂಶ ಹೊಂದುವಿರಿ. ಅಪೇಕ್ಷಿಗಳಿಗೆ ಸಂತಾನ ಭಾಗ್ಯ ದೊರೆಯುವುದು.

ಮಿಥುನ: ಅಪರೂಪದ ಮೃದುಧೋರಣೆ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯ ಹಾಗೂ ಸಂತೋಷವೆನಿಸುವುದು. ಇಂದು ಕೊಟ್ಟ ಹಣ ಹಿಂದುರುಗುವುದು ಕಷ್ಟಸಾಧ್ಯ. ಆದ್ದರಿಂದ ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ.

ಕರ್ಕಾಟಕ: ಮನೆಯವರ ಅಥವಾ ಹಿರಿಯರ ಮಾತಿನಂತೆ ಕೆಲಸ ಕೈಗೊಳ್ಳುವುದು ಉತ್ತಮ. ಹೆಂಡತಿಯ ಆರೋಗ್ಯ ಸುಧಾರಿಸುತ್ತದೆ. ಹೊಸ ಕಾರ್ಯದ ಜವಾಬ್ದಾರಿ ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ನಿಮ್ಮದಾಗಲಿದೆ.

ಸಿಂಹ: ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿ ಅಪೇಕ್ಷಿತ ಜಯವನ್ನು ಹೊಂದುವುದರಲ್ಲಿ ಯಶಸ್ವಿಯಾಗುವರು. ನಿಮ್ಮ ಸಂಸ್ಥೆಯ ಹೊಸ ಅರ್ಥಿಕ ನೀತಿಯಿಂದ ನಿಮಗೆ ಹಣಕಾಸಿನ ವಿಷಯದಲ್ಲಿ ಲಾಭ ಸಂಭವಿಸುವುದು.

ಕನ್ಯಾ: ದಾಂಪತ್ಯ ಜೀವನಸುಖಮಯವಾಗಿರುತ್ತದೆ. ರೈತರು ಹಾಗು ವಿದ್ಯಾರ್ಥಿ ವರ್ಗಕ್ಕೆ ಪ್ರಯತ್ನ ಬಲಕ್ಕೆ ತಕ್ಕ ಫಲ ದೊರೆಯುವುದು. ಸಾಫ್ಟ್‌ವೇರ್ ಹಾಗೂ ತಾಂತ್ರಿಕ ವಿದ್ಯಾರ್ಥಿಗಳಿಗೆ ನೌಕರಿ ಸಿಗುವ ಲಕ್ಷಣವಿದೆ.

ತುಲಾ: ಆಹಾರ ಪದಾರ್ಥ, ಉಕ್ಕು (ಕಬ್ಬಿಣ) ಮುಂತಾದ ಗೃಹಬಳಕೆ ಸಾಮಾನುಗಳ ವರ್ತಕರಿಗೆ ದಿನದ ಪೂರ್ವದಲ್ಲಿ ಅಧಿಕ ಲಾಭ. ತೀರ್ಥಕ್ಷೇತ್ರಗಳ ದರ್ಶಕ್ಕೆ ಹೋಗುವ ಮನಸ್ಸಾಗಲಿದೆ. ಶ್ರೀದೇವಿ ಸ್ತುತಿಯಿಂದ ಮನಸ್ಸಿಗೆ ನೆಮ್ಮದಿ.

ವೃಶ್ಚಿಕ: ಹಣಕಾಸು ಸಂಸ್ಥೆಗಳನ್ನು ನಡೆಸುವವರಿಗೆ ತಮ್ಮ ದುಡುಕು ನಿರ್ಧಾರದಿಂದ ನಷ್ಟ. ನಿಮ್ಮ ಆಶಾವಾದ ಮತ್ತು ಧನಾತ್ಮಕ ವರ್ತನೆ, ಅಭಿವೃದ್ಧಿಯ ಹೆಜ್ಜೆಗಳು ಸುತ್ತಮುತ್ತಲಿನ ಜನರ ಕಣ್ಣನ್ನು ಕೆಂಪಾಗಿಸುತ್ತದೆ.

ಧನು: ಸಮಾಜದಲ್ಲಿ ಹೆಸರು ಸಂಪಾದಿಸಲು ಪೂರಕ ವಾತಾವರಣ. ಕೋಪದ ಮೇಲೆ ನಿಯಂತ್ರಣವಿರಲಿ. ಗೃಹದಲ್ಲಿ ಶುಭ ಸಮಾರಂಭಗಳು ನಡೆಯುವುದು. ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಸಂಪಾದಿಸಿಕೊಳ್ಳಬಹುದು.

ಮಕರ: ಇಂದು ನೀವು ತೆಗೆದುಕೊಳ್ಳುವ ನಿರ್ಧಾರ ಸರಿಯಾಗಿಯೇ ಇರುತ್ತದೆ. ವೈದ್ಯರಿಗೆ ಬಿಡುವಿಲ್ಲದ ಅಭ್ಯಾಸದ ಜೊತೆಗೆ ಉನ್ನತ ಜವಾಬ್ದಾರಿ ಸ್ಥಾನಕ್ಕೆ ವರ್ಗವಣೆಯಾಗುವುದು. ದಿನದ ಕೆಲ ಹೊತ್ತನ್ನು ಮನರಂಜನೆಗಾಗಿ ಮೀಸಲಿಡಿ.

ಕುಂಭ: ಮಿತ್ರರಿಂದ ಮನಸ್ಸಿಗೆ ನೋವಾಗುವಂತಹ ಕೆಲವು ಮಾತುಗಳನ್ನು ಕೇಳಬೇಕಾಗುವುದು. ಮನೆ ಜಾಗದ, ಪಿತ್ರಾರ್ಜಿತ ಆಸ್ತಿಯ ಹಂಚಿಕೆಯ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳುವ ಪರಿಸ್ಥಿತಿ ಬರುವುದು.


ಮೀನ: ಆಪ್ತರ ಕಷ್ಟಗಳ ಕಡೆಗೆ ಗಮನ ಕೊಡುವುದು ಉತ್ತಮ, ಅದರಿಂದ ಪುಣ್ಯ ಸಂಪಾದನೆ ಆಗುವುದು. ಹಿರಿಯರ ಆರೋಗ್ಯದಲ್ಲಿ ಸುಧಾರಣೆ. ಅತಿಯಾದ ಹಣದ ವ್ಯಾಮೋಹ ಪಶ್ಚಾತ್ತಾಪಕ್ಕೆ ಕಾರಣವಾಗಬಹುದು.

ಪದಬಂಧ 4949

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಲ್ವತ್ತೆಂಟನೆಯ ಸಂವತ್ಸರ ಸಂತೋಷವನ್ನೂ ತಂದಿದೆ (3)
4.ಹಸನ್ಮುಖ ವದನವಿದು (4)
6.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
8.ಜರಿಯದಿರಿ! ಇದು ಮುಸಲ್ಮಾನರ ಕಾಲಗಣನೆ (3)
11.ಕುದುರೆಯನ್ನೇರುವ ಬಳೆ (3)
13.ಮಣಿ ಧರಿಸಿರುವ ಸೂರ್ಯ! (4)
17.ಯಕ್ಷಿಣಿಗಾರನಿಲ್ಲಿ ತಿರುಗಿದ್ದಾನಲ್ಲಾ? (4)
18.ಯೋಗವಿದ್ದಾಗಲೇ ಈ ಅದೃಷ್ಟ! (3)

ಮೇಲಿಂದ ಕೆಳಕ್ಕೆ
1.ಚಾಂದ್ರಮಾನದಲ್ಲಿ ನಾಲ್ಕನೆಯ ತಿಂಗಳು (3)
2.ಈತ ದನಗಳನ್ನು ಕಾಯುವವನು (4)
3.ಕಾವ್ಯದ ನವರಸಗಳಲ್ಲಿ ಜಿಗುಪ್ಸೆಯನ್ನುಂಟು ಮಾಡುವುದು (3)
5.ಪಗಡೆಯಾಟ ದಾಳದಿಂದ ಸೂಚಿತವಾಗುವ ಸಂಖ್ಯೆ (2)
7.ವರ್ಣದಿಂದಲೇ ವಿಸ್ತಾರವಾದ ನಿರೂಪಣೆ (3)
9.ಪೇರಿ ಕಿತ್ತಾಗಲೇ ಮಾಡಿರುವ ದುರಸ್ತಿ (3)
10.ವಿಷಯದ ಕ್ರಮಬದ್ಧವಾದ ನಿರೂಪಣೆ (3)
12.ಚಿಲ್ಲರೆ ಹಣವಿದು (4)
14.ಹಿತವಾದ ಮಾತು (3)
15.ತಿರುಗಿದಾಗ ಕಾಣಿಸಿದ್ದು ಆಶ್ರಯಸ್ಥಾನ (2)
16.ಖಂಡಿತವಾಗಿಯೂ ಇದೊಂದು ಅಳತೆ! (3)



4948 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಜಮಾಬಂದಿ 5.ಸನದು
6.ವಾತಾಯನ 8.ಗತ್ಯಂತರ
12.ಪ್ರಕಟಿಸು 14.ಅನುವಾದ
15.ಬಾಹಿರ 16.ವಿದ್ಯಮಾನ

ಮೇಲಿಂದ ಕೆಳಕ್ಕೆ:
1.ಅಸಭ್ಯತನ 2.ಮದುಮಗ
3.ಜನಿವಾರ 4.ದಿವಾನ
7.ಯತ್ನ 9.ತವಕ
10.ರವಿಕಿರಣ 11.ಹೇನು
12.ಪ್ರದರ್ಶನ 13. ಸುಮಬಾಣ
14.ಅಡವಿ

ಸುಡೊಕು 5335

4		3		2		6		1
	6						9	
	7			3			4	8
	4		3		1		7	
1	3	7				4		5
			4		7		1	
	2		5				3	
6		9				5		4
	5				2		8	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5334 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ಷೇರುಪೇಟೆ ವಹಿವಾಟು 33



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,678
ಇಂದಿನ ಅಂತ್ಯ	16,683
▲	5
ದಿನದ ಗರಿಷ್ಠ	16,946

ವಿನಿಮಯ ದರ

$ ಡಾಲರ್	76.35
£ ಪೌಂಡ್	95.86
€ ಯುರೊ	80.82
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹370
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹370

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈಂಡ್)	₹1645 (1650)
ಸೋಯಾ (ರಿಫೈಂಡ್)	₹1575 (1580)
ಸೂರ್ಯಕಾಂತಿ (ರಿಫೈಂಡ್)	₹1900 (1900)
ಪಾಮೋಲಿನ್	₹1555 (1550)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹197-595
ದ್ವಿತಳಿ (ಬಿ.ವಿ)	₹222-758

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹168.50
ಆರ್‌ಎಸ್‌ಎಸ್-5	₹162
ಗುಡ್ ಲಾಟ್	₹158

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1100-1300
ಮಧ್ಯಮ	₹800-1000
ಸಣ್ಣ	₹500-900

ಟರ್ಕಿ: ಹಣದುಬ್ಬರ ಶೇ 70ಕ್ಕೆ

ಇಸ್ತಾನ್‌ಬುಲ್ (ಎಎಫ್‌ಪಿ): ಟರ್ಕಿಯಲ್ಲಿ ಹಣದುಬ್ಬರ ದರ ಏಪ್ರಿಲ್‌ನಲ್ಲಿ ಶೇಕಡ 70ಕ್ಕೆ ಏರಿಕೆ ಆಗಿದೆ. ಗ್ರಾಹಕ ಬೆಲೆ ಸೂಚ್ಯಂಕವು ಶೇ 69.97ಕ್ಕೆ ಏರಿಕೆ ಕಂಡಿದೆ. ಮಾರ್ಚ್‌ನಲ್ಲಿ ಶೇ 61.14ರಷ್ಟು ಇತ್ತು.

ವಿವಿಧ ಬ್ಯಾಂಕ್‌ಗಳಿಂದ ಸಾಲದ ಬಡ್ಡಿದರ ಏರಿಕೆ

ನವದೆಹಲಿ (ಪಿಟಿಐ): ಆರ್‌ಬಿಐ ರೆಪೊ ದರ ಏರಿಕೆ ಮಾಡಿರುವುದಕ್ಕೆ ಅನುಗುಣವಾಗಿ ಐಸಿಐಸಿಐ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಬರೋಡಾ ಸಾಲದ ಮೇಲಿನ ಬಡ್ಡಿದರ ಏರಿಕೆ ಮಾಡಿವೆ.

ಐಸಿಐಸಿಐ ಬ್ಯಾಂಕ್ ಬುಧವಾರ ದಿಂದಲೇ ಜಾರಿಗೆ ಬರುವಂತೆ ಎಕ್ಸ್‌ಟರ್ನಲ್ ಬೆಂಚ್‌ಮಾರ್ಕ್ ಲೆಂಡಿಂಗ್ ರೇಟ್ (ಇಬಿಎಲ್‌ಆರ್) ಅನ್ನು ಶೇ 8.10ಕ್ಕೆ ಹೆಚ್ಚಿಸಿದೆ.

ಬ್ಯಾಂಕ್ ಆಫ್ ಬರೋಡಾ ಗುರುವಾರದಿಂದ ಅನ್ವಯಿಸುವಂತೆ ರೆಪೊ ದರ ಆಧರಿಸಿದ, ಸಾಲದ ಮೇಲಿನ ಬಡ್ಡಿದರವನ್ನು (ಆರ್‌ಬಿಎಲ್‌ಆರ್) ಅನ್ನು ಶೇ 6.90ಕ್ಕೆ ಏರಿಕೆ ಮಾಡಿದೆ.

ಕೋಟಕ್ ಮಹೀಂದ್ರ ಬ್ಯಾಂಕ್ ₹ 2 ಕೋಟಿಗಿಂತ ಕಡಿಮೆ ಮೊತ್ತದ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಶೇ 0.35ರವರೆಗೆ ಹೆಚ್ಚಳ ಮಾಡಿದೆ. ಇದು ಶುಕ್ರವಾರದಿಂದ ಜಾರಿಗೆ ಬರಲಿದೆ.

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಆರ್‌ಬಿಎಲ್‌ಆರ್ ಅನ್ನು ಶೇ 0.40ರಷ್ಟು ಹೆಚ್ಚಿಸಿದ್ದು, ಇದರಿಂದ ಗ್ರಾಹಕರಿಗೆ ನೀಡಿಕೆ ದರವು ಶೇ 7.25ಕ್ಕೆ ತಲುಪಿದೆ.

ಬ್ಯಾಂಕ್ ಆಫ್ ಇಂಡಿಯಾ ಸಹ ಗುರುವಾರದಿಂದಲೇ ಜಾರಿಗೆ ಬರುವಂತೆ ಆರ್‌ಬಿಎಲ್‌ಆರ್ ಅನ್ನು ಶೇ 7.25ಕ್ಕೆ ನಿಗದಿ ಮಾಡಿದೆ.

ಚಿನ್ನದ ದರ ₹ 559 ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ, ಬೆಳ್ಳಿ ದರ ಏರಿಕೆ ಕಂಡಿದೆ.10 ಗ್ರಾಂ ಚಿನ್ನದ ದರ ₹ 559ರಷ್ಟು ಹೆಚ್ಚಾಗಿ ₹ 51,081ಕ್ಕೆ ಏರಿಕೆ ಆಗಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,179ರಷ್ಟು ಹೆಚ್ಚಾಗಿ ₹ 63,427ರಂತೆ ಮಾರಾಟ ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54000
ಚಿತ್ರದುರ್ಗ	
ಆಪಿ	48229-48669
ಬೆಟ್ಟೆ	37719-38159
ಕೆಂಪುಗೋಟು	31609-32010
ರಾಶಿ	47739-48189
ಕಾರ್ಕಳ	
ಹೊಸತು	40000-45000
ಹಳತು	46000-54000
ಕುಮಟ	
ಚಿಪ್ಪು	22709-32869
ಕೋಕ	25099-29309
ಹಳೆಚಾಲಿ	48969-49119
ಹೊಸಚಾಲಿ	33789-39119
ಪುತ್ತೂರು	
ಕೋಕ	11000-26000
ಹೊಸತು	27500-45000
ಸಾಗರ	
ಬಿಳಿಗೋಟು	18000-29389
ಚಾಲಿ	33009-38899
ಕೋಕ	16299-34639
ಕೆಂಪುಗೋಟು	17399-38299
ರಾಶಿ	32969-49399
ಸಿಪ್ಪೆಗೋಟು	7119-21592
ಶಿವಮೊಗ್ಗ	
ಬೆಟ್ಟೆ	51319-53100
ಗೊರಬಲು	19136-37009
ರಾಶಿ	45000-49409
ಸರಕು	56209-79909
ಸಿದ್ದಾಪುರ	
ಬಿಳಿಗೋಟು	22199-32899
ಕೋಕ	23389-31988
ಚಾಲಿ	42611-42611
ಕೆಂಪುಗೋಟು	24699-32609
ರಾಶಿ	45599-48599
ತಟ್ಟಿಬೆಟ್ಟೆ	36699-47439
ಶಿರಸಿ	
ಬೆಟ್ಟೆ	37199-46105
ಬಿಳಿಗೋಟು	21009-32599
ಚಾಲಿ	26899-40461
ರಾಶಿ	45805-50699
ಯಲ್ಲಾಪುರ	
ಆಪಿ	54695-56399
ಬಿಳಿಗೋಟು	28899-34061
ಚಾಲಿ	38399-40799
ಕೋಕ	18899-30899
ಕೆಂಪುಗೋಟು	31699-34699
ರಾಶಿ	48699-54811
ತಟ್ಟಿಬೆಟ್ಟೆ	38699-47899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	15850	16000	217.95 ಸೆಂಟ್ಸ್
ಎಸಿ	8900	8500	8550	
ಆರ್‌ಪಿ	9700	9700	9900	ಲಂಡನ್
ಆರ್‌ಸಿ	4430	4100	4400	2115ಡಾಲರ್ಸ್

ಆದಿಶಂಕರರ ಅ-ವಿರೋಧಿ ದೃಷ್ಟಿ

• ಅಕ್ಷರ ಕೆ.ವಿ.



ಇಂದು ಶಂಕರ ಜಯಂತಿ

ಭಾರತದ ಗತಕಾಲದ ದಾರ್ಶನಿಕ-ಧಾರ್ಮಿಕ ಸಂಪ್ರದಾಯಗಳು ನಮಗೆ ಕೊಟ್ಟಿರುವ ಅತ್ಯಂತ ಶಕ್ತಿಶಾಲಿ ಸಂಪನ್ಮೂಲ - ಆಯ್ಕೆ ಮತ್ತು ವ್ಯಾಖ್ಯಾನದ ಸ್ವಾತಂತ್ರ್ಯ. ಲಭ್ಯವಿರುವ ಪಠ್ಯ-ಪರಂಪರೆಗಳಲ್ಲಿ ಅಗತ್ಯವಿರುವ ಪರಿಕಲ್ಪನೆಗಳನ್ನು ಆಯ್ದುಕೊಳ್ಳುವ, ಮತ್ತು ಅವನ್ನು ನಮ್ಮ ಸಂದರ್ಭಕ್ಕೆ ಅನುವಾಗುವಂತೆ ವ್ಯಾಖ್ಯಾನಿಸಿ ಮರುರೂಪಿಸಿಕೊಳ್ಳುವ ಸೌಲಭ್ಯವು ನಮಗೆ ಈ ಸಂಪ್ರದಾಯದಿಂದಲೇ ಸಿಕ್ಕಿದೆ. ಉಪನಿಷತ್ಕಾರರಿಂದ ತೊಡಗಿ ಬುದ್ಧ-ಮಹಾವೀರರವರೆಗಿನ ಪುರಾತನ ದಾರ್ಶನಿಕರು ಮಾಡಿದ್ದು ಇಂಥ ಆಯ್ಕೆ-ಮರುನಿರೂಪಣೆಗಳ ಕಾರ್ಯವನ್ನು. ಮೊದಲ ಸಹಸ್ರಮಾನದ ದ್ವಿತೀಯಾರ್ಧದಲ್ಲಿ ಭಾರತದ ದರ್ಶನಗಳು ಶಾಖೆಗಳಾಗಿ ಹರಳುಗಟ್ಟಲು ಆರಂಭವಾದಾಗ ಆದಿಶಂಕರರು ಮತ್ತೊಮ್ಮೆ ಇಂಥದೇ ಸಂಗ್ರಹಣ-ಸಂಶ್ಲೇಷಣದ ಕೆಲಸ ಮಾಡಿದರು. ಇವತ್ತು, ಅದ್ವೈತ ವೇದಾಂತವೆಂಬ ದರ್ಶನವು ಶಂಕರರ ಹೆಸರಿನೊಂದಿಗೆ ತಳುಕು ಹಾಕಿಕೊಂಡಿದೆಯಾದರೂ ನಿಜವಾಗಿ ಅದನ್ನು 'ಕಂಡುಹಿಡಿದವರು' ಅವರಲ್ಲ. ಉಪನಿಷತ್ತುಗಳಲ್ಲಿಯೂ ಮತ್ತು ಬೇರೆಬೇರೆ ದರ್ಶನಗಳಲ್ಲಿಯೂ ಲಭ್ಯವಿದ್ದ ಆಕೃತಿಗಳನ್ನು ಆಯ್ದು, ಅವನ್ನು ಒಂದಕ್ಕೊಂದು ವಿರೋಧವಾಗದಂತೆ ಪರಿಷ್ಕರಿಸಿ ಮರುರೂಪಿಸಿ ಅದ್ವೈತವೆಂಬ ಹೊಸ ಆಕಾರವು ಸ್ಫುಟವಾಗುವಂತೆ ಮಾಡಿದವರು ಆದಿಶಂಕರರು.

ತಾತ್ವಿಕ ಮಾರ್ಗವೊಂದನ್ನು ಹೀಗೆ, ಹೊಸತಾಗಿ ಕಲ್ಪಿಸುವ ಬದಲು, ಇರುವ ಆಕರಗಳಲ್ಲೇ ಆವಿಷ್ಕರಿಸುವ ವಿಧಾನವೇನಿದೆ, ಅದಕ್ಕೆ ದೊಡ್ಡದೊಂದು ಅನುಕೂಲತೆಯಿದೆ. ಅದೇನೆಂದರೆ, ಇಂಥ ಆಯ್ಕೆ-ವ್ಯಾಖ್ಯಾನದ ಮಾರ್ಗವು ತನಗಿಂತ ಮೊದಲಿರುವ ಅನ್ಯ ನಿಲುವುಗಳನ್ನು ನಿರಾಕರಿಸುವುದಿಲ್ಲ, ಅವನ್ನೂ ಒಳಗೊಂಡು ಬೆಳೆಯುತ್ತದೆ; ತನಗಿಂತ ಪೂರ್ವದ ಚಿಂತನೆಗಳನ್ನು ಅದು ಅಲ್ಲಗಳೆಯುವುದಿಲ್ಲ, ಬದಲು ವಿಸ್ತರಿಸಿ ಪರಿಷ್ಕರಿಸುತ್ತದೆ. ಭಾರತದಲ್ಲಿ ಅದ್ವೈತ ಸಂಪ್ರದಾಯವು ಅತ್ಯಂತ ಹೆಚ್ಚು ಪ್ರಚಲಿತವಾಗಿದ್ದಕ್ಕೆ ಕಾರಣ, ಅದು ಇಂಥ ವಿಸ್ತರಣ ಮತ್ತು ಪರಿಷ್ಕರಣೆಯ ದಾರಿ ಹಿಡಿದದ್ದೇ ಕಾರಣವಾಗಿರಬಹುದು ಎಂದು ಊಹಿಸಲಿಕ್ಕೆ ನಮಗೆ ಬೇಕಷ್ಟು ಸಾಕ್ಷ್ಯಗಳು ಸಿಗುತ್ತವೆ.

ಸ್ವಾರಸ್ಯದ ಅಂಥ ಒಂದು ಉದಾಹರಣೆ, ಆದಿಶಂಕರರ ಗುರುಪಿತಾಮಹರಾಗಿದ್ದ ಗೌಡಪಾದರೇ ಮಾಡಿರುವ ಪ್ರಸ್ತಾಪ. 'ಮಾಂಡೂಕ್ಯಕಾರಿಕೆ'ಯಲ್ಲಿ (3.17) ಅವರು ಮಾಡಿರುವ ಪ್ರಸ್ತಾಪ ಹೀಗೆ: 'ಸ್ವಸಿದ್ಧಾಂತ ವ್ಯವಸ್ಥಾಸು ದ್ವೈತಿನೋ ನಿಶ್ಚಿತಾ ದೃಢಮ್ ' ಪರಸ್ಪರಂ ವಿರುಧ್ಯಂತೇ ತೈರಯಂ ನ ವಿರುಧ್ಯತೇ' 'ತಮ್ಮತಮ್ಮ ಸಿದ್ಧಾಂತವೇ ನಿಶ್ಚಿತವೆಂದು ನಂಬುವ ದ್ವಯವಾದಿಗಳು ಆ ಕಾರಣದಿಂದಲೇ ಪರಸ್ಪರರನ್ನು ವಿರೋಧಿಸುತ್ತಾರೆ. ಆದರೆ ನಮ್ಮ ಸಿದ್ಧಾಂತವು ಯಾರಿಗೂ ವಿರೋಧವಲ್ಲ.' ಈ ಕಾರಿಕೆಗೆ ಭಾಷ್ಯ ಬರೆದಿರುವ ಆದಿಶಂಕರರು ಈ ಮಾತನ್ನು ಸಾಮಾಜಿಕವಾಗಿ ಅನ್ವಯಿಸಿ ವ್ಯಾಖ್ಯಾನ ಮಾಡಿದ್ದಾರೆ. ಶಂಕರರ ಮಾತುಗಳ ತಾತ್ಪರ್ಯ ಹೀಗೆ: 'ತಮ್ಮತಮ್ಮ ನಿಯಮಗಳೇ ನಿಶ್ಚಿತವೆಂದು ವಾದಿಸುವ ಭರದಲ್ಲಿ ದ್ವೈತ ನಿಲುವುಗಳಿಗೆ ರಾಗದ್ವೇಷಗಳ ಸೋಂಕು ಹತ್ತಿಕೊಳ್ಳುತ್ತದೆ. ಆದರೆ ಆತ್ಮವೊಂದೇ ಸತ್ಯವೆಂಬ ನಮ್ಮ ಸಿದ್ಧಾಂತದ ಮಾತು ಯಾರಿಗೂ ವಿರೋಧವಲ್ಲ, ನನ್ನ ಕೈಕಾಲುಗಳು ನನಗೆ ಹೇಗೆ ಬೇರೆಯಾಗಿದ್ದೂ ಬೇರೆಯಲ್ಲವೋ ಹಾಗೆ'.

ಮುಂದೆ ಅದ್ವೈತ ಸಿದ್ಧಾಂತವು ರೂಪಿಸಿಕೊಂಡ ಎಲ್ಲ ತತ್ತ್ವ-ಪರಿಕಲ್ಪನೆಗಳೂ ಈ ಬಗೆಯ ಅ-ವಿರೋಧದ ನೆಲೆಯವು. ಉದಾಹರಣೆಗೆ, ಈ ಜಗತ್ತಿನ ಸತ್ಯಗಳನ್ನು ವ್ಯಾವಹಾರಿಕ ಮತ್ತು ಪಾರಮಾರ್ಥಿಕ ಎಂದು ವಿಭಜಿಸಿ ನೋಡುವ ಮಾರ್ಗ. ಹಲವು ಟೀಕಾಕಾರರು ಅವಸರದಲ್ಲಿ ತೀರ್ಮಾನಿಸುವಂತೆ, ಈ ವಿಭಜನೆಯು ಬದುಕೆಲ್ಲವೂ ಮಿಥ್ಯೆಯೆಂದು ಪಲಾಯನ ಮಾಡುವ ಧೋರಣೆಯದ್ದೇನೂ ಅಲ್ಲ. ಬದಲು, ಈ ಲೋಕದ ಸತ್ಯಗಳಲ್ಲಿ ಹಲವು ಸ್ತರಗಳಿಗಳಿದ್ದು, ಅದರಲ್ಲಿ ಕೆಲವು ಬಗೆಯ ಸತ್ಯಗಳು ಸಾಪೇಕ್ಷವಾಗಿ ಅಷ್ಟು ನಿಜವಲ್ಲ – ಎಂಬ ಎಚ್ಚರ ಈ ನಿಲುವಿನ ಹಿಂದಿದೆ. ಉದಾಹರಣೆಗೆ, ಸಾಕಾರ ಸಗುಣ ದೇವರ ಅಸ್ತಿತ್ವ ಇದೆ ನಂಬುವ ದ್ವೈತಿಗಳೊಂದಿಗೆ, ಅದ್ವೈತಕ್ಕೆ ನಿಜವಾದ ವಿರೋಧವೇನೂ ಇಲ್ಲ. ದೇವರೆಂಬುದು, ವ್ಯಾವಹಾರಿಕ ನೆಲೆಯಲ್ಲಿ ನಿಜ, ಪಾರಮಾರ್ಥಿಕವಾಗಿ ಅಲ್ಲ - ಎಂಬುದಷ್ಟೇ ಅವರ ತಿದ್ದುಪಡಿ.

ಗೌಡಪಾದ-ಶಂಕರರ ಕಾಲಗಳು ಹೇಗಿದ್ದವೋ ನಮಗೆ ನಿಶ್ಚಿತವಾಗಿ ಗೊತ್ತಿಲ್ಲ, ಆದರೆ ನಮ್ಮ ಕಾಲಕ್ಕಂತೂ ಅವರ ಮಾತುಗಳು ಉಪಯುಕ್ತವಾದ ಪಾಠ ಹೇಳುವಂತಿವೆ. ಕಾರಣ, ನಾವಿವತ್ತು ಗೌಡಪಾದರು ಹೇಳುವ 'ಸ್ವಸಿದ್ಧಾಂತವ್ಯವಸ್ಥೆ'ಗಳನ್ನು ಇನ್ನೂ ದೃಢಗೊಳಿಸುವ ಹಠ ಹೊತ್ತಿದ್ದೇವೆ. ಮತ್ತು, ಆದಕಾರಣವೇ ಶಂಕರರು ಹೇಳುವಂತೆ ನಮ್ಮೊಳಗೆ ನಿಯಂತ್ರಿಸಲಾಗದಷ್ಟು 'ರಾಗದ್ವೇಷಯುಕ್ತ' ಸಂಘರ್ಷಗಳು ಉದ್ಭವಿಸುತ್ತಿವೆ. ಇಂಥ ಬೌದ್ಧಿಕ ಸಂಘರ್ಷದ ಕಾಲದೊಳಗಿರುವ ನಮಗೆ ಅದ್ವೈತದ ಅ-ವಿರೋಧಿ ನಿಲುವು ಹೊಸ ವಿವೇಕವನ್ನು ಕಲಿಸಬಹುದೆ? - ಈ ಶಂಕರಜಯಂತಿಯಂದು ನಾನು ಕೇಳಿಕೊಳ್ಳುವ ಪ್ರಶ್ನೆ ಇದು.

(ಲೇಖಕ 'ಶಂಕರವಿಹಾರ' ಪುಸ್ತಕದ ಕರ್ತೃ)

ಏಪ್ರಿಲ್‌ನಲ್ಲಿ ಶೇ 37ರಷ್ಟು ಜಿಗಿತ: ವಾಹನ ವಿತರಕರ ಒಕ್ಕೂಟದ ಮಾಹಿತಿ

ವಾಹನ ರಿಟೇಲ್ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ವಾಹನಗಳ ರಿಟೇಲ್ ಮಾರಾಟವು ಕಳೆದ ವರ್ಷದ ಏಪ್ರಿಲ್‌ಗೆ ಹೋಲಿಸಿದರೆ ಈ ವರ್ಷದ ಏಪ್ರಿಲ್‌ನಲ್ಲಿ ಶೇಕಡ 37ರಷ್ಟು ಹೆಚ್ಚಾಗಿದೆ ಎಂದು ಭಾರತೀಯ ವಾಹನ ವಿತರಕರ ಒಕ್ಕೂಟ (ಎಫ್‌ಎಡಿಎ) ಗುರುವಾರ ಮಾಹಿತಿ ನೀಡಿದೆ.

2021ರ ಏಪ್ರಿಲ್‌ನಲ್ಲಿ 11.87 ಲಕ್ಷ ವಾಹನಗಳು ಮಾರಾಟ ಆಗಿದ್ದವು. 2022ರ ಏಪ್ರಿಲ್‌ನಲ್ಲಿ 16.27 ಲಕ್ಷಕ್ಕೆ ಏರಿಕೆ ಆಗಿದೆ.

ಪ್ರಯಾಣಿಕ ವಾಹನ ಮಾರಾಟವು 2.10 ಲಕ್ಷದಿಂದ 2.64 ಲಕ್ಷಕ್ಕೆ, ಅಂದರೆ ಶೇ 25ರಷ್ಟು ಹೆಚ್ಚಾಗಿದೆ. ದ್ವಿಚಕ್ರ

> **ಆರ್‌ಬಿಐ ಬಡ್ಡಿದರ ಹೆಚ್ಚಳ ಮಾಡಿರುವುದರಿಂದ ವ್ಯವಸ್ಥೆಯಲ್ಲಿನ ನಗದು ಲಭ್ಯತೆ ಕಡಿಮೆ ಆಗಲಿದೆ. ವಾಹನ ಸಾಲವನ್ನು ದುಬಾರಿಯಾಗಿಸಲಿದೆ**
> **ವಿಂಕೇಶ್ ಗುಲಾಟಿ,** ಎಫ್‌ಎಡಿಎ ಅಧ್ಯಕ್ಷ

ವಾಹನ ಮಾರಾಟ ಶೇ 38ರಷ್ಟು, ತ್ರಿಚಕ್ರ ಮಾರಾಟದಲ್ಲಿ ಶೇ 96ರಷ್ಟು ಏರಿಕೆ ಆಗಿದೆ. ವಾಣಿಜ್ಯ ವಾಹನಗಳ ಮಾರಾಟ ಶೇ 52ರಷ್ಟು ಹೆಚ್ಚಾಗಿದೆ. ಟ್ರ್ಯಾಕ್ಟರ್ ಮಾರಾಟ ಶೇ 26ರಷ್ಟು ಹೆಚ್ಚಾಗಿದೆ.

ಕೋವಿಡ್–19 ಸಾಂಕ್ರಾಮಿಕದಿಂದಾಗಿ 2020ರ ಏಪ್ರಿಲ್ ಮತ್ತು 2021ರ ಏಪ್ರಿಲ್‌ನಲ್ಲಿ ವಾಹನಗಳ ಮಾರಾಟ ಅತ್ಯಲ್ಪ ಪ್ರಮಾಣದಲ್ಲಿತ್ತು. 2021ರ ಏಪ್ರಿಲ್‌ಗೆ ಹೋಲಿಸಿದರೆ 2022ರ ಏಪ್ರಿಲ್‌ನಲ್ಲಿ ಎಲ್ಲಾ ವಿಭಾಗಗಳೂ ಉತ್ತಮ ಬೆಳವಣಿಗೆ ಕಂಡಿವೆ ಎಂದು ಒಕ್ಕೂಟದ ಅಧ್ಯಕ್ಷ ವಿಂಕೇಶ್ ಗುಲಾಟಿ ಹೇಳಿದ್ದಾರೆ.



2019ರ ಮಟ್ಟಕ್ಕೆ ಹೋಲಿಸಿದರೆ 2022ರ ಏಪ್ರಿಲ್‌ನಲ್ಲಿ ಶೇ 6ರಷ್ಟು ಕಡಿಮೆ ಮಾರಾಟ ಆಗಿದೆ ಎಂದು ಅವರು ತಿಳಿಸಿದ್ದಾರೆ.

ರಷ್ಯಾ–ಉಕ್ರೇನ್‌ಸಂಘರ್ಷಮುಂದುವರಿದಿದ್ದು, ಚೀನಾದಲ್ಲಿ ಮತ್ತೆ ಲಾಕ್‌ಡೌನ್ ಜಾರಿಯಾಗಿರುವುದರಿಂದ ಸೆಮಿಕಂಡಕ್ಟರ್ ಚಿಪ್ ಕೊರತೆಯು ವಾಹನೋದ್ಯಮವನ್ನು ಇನ್ನಷ್ಟು ಕಾಡಲಿದೆ. ಲೋಹಗಳ ಬೆಲೆ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ಕಂಟೈನರ್ ಕೊರತೆ ಸಹ ವಲಯದ ಮೇಲೆ ಪರಿಣಾಮ ಉಂಟುಮಾಡಲಿದೆ ಎಂದು ಅವರು ಹೇಳಿದ್ದಾರೆ.

ಬಡ್ಡಿದರ ಹೆಚ್ಚಳ: ಬ್ಯಾಂಕ್‌ಗಳ ಸಾಲ ನೀಡಿಕೆಗೆ ಅಡ್ಡಿ



ಮುಂಬೈ (ಪಿಟಿಐ): ಆರ್‌ಬಿಐ ಬಡ್ಡಿ ದರ ಹೆಚ್ಚಳ ಮಾಡಿರುವುದರಿಂದ ಬ್ಯಾಂಕ್‌ಗಳ ಸಾಲ ನೀಡಿಕೆ ಸಾಮರ್ಥ್ಯದ ಮೇಲೆ ಪರಿಣಾಮ ಉಂಟಾಗಲಿದೆ ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ (ಇಕ್ರಾ) ಅಭಿಪ್ರಾಯಪಟ್ಟಿದೆ.

2022ರ ಏಪ್ರಿಲ್ 8ರವರೆಗಿನ ಬ್ಯಾಂಕ್‌ಗಳ ಸಾಲ ನೀಡಿಕೆಯು ಶೇ 11.2ರಷ್ಟು ಬೆಳವಣಿಗೆ ಕಾಣುವ ಮೂಲಕ ಚೇತರಿಕೆ ಕಾಣುವ ಸುಳಿವು ನೀಡಿದೆ. ಇಂತಹ ಸಂದರ್ಭದಲ್ಲಿ ಬಡ್ಡಿದರ ಹೆಚ್ಚಳ ಮಾಡುವ ಮೂಲಕ ಸಾಲವು ತುಟ್ಟಿಯಾಗುವಂತೆ ಮಾಡಲಾಗಿದೆ. ಇದರಿಂದಾಗಿ ಸಾಲ ನೀಡಿಕೆಗೆ ಹಿನ್ನಡೆಯಾಗಲಿದೆ ಎಂದು ಹೇಳಿದೆ.

2022ರ ಏಪ್ರಿಲ್ 8ರವರೆಗಿನ ಸಾಲ ನೀಡಿಕೆ ಬೆಳವಣಿಗೆಯು 2019ರ ಜುಲೈ ಬಳಿಕದ ಅತ್ಯಂತ ಗರಿಷ್ಠ ಮಟ್ಟದ್ದಾಗಿದೆ. 2021ರ ಅವಧಿಯಲ್ಲಿ ಸಾಲ ನೀಡಿಕೆಯು ಶೇ 5.3ರಷ್ಟು ಬೆಳವಣಿಗೆ ಕಂಡಿತ್ತು ಎಂದು ಅದು ತಿಳಿಸಿದೆ.

ಮಧ್ಯಮ ಅವಧಿಯಲ್ಲಿ, ಹಣದುಬ್ಬರದ ಒತ್ತಡ, ಪೂರೈಕೆ ವ್ಯವಸ್ಥೆಯಲ್ಲಿನ ಅಡ್ಡಿಗಳು ಹಾಗೂ ಗ್ರಾಹಕರಿಂದ ಬೇಡಿಕೆ ಕಡಿಮೆ ಇರುವುದು ಸಹ ಬ್ಯಾಂಕ್‌ಗಳ ಸಾಲ ನೀಡಿಕೆಯ ಮೇಲೆ ಪರಿಣಾಮ ಉಂಟುಮಾಡಲಿದೆ ಎಂದು ಇಕ್ರಾ ಹೇಳಿದೆ.

ಐದು ತಿಂಗಳ ಗರಿಷ್ಠ ಮಟ್ಟಕ್ಕೆ ಸೇವಾ ವಲಯದ ಚಟುವಟಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಏಪ್ರಿಲ್‌ನಲ್ಲಿ ಇನ್ನಷ್ಟು ಸುಧಾರಿಸಿಕೊಂಡಿದ್ದು, ಐದು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ.

ಬೇಡಿಕೆ ಹೆಚ್ಚಾಗುತ್ತಿರುವುದರಿಂದ ವಲಯದ ಚಟುವಟಿಕೆಗೆ ಉತ್ತೇಜನ ದೊರೆಯುತ್ತಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ಹೇಳಿದೆ.

ಸೇವಾ ವಲಯದ ಚಟುವಟಿಕೆಗಳನ್ನು ತಿಳಿಸುವ ಸೂಚ್ಯಂಕವು ಮಾರ್ಚ್‌ನಲ್ಲಿ 53.6ರಷ್ಟು ಇತ್ತು. ಏಪ್ರಿಲ್‌ನಲ್ಲಿ 57.9ಕ್ಕೆ ಏರಿಕೆ ಆಗಿದೆ. 2021ರ ನವೆಂಬರ್ ಬಳಿಕದ ವೇಗದ ಬೆಳವಣಿಗೆ ಇದಾಗಿದೆ. ಬೆಲೆ ಏರಿಕೆಯ ಒತ್ತಡದ ನಡುವೆಯೇ ಈ ಪ್ರಮಾಣದ ಬೆಳವಣಿಗೆ ಕಂಡುಬಂದಿದೆ. ಸತತ ಒಂಬತ್ತನೇ ತಿಂಗಳಿನಲ್ಲಿಯೂ ಸೇವಾ ವಲಯವು ಸಕಾರಾತ್ಮಕ ಹಾದಿಯಲ್ಲಿದೆ.

ಸೇವೆಗಳನ್ನು ನೀಡುವವರು ಆಹಾರ, ಇಂಧನ ಮತ್ತು ಇತರೆ ವಸ್ತುಗಳಿಗೆ ಹೆಚ್ಚು ಪಾವತಿ ಮಾಡುವಂತಾಗಿದೆ. ಒಟ್ಟಾರೆ ವೆಚ್ಚವು ಹೆಚ್ಚಾಗುತ್ತಿದೆ. ಹೀಗಾಗಿ ಪ್ರಮುಖ ಕಂಪನಿಗಳು ಮಾರಾಟ ದರವನ್ನು ಐದು ವರ್ಷಗಳ ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವಂತಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ.

ತಯಾರಿಕೆ ಮತ್ತು ಸೇವೆಗಳನ್ನು ಒಳಗೊಂಡ ಕಂಪೋಸಿಟ್ ಪಿಎಂಐ ಇಂಡೆಕ್ಸ್ 54.3ರಿಂದ 57.6ಕ್ಕೆ ಏರಿಕೆ ಆಗಿದೆ.

'ಕೋರ್ಸೆರಾ' ಜೊತೆ ಪ್ರತಿಷ್ಠಿತ ಸಂಸ್ಥೆಗಳ ಒಪ್ಪಂದ

ನವದೆಹಲಿ (ಪಿಟಿಐ): ವಿದ್ಯಾರ್ಥಿಗಳು ಶಿಕ್ಷಣ ಪಡೆಯುವ ಜೊತೆಗೇ ಉದ್ಯೋಗಕ್ಕೆ ಸಿದ್ಧತೆ ಮಾಡಿಕೊಳ್ಳಲು ನೆರವಾಗುವ ವಿಶೇಷ ಕೋರ್ಸ್‌ಗಳನ್ನು ಕಲಿಯಲು ಅನುಕೂಲ ಕಲ್ಪಿಸಲು ದೇಶದ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳು ಆನ್‌ಲೈನ್ ಕಲಿಕಾ ವೇದಿಕೆ 'ಕೋರ್ಸೆರಾ' ಜೊತೆ ಒಪ್ಪಂದ ಮಾಡಿಕೊಂಡಿವೆ.

'ಐ ಎ ಸ್ ಬಿ – ಹೈ ದ ರಾ ಬಾ ದ್, ಐಐಎಂ–ಅಹಮದಾಬಾದ್, ಐಐಟಿ–ರೂರ್ಕಿ, ಐಐಟಿ– ಗುವಾಹಟಿ ಹಾಗೂ ಬೆಂಗಳೂರಿನ ಐಐಎಸ್‌ಸಿ, ಐಐಐಟಿ ಸಂಸ್ಥೆಗಳು ವಿವಿಧ ಕೋರ್ಸ್‌ಗಳ ಕಲಿಕೆಗಾಗಿ ಒಪ್ಪಂದ ಮಾಡಿಕೊಂಡಿವೆ' ಎಂದು 'ಕೋರ್ಸೆರಾ ತಿಳಿಸಿದೆ.

ಐಐಟಿ–ರೂರ್ಕಿಯ ಎಂಬಿಎ, ಬೆಂಗಳೂರಿನ ಐಐಐಟಿಯ ಎಂಎಸ್‌ಸಿ (ಡಾಟಾ ಸೈನ್ಸ್), ಐಎಸ್‌ಬಿ–ಹೈದರಾಬಾದ್‌ನ 'ಗ್ಲೋಬಲ್ ಮ್ಯಾನೇಜ್‌ಮೆಂಟ್ ಪ್ರೊಗ್ರಾಮ್ಸ್ ಇನ್ ಇನ್ಫ್ರಾಸ್ಟ್ರಕ್ಚರ್ ಆ್ಯಂಡ್ ಇನ್ ಆಪರೇಷನ್ಸ್ ಆ್ಯಂಡ್ ಸಪ್ಲೈ ಚೈನ್' ಸೇರಿದಂತೆ ವಿವಿಧ ವಿಷಯದಲ್ಲಿ ಪದವಿ ಕೋರ್ಸ್‌ಗಳನ್ನು ಕಲಿಯಬಹುದು ಎಂದು ಕೋರ್ಸೆರಾ ತಿಳಿಸಿದೆ.

ಶೇ 13ರಷ್ಟು ಶಾಖೆ ಮುಚ್ಚಲಿದೆ ಸೆಂಟ್ರಲ್ ಬ್ಯಾಂಕ್

ಮುಂಬೈ (ರಾಯಿಟರ್ಸ್): ಸರ್ಕಾರಿ ಸ್ವಾಮ್ಯದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಶೇಕಡ 13ರಷ್ಟು ಶಾಖೆಗಳನ್ನು ಮುಚ್ಚುವ ಚಿಂತನೆ ನಡೆಸಿದೆ ಎಂದು ಸರ್ಕಾರದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹಲವು ವರ್ಷಗಳಿಂದ ಬ್ಯಾಂಕ್‌ನ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಅದನ್ನು ಸುಧಾರಿಸುವ ಉದ್ದೇಶದಿಂದ ಈ ಕ್ರಮಕ್ಕೆ ಮುಂದಾಗಿದೆ ಎನ್ನುವ ಮಾಹಿತಿಯು ಸುದ್ದಿಸಂಸ್ಥೆಗೆ ದೊರೆತಿರುವ ದಾಖಲೆಪತ್ರಗಳಿಂದ ತಿಳಿದುಬಂದಿದೆ.

ಕೆಲವು ಶಾಖೆಗಳನ್ನು ಮುಚ್ಚುವ ಮೂಲಕ ಅಥವಾ ವಿಲೀನಗೊಳಿಸುವ ಮೂಲಕ 2023ರ ಮಾರ್ಚ್ ಒಳಗಾಗಿ ಶಾಖೆಗಳ ಸಂಖ್ಯೆ ಕಡಿಮೆ ಮಾಡಲು ಮುಂದಾಗಿದೆ. ಸದ್ಯ 4,594 ಶಾಖೆಗಳನ್ನು ಬ್ಯಾಂಕ್ ಹೊಂದಿದೆ.

ಆರ್ಥಿಕ ಸ್ಥಿತಿ ಸುಧಾರಿಸಲು ಪ್ರಮುಖವಲ್ಲದ ಕೆಲವು ಆಸ್ತಿಗಳನ್ನು ಮಾರಾಟ ಮಾಡಲು ಸಹ ಬ್ಯಾಂಕ್ ಕ್ರಮ ಕೈಗೊಂಡಿದೆ ಎಂದು ಸರ್ಕಾರದ ಅಧಿಕಾರಿ ತಿಳಿಸಿದ್ದಾರೆ. ಈ ಕುರಿತು ಬ್ಯಾಂಕ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಟ್ವಿಟರ್ ಸ್ವಾಧೀನಕ್ಕೆ ₹ 54 ಸಾವಿರ ಕೋಟಿ ಸಂಗ್ರಹಿಸಿದ ಮಸ್ಕ್

ನ್ಯೂಯಾರ್ಕ್ (ಎಎಫ್‌ಪಿ): ಟ್ವಿಟರ್ ಕಂಪನಿಯನ್ನು ಖರೀದಿಸಲು ಎಲಾನ್ ಮಸ್ಕ್ ಅವರು ₹ 54 ಸಾವಿರ ಕೋಟಿ ಸಂಗ್ರಹಿಸಿದ್ದಾರೆ. ಮಸ್ಕ್ ಅವರು ಟ್ವಿಟರ್ ಖರೀದಿಸಲು, ಅದರಲ್ಲಿ ಈಗಾಗಲೇ ಹೂಡಿಕೆ ಮಾಡಿರುವ ಒರ್ಯಾಕಲ್ ಸಂಸ್ಥಾಪಕ ಲ್ಯಾರಿ ಎಲಿಸನ್, ಸೌದಿ ಅರೇಬಿಯಾದ ರಾಜಕುಮಾರ ಅಲ್ವಲೀದ್ ಬಿನ್ ತಲಾಲ್ ಅವರಿಂದ ಷೇರುಗಳನ್ನು ಖರೀದಿಸಬೇಕಿದೆ.

ಷೇರುಗಳನ್ನು ಮಾರಾಟ ಮಾಡಲು ಸಿದ್ಧವಿರುವ 18 ಹೂಡಿಕೆದಾರರನ್ನು ಮಸ್ಕ್ ಅವರು ಹೆಸರಿಸಿದ್ದಾರೆ. ಎಲಿಸನ್, ಸಿಕೋಯಾ ಕ್ಯಾಪಿಟಲ್ ಹೆಸರು ಮಸ್ಕ್ ಸಿದ್ಧಪಡಿಸಿರುವ ಪಟ್ಟಿಯಲ್ಲಿವೆ.

ಅಲ್ವಲೀದ್ ಬಿನ್ ತಲಾಲ್ ಅವರು 3.5 ಕೋಟಿ ಷೇರುಗಳನ್ನು ಮಾರಾಟ ಮಾಡಲಿದ್ದಾರೆ. ಆದರೆ, ಒಂದಿಷ್ಟು ಷೇರುಗಳನ್ನು ತಮ್ಮಲ್ಲಿಯೇ ಉಳಿಸಿಕೊಳ್ಳಲಿದ್ದಾರೆ. ಟ್ವಿಟರ್ ಸ್ವಾಧೀನ ಪ್ರಕ್ರಿಯೆಯು ಈ ವರ್ಷದಲ್ಲಿಯೇ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಸ್ವಾಧೀನ ಪೂರ್ಣಗೊಂಡ ನಂತರದಲ್ಲಿ ಮಸ್ಕ್ ಅವರು ಟ್ವಿಟರ್‌ನ ತಾತ್ಕಾಲಿಕ ಸಿಇಒ ಆಗಿ ಕೆಲಸ ಮಾಡುವ ಸಾಧ್ಯತೆ ಇದೆ ಎಂದು ಸಿಎನ್‌ಬಿಸಿ ವರದಿ ಮಾಡಿದೆ.

ಮುಂಬೈ ಧಾರಣೆ

ಶೇಂಗಾ

5-5-2022

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9600-9650
ದಪ್ಪ ಮಧ್ಯಪ್ರದೇಶ(ಹೊಸ)	11000-11050
ದಪ್ಪ ಗುಜರಾತ್(ಹೊಸ)	10050-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1660)
ಒಂದು ವಾರದ ಡೆಲಿವರಿ	1645 (1655)
ಸೋಯಾ ಕಚ್ಚಾ	1570 (1570)
ಪಾಮ್ ವಾರದ ಡೆಲಿವರಿ	1553 (1548)
ಸೂರ್ಯಕಾಂತಿ ಎಣ್ಣೆ ಕಚ್ಚಾ	1840 (1840)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,600 (50,750)
ಬೆಳ್ಳಿ ಕೆ.ಜಿ 63,300 (62,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ



ದುಬಾರಿಯಾದ ವೇಗಿ ಉಮ್ರಾನ್ ಮಲಿಕ್; ಮರ್ಕರಮ್, ಪೂರನ್ ಜೊತೆಯಾಟ ವ್ಯರ್ಥ

ವಾರ್ನರ್, ಪೊವೆಲ್ ಅಬ್ಬರ: ಡೆಲ್ಲಿಗೆ ಜಯ

ಮುಂಬೈ (ಪಿಟಿಐ): ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ಮತ್ತು ಮಧ್ಯಮ ಕ್ರಮಾಂಕದ ರೋವ್ಮನ್ ಪೊವೆಲ್ ಅವರ ಸಿಡಿಲಬ್ಬರದ ಜೊತೆಯಾಟದಿಂದ ಡೆಲ್ಲಿ ಕ್ಯಾಪಿಟಲ್ಸ್ ಭರ್ಜರಿ ಜಯ ಗಳಿಸಿತು.

ಬ್ರೆಬಾರ್ನ್ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಸನ್‌ರೈಸರ್ಸ್ ಹೈದರಾಬಾದ್ ಎದುರಿನ ಪಂದ್ಯದಲ್ಲಿ ಡೆಲ್ಲಿ 21 ರನ್‌ಗಳಿಂದ ಗೆಲುವು ಸಾಧಿಸಿತು.

208 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಸನ್‌ರೈಸರ್ಸ್ 8ಕ್ಕೆ 186 ರನ್ ಗಳಿಸಿತು. ಏಡನ್ ಮರ್ಕರಮ್ ಮತ್ತು ನಿಕೋಲಸ್ ಪೂರನ್ ಮಾತ್ರ ಸ್ವಲ್ಪ ಪ್ರತಿರೋಧ ತೋರಿದರು. ನಾಯಕ ಕೇನ್ ವಿಲಿಯಮ್ಸನ್ ಸೇರಿದಂತೆ ಉಳಿದೆಲ್ಲ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು.

ಭರ್ಜರಿ ಜೊತೆಯಾಟ: ಟಾಸ್ ಗೆದ್ದ ಸನ್‌ರೈಸರ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲ ಓವರ್‌ನಲ್ಲೇ ಮೊದಲ ವಿಕೆಟ್ ಕಳೆದುಕೊಂಡಿದ್ದ ಡೆಲ್ಲಿ ಕ್ಯಾಪಿಟಲ್ಸ್ 85 ರನ್ ಗಳಿಸುವಷ್ಟರಲ್ಲಿ 3 ವಿಕೆಟ್ ಕಳೆದುಕೊಂಡಿತ್ತು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ವಾರ್ನರ್ (ಔಟಾಗದೆ 92; 58ಎ, 4X12, 6X3) ಮತ್ತು ಪೊವೆಲ್ (ಔಟಾಗದೆ 67; 35ಎ, 4X3, 6X6) 121 ರನ್‌ಗಳನ್ನು ಸೇರಿಸಿದ್ದರಿಂದ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 207 ರನ್ ಗಳಿಸಿತು.



ಡೇವಿಡ್ ವಾರ್ನರ್ ಬ್ಯಾಟಿಂಗ್ ಸೊಬಗು –ಪಿಟಿಐ ಚಿತ್ರ

ಭುವನೇಶ್ವರ್ ಕುಮಾರ್ ಮೊದಲ ಓವರ್‌ನಲ್ಲಿಯೇ ಮನದೀಪ್ ಸಿಂಗ್ ಗೆ ಡಗ್‌ಔಟ್ ದಾರಿ ತೋರಿಸಿದರು. ಆಗ ತಂಡ ಖಾತೆ ತೆರೆದಿರಲಿಲ್ಲ. ಐದನೇ ಓವರ್‌ನಲ್ಲಿ ಮಿಂಚಿದ ಕೈಲ್ ಅಬಾಟ್, ಮಿಚೆಲ್ ಮಾರ್ಷ್ ಅವರನ್ನು ಔಟ್ ಮಾಡಿದರು. ಕನ್ನಡಿಗ ಶ್ರೇಯಸ್ ಗೋಪಾಲ್ ಸ್ಪಿನ್ ಎಸೆತವನ್ನು ತಪ್ಪಾಗಿ ಅಂದಾಜಿಸಿದ ರಿಷಭ್ ಪಂತ್ (26; 16ಎ) ಕ್ಲೀನ್‌ಬೌಲ್ಡ್ ಆದರು.

ವಾರ್ನರ್ ಮತ್ತು ಪೊವೆಲ್ ಕೊನೆಯ 11 ಓವರ್‌ಗಳಲ್ಲಿ 121 ರನ್ ಸೇರಿಸಿದರು. ಪೊವೆಲ್ ಎರಡು ಜೀವದಾನ ಪಡೆದರು. ಭರವಸೆಯ ಬೌಲರ್ ಉಮ್ರಾನ್ ಮಲಿಕ್ ದುಬಾರಿ ಆದರು. ಅವರು ಹಾಕಿದ ಕೊನೆಯ ಓವರ್‌ನಲ್ಲಿ ಒಟ್ಟು ಮೂರು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದ ಪೊವೆಲ್ ಮಿಂಚಿದರು.

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 3ಕ್ಕೆ 207 (20 ಓವರ್)
ಮನದೀಪ್ ಸಿ ಪೂರನ್ ಬಿ ಭುವನೇಶ್ವರ್ 0 (5 ಎ), ವಾರ್ನರ್ ಔಟಾಗದೆ 92 (58 ಎ, 4x12, 6x3), ಮಾರ್ಷ್ ಸಿ ಮತ್ತು ಬಿ ಅಬೊಟ್ 10 (7 ಎ, 4x2), ರಿಷಭ್ ಬಿ ಶ್ರೇಯಸ್ 26 (16 ಎ, 4x1, 6x3), ರೋವ್ಮನ್ ಪೊವೆಲ್ 67 (35 ಎ, 4x3, 6x6)
ಇತರೆ (ಬೈ 1, ನೋಬಾಲ್ 1, ವೈಡ್ 10) 12
ವಿಕೆಟ್ ಪತನ: 1-0 (ಮನದೀಪ್ ಸಿಂಗ್, 0.5), 2-37 (ಮಿಚೆಲ್ ಮಾರ್ಷ್, 4.2), 3-85 (ರಿಷಭ್ ಪಂತ್, 8.6)
ಬೌಲಿಂಗ್: ಭುವನೇಶ್ವರ್ ಕುಮಾರ್ 4-1-25-1, ಸೀನ್ ಅಬೊಟ್ 4-0-47-1, ಉಮ್ರಾನ್ ಮಲಿಕ್ 4-0-52-0, ಕಾರ್ತಿಕ್ ತ್ಯಾಗಿ 4-0-37-0, ಶ್ರೇಯಸ್ ಗೋಪಾಲ್ 3-0-34-1, ಏಡನ್ ಮರ್ಕರಮ್ 1-0-11-0

ಸನ್‌ರೈಸರ್ಸ್ ಹೈದರಾಬಾದ್ 8ಕ್ಕೆ 186 (20 ಓವರ್)
ಅಭಿಷೇಕ್ ಸಿ ಕುಲದೀಪ್ ಬಿ ಅಹಮ್ಮದ್ 7 (6 ಎ, 4x1), ಕೇನ್ ಸಿ ಪಂತ್ ಬಿ ನಾರ್ಕಿಯ 4 (11 ಎ, 4x1), ರಾಹುಲ್ ಸಿ ಥಾಕೂರ್ ಬಿ ಮಾರ್ಷ್ 22 (18 ಎ, 4x2, 6x1), ಏಡನ್ ಸಿ ಕುಲದೀಪ್ ಬಿ ಅಹಮ್ಮದ್ 42 (25 ಎ, 4x4, 6x3), ನಿಕೋಲಸ್ ಸಿ ಪೊವೆಲ್ ಬಿ ಠಾಕೂರ್ 62 (34 ಎ, 4x2, 6x6), ಶಶಾಂಕ್ ಸಿ ನಾರ್ಕಿಯ ಬಿ ಠಾಕೂರ್ 10 (6 ಎ, 4x2), ಅಬೊಟ್ ಸಿ ಪಟೇಲ್ ಬಿ ಅಹಮ್ಮದ್ 8 (5 ಎ, 6x1), ಶ್ರೇಯಸ್ ಔಟಾಗದೆ 9 (7 ಎ, 4x2), ಕಾರ್ತಿಕ್ ಬಿ ಕುಲದೀಪ್ 7 (5 ಎ, 4x1), ಭುವನೇಶ್ವರ್ ಔಟಾಗದೆ 5 (3 ಎ, 4x1)
ಇತರೆ (ಲೆಗ್ ಬೈ 1, ವೈಡ್ 10) 11
ವಿಕೆಟ್ ಪತನ: 1-8 (ಅಭಿಷೇಕ್ ಶರ್ಮಾ, 1.3), 2-24 (ಕೇನ್ ವಿಲಿಯಮ್ಸನ್, 4.2), 3-37 (ರಾಹುಲ್ ತ್ರಿಪಾಠಿ, 6.6), 4-97 (ಏಡನ್ ಮರ್ಕರಮ್, 12.5), 5-134 (ಶಶಾಂಕ್ ಸಿಂಗ್, 14.5), 6-153 (ಸೀನ್ ಅಬೊಟ್, 16.4), 7-165 (ನಿಕೋಲಸ್ ಪೂರನ್, 17.5), 8-181 (ಕಾರ್ತಿಕ್ ತ್ಯಾಗಿ, 19.1)
ಬೌಲಿಂಗ್: ಶಾರ್ದೂಲ್ ಠಾಕೂರ್ 4-0-44-2, ಖಲೀಲ್ ಅಹಮ್ಮದ್ 4-0-30-3, ಎನ್ರಿಚ್ ನಾರ್ಕಿಯ 4-0-35-1, ಮಿಚೆಲ್ ಮಾರ್ಷ್ 4-0-36-1, ಕುಲದೀಪ್ ಯಾದವ್ 4-0-40-1

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 21 ರನ್‌ಗಳ ಜಯ

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	19
ಕುಲದೀಪ್	ಡೆಲ್ಲಿ	18
ರಬಾಡ	ಪಂಜಾಬ್	17

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	588
ರಾಹುಲ್	ಲಖನೌ	451
ಶಿಖರ್	ಹೈದರಾಬಾದ್	369

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	10	8	2	0	0	16	0.158
ಲಖನೌ	10	7	3	0	0	14	0.397
ರಾಜಸ್ಥಾನ	10	6	4	0	0	12	0.340
ಬೆಂಗಳೂರು	11	6	5	0	0	12	-0.444
ಡೆಲ್ಲಿ	10	5	5	0	0	10	0.641
ಹೈದರಾಬಾದ್	10	5	5	0	0	10	0.325
ಪಂಜಾಬ್	10	5	5	0	0	10	-0.229
ಕೋಲ್ಕತ್ತ	10	4	6	0	0	8	0.060
ಚೆನ್ನೈ	10	3	7	0	0	6	-0.431
ಮುಂಬೈ	9	1	8	0	0	2	-0.836

*ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪ್ರಸಾರ ಹಕ್ಕು: ಸ್ಕೈ ಸ್ಪೋರ್ಟ್ಸ್, ಸೂಪರ್‌ಸ್ಪೋರ್ಟ್ ಕಣಕ್ಕೆ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮಾಧ್ಯಮ ಪ್ರಸಾರ ಹಕ್ಕುಗಳಿಂದ ಮುಂದಿನ ಐದು ವರ್ಷಗಳಲ್ಲಿ ₹50 ಸಾವಿರ ಕೋಟಿ ಗಳಿಸುವ ನಿರೀಕ್ಷೆಯಲ್ಲಿ ಬಿಸಿಸಿಐ ಇದೆ.

ಪ್ರಸಾರ ಹಕ್ಕು ಖರೀದಿಗೆ ಇಂಗ್ಲೆಂಡ್‌ನ ಸ್ಕೈ ಸ್ಪೋರ್ಟ್ಸ್ ಮತ್ತು ದಕ್ಷಿಣ ಆಫ್ರಿಕಾದ ಸೂಪರ್‌ಸ್ಪೋರ್ಟ್ ವಾಹಿನಿಗಳು ಬಿಡ್ ಸಲ್ಲಿಸಲು ಮುಂದಾಗಿವೆ ಟೆಂಡರ್ ಆಹ್ವಾನದ ದಾಖಲೆಗಳನ್ನು ಈ ಸಂಸ್ಥೆಗಳು ಪಡೆದುಕೊಂಡಿವೆ. ಈಗಾಗಲೇ ವಯಾಕಾಮ್ -18, ಜೀ ಎಂಟರ್‌ಟೈನ್‌ಮೆಂಟ್, ಸೋನಿ, ಡ್ರೀಮ್ ಇಲೆವನ್, ಸ್ಟಾರ್ ಸಂಸ್ಥೆಗಳು ಬಿಡ್ ಸಲ್ಲಿಸಿದ್ದು ಸ್ಕೈ ಮತ್ತು ಸೂಪರ್ ಸ್ಪೋರ್ಟ್ಸ್ ಕಣಕ್ಕಿಳಿಯುವುದರಿಂದ ಪೈಪೋಟಿ ತಾರಕಕ್ಕೇರುವ ನಿರೀಕ್ಷೆ ಇದೆ.

ಎಂಜಿನಿಯರಿಂಗ್ ವಿದ್ಯಾರ್ಥಿಗಳ ಕ್ರಿಕೆಟ್ ಟೂರ್ನಿ 20ರಿಂದ

ಬೆಂಗಳೂರು: ಆರ್.ವಿ.ಎಂಜನಿಯರಿಂಗ್ ಕಾಲೇಜು ಹಮ್ಮಿಕೊಂಡಿರುವ ಚಾಮರಾಜು ಸ್ಮಾರಕ ಅಂತರ ರಾಜ್ಯ ಎಂಜಿನಿಯರಿಂಗ್ ಕಾಲೇಜುಗಳ ಕ್ರಿಕೆಟ್ ಟೂರ್ನಿ ಇದೇ 20ರಿಂದ ನಡೆಯಲಿದೆ. ಆಸಕ್ತ ತಂಡಗಳು 18ರ ಒಳಗೆ ಪ್ರವೇಶಪತ್ರಗಳನ್ನು ಕಳುಹಿಸಬೇಕು ಎಂದು ತಿಳಿಸಲಾಗಿದೆ.

ಮಾಹಿತಿಗೆ ಕಾಲೇಜಿನ ಕ್ರೀಡಾ ವಿಭಾಗದ ನಿರ್ದೇಶಕ ವಿಶ್ವನಾಥ್ ಸಿ.ಎನ್ (08068188206) ಅವರನ್ನು ಸಂಪರ್ಕಿಸಲು ತಿಳಿಸಲಾಗಿದೆ. ಇ ಮೇಲ್ ಐಡಿ: sports@rvce.edu.in

ಲಿವರ್‌ಪೂಲ್‌ಗೆ 'ರಿಯಲ್' ಸವಾಲು



ಗೋಲು ಗಳಿಸಿದ ರಾಡ್ರಿಗೊ ಸಂಭ್ರಮ –ಎಎಫ್‌ಪಿ ಚಿತ್ರ

ಪ್ಯಾರಿಸ್ (ಎಎಫ್‌ಪಿ): ಸೆಮಿಫೈನಲ್‌ನ ಎರಡು ಲೆಗ್‌ಗಳಲ್ಲಿ ಸುಲಭ ಜಯ ಸಾಧಿಸಿರುವ ಲಿವರ್‌ಪೂಲ್ ತಂಡಕ್ಕೆ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ನೈಜ ಸವಾಲು ಎದುರಾಗಿದೆ. ಇದೇ ತಿಂಗಳ 28ರಂದು ನಡೆಯಲಿರುವ ಪಂದ್ಯದಲ್ಲಿ ರಿಯಲ್ ಮ್ಯಾಡ್ರಿಡ್ ಎದುರು ಲಿವರ್ ಪೂಲ್ ಸೆಣಸಲಿದೆ.

ವಿಲ್ಲಾರಿಯಲ್ ಎದುರಿನ ಎರಡು ಲೆಗ್‌ಗಳ ಸೆಮಿಫೈನಲ್ ಪಂದ್ಯಗಳಲ್ಲಿ ಲಿವರ್‌ಪೂಲ್ 2-0 ಮತ್ತು 3-2ರಲ್ಲಿ ಜಯ ಗಳಿಸಿತ್ತು. ಮ್ಯಾಂಚೆಸ್ಟರ್ ಸಿಟಿ ಎದುರಿನ ಎರಡನೇ ಸೆಮಿಫೈನಲ್‌ನ ಮೊದಲ ಲೆಗ್ ಪಂದ್ಯದಲ್ಲಿ 3-4ರಿಂದ ಸೋತಿದ್ದ ರಿಯಲ್ ಮ್ಯಾಡ್ರಿಡ್ ಬುಧವಾರ ರಾತ್ರಿ ನಡೆದ ಎರಡನೇ ಲೆಗ್ ಮುಖಾಮುಖಿಯಲ್ಲಿ 3-1ರಲ್ಲಿ ಗೆದ್ದು ಒಟ್ಟಾರೆ 6-5 ಗೋಲುಗಳ ಬಲದಿಂದ ಫೈನಲ್ ಪ್ರವೇಶಿಸಿತು.

ಎರಡನೇ ಸೆಮಿಫೈನಲ್‌ನ ಎರಡನೇ ಲೆಗ್ ಪಂದ್ಯದ ಮೊದಲಾರ್ಧದಲ್ಲಿ ರಿಯಲ್ ಮ್ಯಾಡ್ರಿಡ್ 1-0 ಹಿನ್ನಡೆಯಲ್ಲಿತ್ತು. ದ್ವಿತೀಯಾರ್ಧದಲ್ಲಿ ಅಮೋಘ ಆಕ್ರಮಣಕಾರಿ ಆಟವಾಡಿದ ತಂಡ ಹೆಚ್ಚುವರಿ ಅವಧಿಯಲ್ಲಿ ಗೋಲುಗಳನ್ನು ಗಳಿಸಿ ಜಯದ ನಗೆ ಸೂಸಿತು.

ಮೊದಲ ಲೆಗ್‌ನಲ್ಲಿ ಒಂದು ಗೋಲು ಅಂತರದ ಜಯ ಗಳಿಸಿದ್ದ ಮ್ಯಾಂಚೆಸ್ಟರ್ ಸಿಟಿ 73ನೇ ನಿಮಿಷದಲ್ಲಿ ರಿಯಾಜ್ ಮಹರೆಜ್ ಗಳಿಸಿದ ಗೋಲಿನೊಂದಿಗೆ ಫೈನಲ್ ಪ್ರವೇಶದ ಹಾದಿಯಲ್ಲಿತ್ತು. ಆದರೆ 90 ಮತ್ತು 91ನೇ ನಿಮಿಷದಲ್ಲಿ ರಾಡ್ರಿಗೊ ಚೆಂಡನ್ನು ಗುರಿ ಮುಟ್ಟಿಸಿ ಪಂದ್ಯದ ಗತಿಯನ್ನು ಬದಲಿಸಿದರು. ನಿಗದಿತ ಅವಧಿ ಮುಕ್ತಾಯಗೊಂಡಾಗ ಎರಡೂ ತಂಡಗಳು ಒಟ್ಟಾರೆ ಗೋಲು ಗಳಿಕೆಯಲ್ಲಿ ಸಮಬಲ ಸಾಧಿಸಿದ್ದರಿಂದ ಹೆಚ್ಚುವರಿ ಅವಧಿಗೆ ಮೊರೆಹೋಗಲಾಯಿತು.

30 ನಿಮಿಷಗಳ ಆಟದ ಐದನೇ ನಿಮಿಷದಲ್ಲಿ ಪೆನಾಲ್ಟಿ ಅವಕಾಶವನ್ನು ಬಿಟ್ಟುಕೊಟ್ಟು ಮ್ಯಾಂಚೆಸ್ಟರ್ ಸಿಟಿ ಕೈ ಸುಟ್ಟುಕೊಂಡಿತು. ಅವಕಾಶವನ್ನು ಸದುಪಯೋಗ ಮಾಡಿಕೊಂಡ ಕರೀಂ ಬೆನ್ಜೆಮಾ ಚೆಂಡನ್ನು ಗುರಿ ಮುಟ್ಟಿಸಿ ಜಯವನ್ನೂ ಗೋಲು ಗಳಿಕೆಯಲ್ಲಿ ಮುನ್ನಡೆಯನ್ನೂ ಗಳಿಸಿಕೊಟ್ಟರು.



ಧನುಷ್ ಶ್ರೀಕಾಂತ್ ಮತ್ತು ಶೌರ್ಯ

ಡೆಫಿಲಿಂಪಿಕ್ಸ್: ಧನುಷ್‌ಗೆ ಚಿನ್ನ, ಶೌರ್ಯಗೆ ಕಂಚು

ನವದೆಹಲಿ (ಪಿಟಿಐ): ಭಾರತದ ಧನುಷ್ ಶ್ರೀಕಾಂತ್ ಬ್ರೆಜಿಲ್‌ನ ಕ್ಯಾಕ್ಸಿಯಾಸ್ ಡು ಸಲ್‌ನಲ್ಲಿ ನಡೆದ ಡೆಫಿಲಿಂಪಿಕ್ಸ್‌ನಲ್ಲಿ 10 ಏರ್ ರೈಫಲ್ ಶೂಟಿಂಗ್‌ನಲ್ಲಿ ಚಿನ್ನದ ಪದಕ ಗೆದ್ದರು. ಇದೇ ವಿಭಾಗದಲ್ಲಿ ಶೌರ್ಯ ಸೈನಿ ಕಂಚಿನ ಪದಕ ಜಯಿಸಿದರು.

ಬುಧವಾರ ನಡೆದ ಫೈನಲ್‌ನಲ್ಲಿ ಎಂಟು ಶೂಟರ್‌ಗಳು ಸ್ಪರ್ಧಿಸಿದರು. ಧನುಷ್ 247.5 ಶಾಟ್‌ಗಳನ್ನು ದಾಖಲಿಸಿದರು. ವಿಶ್ವ ದಾಖಲೆಯ ಸ್ಕೋರ್ ಇದಾಗಿದೆ.

ದಕ್ಷಿಣ ಕೊರಿಯಾದ ಕಿಮ್ ವೂ ರಿಮ್ 246.6 ಅಂಕಗಳನ್ನು ಗಳಿಸಿ, ಬೆಳ್ಳಿ ಪದಕ ಪಡೆದರು. ಶೌರ್ಯ 224.3 ಅಂಕಗಳನ್ನು ಗಳಿಸಿದರು.

ಅರ್ಹತಾ ಸುತ್ತಿನಲ್ಲಿ ಧನುಷ್ ಮತ್ತು ಶೌರ್ಯ ಅವರಿಬ್ಬರೂ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದ್ದರು. ತೆಲಂಗಾಣದ ಧನುಷ್ ಅವರು ಒಲಿಂಪಿಯನ್ ಗಗನ್ ನಾರಂಗ್ ಅವರ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ತಮ್ಮ ವಾಕ್ ಶ್ರವಣ ದೋಷವನ್ನು ಮೀರಿ ಅವರು ಕ್ರೀಡೆಯಲ್ಲಿ ಸಾಧನೆ ಮಾಡುತ್ತಿದ್ದಾರೆ. ಇದು ಅವರು ಜಯಿಸಿರುವ ಅತಿ ದೊಡ್ಡ ಮಟ್ಟದ ಪ್ರಶಸ್ತಿಯಾಗಿದೆ. ಧನುಷ್ ಮತ್ತು ಶೌರ್ಯ ಅವರಿಗೆ ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆ (ಎನ್‌ಆರ್‌ಎಐ) ನೆರವು ನೀಡಿದೆ. ಅನುಜಾ ಜಂಗ್ ಮತ್ತು ಪ್ರೀತಿ ಶರ್ಮಾ ಅವರು ಈ ತಂಡದ ಕೋಚ್ ಆಗಿದ್ದಾರೆ.

ಬ್ಯಾಡ್ಮಿಂಟನ್ ತಂಡಕ್ಕೆ ಚಿನ್ನ

ಡೆಫಿಲಿಂಪಿಕ್ಸ್‌ನಲ್ಲಿ ಭಾರತ ಬ್ಯಾಡ್ಮಿಂಟನ್ ತಂಡವು ಚಿನ್ನ ಗೆದ್ದುಕೊಂಡಿತು. ಫೈನಲ್‌ನಲ್ಲಿ ಭಾರತವು 3-1ರಿಂದ ಜಪಾನ್ ವಿರುದ್ಧ ಜಯಿಸಿತು. ಇದರೊಂದಿಗೆ ಭಾರತಕ್ಕೆ ಎರಡು ಚಿನ್ನದ ಪದಕಗಳು ಒಲಿದವು.

2017ರ ಕೂಟದಲ್ಲಿ ಭಾರತವು ಒಂದು ಚಿನ್ನ, ಒಂದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು ಜಯಿಸಿತ್ತು.

ಉಕ್ರೇನ್‌ಗೆ ಅಗ್ರಸ್ಥಾನ: ಯುದ್ಧ ಪೀಡಿತ ಉಕ್ರೇನ್ ದೇಶದ ಕ್ರೀಡಾಪಟುಗಳು ಈ ಕೂಟದಲ್ಲಿ ಅಮೋಘ ಸಾಧನೆ ಮಾಡಿದ್ದಾರೆ. 19 ಚಿನ್ನದ ಪದಕ, ಆರು ಬೆಳ್ಳಿ ಪದಕ ಮತ್ತು 13 ಕಂಚಿನ ಪದಕಗಳನ್ನು ಜಯಿಸಿ ಪದಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದಾರೆ.

ವಾಲಿಬಾಲ್: ಕೇರಳ ಪೊಲೀಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಸುಳ್ಯ: ಗಾಂಧಿನಗರದ ಸರ್ಕಾರಿ ಶಾಲೆಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಾಷ್ಟ್ರಮಟ್ಟದ ವಾಲಿಬಾಲ್ ಟೂರ್ನಿಯ, ಮಹಿಳೆಯರ ವಿಭಾಗದ ಮೊದಲ ಪಂದ್ಯದಲ್ಲಿ ಕೇರಳ ಪೊಲೀಸ್ ತಂಡವು ಐಸಿಎಫ್ ಚೆನ್ನೈ ತಂಡದ ವಿರುದ್ಧ 3-0 ನೇರ ಸೆಟ್‌ಗಳಿಂದ ಜಯಿಸಿತು.

ಎರಡೂ ತಂಡಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ ಆಟಗಾರ್ತಿಯರಿದ್ದರು. ಅಂತರರಾಷ್ಟ್ರೀಯ ಆಟಗಾರ್ತಿ ಆದಿರಾ ಎಂ.ಆರ್. ಸಾರಥ್ಯದಲ್ಲಿ ಕೇರಳ ತಂಡ, ಆಂಜೆಲ್ ನೇತೃತ್ವದಲ್ಲಿ ಚೆನ್ನೈ ತಂಡ ಕಣಕ್ಕಿಳಿದಿತ್ತು. ಕೇರಳ ತಂಡದ ಸೇತುಲಕ್ಷ್ಮಿ, ಅಂಜು ಮೋಳ್, ಅನಘಾ ಉತ್ತಮ ಸ್ಮ್ಯಾಷ್‌ಗಳ ಮೂಲಕ ತಂಡಕ್ಕೆ ಮುನ್ನಡೆ ಒದಗಿಸಿಕೊಟ್ಟರು.

ಚೆನ್ನೈ ತಂಡದ ಸೋಯಾ ಉತ್ತಮವಾಗಿ ಆಡಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು. ಚೆನ್ನೈ ತಂಡದಲ್ಲೂ ಬಹುತೇಕ ಕೇರಳ ಮೂಲದ ಆಟಗಾರ್ತಿಯರೇ ಇದ್ದರು. ಪ್ರೇಕ್ಷಕರ ಭಾರಿ ಬೆಂಬಲ ಕೇರಳ ತಂಡದ ಸಾಧನೆಗೆ ಬಲ ತುಂಬಿತು.

ದೆಹಲಿ ರೇಸ್

ಬಂಬ್ಲಿಬೀ ಗೆಲ್ಲುವ ನಿರೀಕ್ಷೆ

ಫೆಸ್ಟಿವ್ ಲೈಟ್ ಪ್ಲೇಟ್ ಶುಕ್ರವಾರದ ದೆಹಲಿ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಬಂಬ್ಲಿಬೀ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 3.30ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬ್ಲಿಟ್ಜ್ 4, ನೋಬೆಲ್ 3, ಜನರಲ್ ಸಿಂಗ್ 3
2ನೇ ರೇಸ್: ವೇದಗರ್ಭ 1, ಕಾಕ 5, ವಿಕ್ಟೋರಿಯಸ್ ಕಿಂಗ್ 2
3ನೇ ರೇಸ್: ಬೊನಿಟಾ 7, ಅಶ್ವ ಕ್ರಿಸ್ಟಲ್ 3, ಬೀ ಚಾಂಪಿಯನ್ 8
4ನೇ ರೇಸ್: ಬಂಬ್ಲಿಬೀ 6 ಫ್ಯೂಯಲ್ 8, ರೆಕ್ವಿಯಾನ್ 5
5ನೇ ರೇಸ್: ಹುಕಾಮೊರಿ 5, ಮಾಸ್ಟರ್ ಜೆಂಟ್ಸೈಟಾ 2, ಗೋಲ್ಡನ್ ಗಿನಿವಾ 6
6ನೇ ರೇಸ್: ಸೆನಾರ್ ಮಿಸ್‌ಝಾಚೆರಿ 7, ಸನ್‌ಲೈಟ್ 9, ಸೆನಾರ್ 5

ಉತ್ತಮ ಬೆಟ್: ಹುಕಾಮೊರಿ

ಜಾಕ್‌ಪಾಟ್	ಟ್ರಿಬಲ್
2,3,4,5,6	4,5,6

ರಾಜ್ಯ ಅಥ್ಲೆಟಿಕ್ಸ್ ಉಡುಪಿಯಲ್ಲಿ

ಬೆಂಗಳೂರು: ರಾಜ್ಯ ಸೀನಿಯರ್ ಮತ್ತು ಜೂನಿಯರ್ ಅಥ್ಲೆಟಿಕ್ ಕೂಟವನ್ನು ಬೆಂಗಳೂರಿನಿಂದ ಉಡುಪಿಗೆ ವರ್ಗಾಯಿಸಲಾಗಿದೆ. ಇದೇ 7 ಮತ್ತು 8ರಂದು ಅಜ್ಜರಕಾಡು ಕ್ರೀಡಾಂಗಣದಲ್ಲಿ ಕೂಟ ನಡೆಯಲಿದೆ. ಪುರುಷ ಮತ್ತು ಮಹಿಳಾ ವಿಭಾಗ, 20 ವರ್ಷದೊಳಗಿನ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಕರ್ನಾಟಕ ರಾಜ್ಯ ಅಥ್ಲೆಟಿಕ್ ಸಂಸ್ಥೆ (ಕೆಎಎ) ಆಯೋಜಿಸಿರುವ ಕೂಟದಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಆಯ್ಕೆ ಕೂಡ ನಡೆಯಲಿದೆ.

ಲೈಂಗಿಕ ದೌರ್ಜನ್ಯ ಆರೋಪ: ಕಬಡ್ಡಿ ಅಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದಲ್ಲಿ ಮಹಿಳಾ ತಾಂತ್ರಿಕ ಅಧಿಕಾರಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ರಾಜಸ್ಥಾನದ ಕಬಡ್ಡಿ ಅಧಿಕಾರಿ ಕೃಪಾಶಂಕರ್ ಶರ್ಮಾ ಅವರನ್ನು ಅಮಾನತು ಮಾಡಲಾಗಿದೆ.

ಏಪ್ರಿಲ್ 24ರಿಂದ ಮೇ 3ರ ವರೆಗೆ ಬೆಂಗಳೂರಿನಲ್ಲಿ ನಡೆದ ಕ್ರೀಡಾಕೂಟದ ಸಂದರ್ಭದಲ್ಲಿ ತಮ್ಮ ಮೇಲೆ ಕೃಪಾಶಂಕರ್ ದೌರ್ಜನ್ಯ ಎಸಗಿದ್ದಾರೆ ಎಂದು ಆಂಧ್ರಪ್ರದೇಶದ ತಾಂತ್ರಿಕ ಅಧಿಕಾರಿ ದೂರಿದ್ದಾರೆ.

'ಕನಕಪುರ ತಾಲ್ಲೂಕಿನಲ್ಲಿರುವ ಜೈನ್ ವಿವಿ ಆವರಣದಲ್ಲಿ ನಡೆದ ಕಬಡ್ಡಿ ಸ್ಪರ್ಧೆಗಳಲ್ಲಿ ಅಧಿಕಾರಿಯಾಗಿದ್ದ ನಾನು ಉಳಿದುಕೊಂಡಿದ್ದ ಕೊಠಡಿಗೆ ರಾತ್ರಿವೇಳೆ ಬಂದ ಕೃಪಾಶಂಕರ್ ಅಸಭ್ಯವಾಗಿ ವರ್ತಿಸಿದ್ದಾರೆ' ಎಂದು ಮಹಿಳಾ ಅಧಿಕಾರಿ ಕನಕಪುರದ ಹಾರೋಹಳ್ಳಿ ಠಾಣೆಗೆ ದೂರು ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೃಪಾಶಂಕರ್ ಅವರನ್ನು ಅಮಾನತು ಮಾಡಲಾಗಿದೆ ಎಂದು ರಾಜಸ್ಥಾನ ಕಬಡ್ಡಿ ಸಂಸ್ಥೆ ತಿಳಿಸಿದೆ.

'ರಾತ್ರಿ ವೇಳೆ ಕೊಠಡಿಗೆ ಬಂದ ಕೃಪಾಶಂಕರ್ ಒಳಉಡುಪಿನ ಬಣ್ಣದ ಬಗ್ಗೆ ಮಾತನಾಡಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕುಶಾಲ್ ದಾಸ್ ವಿರುದ್ಧ ದೂರು

ನವದೆಹಲಿ (ಪಿಟಿಐ): ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ಕಾರ್ಯದರ್ಶಿ ಕುಶಾಲ್ ದಾಸ್ ವಿರುದ್ಧ ಉದ್ಯಮಿ ರಂಜಿತ್ ಬಜಾಜ್ ಅವರು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ.

ಫಿಫಾ ಮತ್ತು ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್‌ಗೂ ಈ ಕುರಿತು ಪತ್ರ ಬರೆದಿರುವ ರಂಜಿತ್ ತನಿಖೆಗೆ ಸ್ವತಂತ್ರ ಸಮಿತಿಯೊಂದನ್ನು ರಚಿಸಬೇಕು ಎಂದು ಕೋರಿದ್ದಾರೆ.

ಉಕ್ರೇನ್: ಅಣ್ವಸ್ತ್ರ ದಾಳಿ ಭೀತಿ ಹೆಚ್ಚಿಸಿದ ರಷ್ಯಾದ ನಡೆ

ಅಣ್ವಸ್ತ್ರ ಕ್ಷಿಪಣಿ ದಾಳಿ ಅಣಕು ಅಭ್ಯಾಸ

ಮಾಸ್ಕೊ (ಎಎಫ್‌ಪಿ/ರಾಯಿಟರ್ಸ್): ಉಕ್ರೇನ್ ಮೇಲಿನ ಸೇನಾ ಕಾರ್ಯಾಚರಣೆಯ ನಡುವೆಯೇ ಕಲಿನಿಂಗ್ರಾಡ್‌ನ ಪಶ್ಚಿಮ ಎನ್‌ಕ್ಲೇವ್‌ನಲ್ಲಿ ರಷ್ಯಾ ಸೇನೆ ಅಣ್ವಸ್ತ್ರ ಕ್ಷಿಪಣಿಗಳ ದಾಳಿಯ ಅಣಕು ಅಭ್ಯಾಸ ನಡೆಸಿದೆ.

ಪೋಲೆಂಡ್ ಮತ್ತು ಲಿಥುವೇನಿಯಾ ನಡುವೆ ಇರುವ ಬಾಲ್ಟಿಕ್ ಸಮುದ್ರದ ಎನ್‌ಕ್ಲೇವ್‌ನಲ್ಲಿ ಬುಧವಾರ ಯುದ್ಧ ತಂತ್ರದ ಭಾಗವಾಗಿ ಅಣ್ವಸ್ತ್ರ ಸಾಮರ್ಥ್ಯದ ಇಸ್ಕಾಂಡರ್ ಬ್ಯಾಲಿಸ್ಟಿಕ್ ಕ್ಷಿಪಣಿ ವ್ಯವಸ್ಥೆಗಳ ಎಲೆಕ್ಟ್ರಾನಿಕ್ ಉಡಾವಣೆಯ ಅಣಕು ಅಭ್ಯಾಸ ನಡೆಸಲಾಯಿತು ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಶತ್ರುಗಳ ಅಣಕು ಕ್ಷಿಪಣಿ ವ್ಯವಸ್ಥೆಗಳು, ವಾಯುನೆಲೆಗಳು, ಸಂರಕ್ಷಿತ ಮೂಲಸೌಕರ್ಯಗಳು, ಸೇನಾ ಉಪಕರಣಗಳು ಮತ್ತು ಕಮಾಂಡ್ ಪೋಸ್ಟ್‌ಗಳ ಲಾಂಚರ್ ಗುರಿಯಾಗಿಸಿ ಏಕ ಮತ್ತು ಬಹು ದಾಳಿಗಳ ಅಭ್ಯಾಸ ನಡೆಸಲಾಯಿತು ಎಂದು ಹೇಳಿಕೆ ತಿಳಿಸಿದೆ.

'ಸಂಭವನೀಯ ಪ್ರತೀಕಾರದ ದಾಳಿ'ಯಿಂದ ತಪ್ಪಿಸಿಕೊಳ್ಳುವ ತಂತ್ರದ ಅಭ್ಯಾಸವನ್ನೂ ಸೇನಾ ಸಿಬ್ಬಂದಿ ನಡೆಸಿದರು. ಯುದ್ಧ ಪಡೆಗಳು, ವಿಕಿರಣ ಮತ್ತು ರಾಸಾಯನಿಕ ದಾಳಿ ಪರಿಸ್ಥಿತಿ ನಿಭಾಯಿಸುವ ಅಭ್ಯಾಸ ಕೂಡ ನಡೆಯಿತು. ಇದರಲ್ಲಿ 100 ಯೋಧರು ಪಾಲ್ಗೊಂಡಿದ್ದರು ಎಂದು ಅದು ಹೇಳಿದೆ.

ಉಕ್ರೇನ್ ನೆಲದಲ್ಲಿ ಸೇನಾ ಕಾರ್ಯಾಚರಣೆ 70 ದಿನಗಳನ್ನು ಪೂರೈಸಿದ ಸಂದರ್ಭ ರಷ್ಯಾದಿಂದ ಈ ಮಾಹಿತಿ ಹೊರಬಿದ್ದಿದೆ.

ರಷ್ಯಾ ಅಧ್ಯಕ್ಷ ಪುಟಿನ್ ಫೆಬ್ರುವರಿ 24ರಂದು ಉಕ್ರೇನ್ ಮೇಲೆ ಸೇನಾ ಕಾರ್ಯಾಚರಣೆಗೆ ಆದೇಶ ನೀಡಿದ ಸ್ವಲ್ಪ ದಿನಗಳಲ್ಲೇ, ಅಣ್ವಸ್ತ್ರ ದಾಳಿ ಪಡೆಗೂ ಸನ್ನದ್ಧವಾಗಿರಲು ಸೂಚಿಸಿದ್ದರು. 'ಯಾವುದೇ ದೇಶದಿಂದ ರಷ್ಯಾದ ಅಸ್ತಿತ್ವಕ್ಕೆ ಧಕ್ಕೆ ಎದುರಾದರೆ ಅಣ್ವಸ್ತ್ರ ದಾಳಿಗೆ ಹಿಂಜರಿಯುವುದಿಲ್ಲ' ಎಂಬ ಸಂದೇಶವನ್ನೂ ಪಾಶ್ಚಾತ್ಯ ರಾಷ್ಟ್ರಗಳಿಗೆ ಅವರು ರವಾನಿಸಿದ್ದರು.

ಕ್ಷಿಪಣಿ ದಾಳಿ: ರಷ್ಯಾ ಪಡೆಗಳು ಗುರುವಾರ ಉಕ್ರೇನ್‌ನ ಪ್ರಮುಖ ನಗರಗಳ ಮೇಲೆ ಕ್ಷಿಪಣಿ ಮತ್ತು ಶೆಲ್ ದಾಳಿಯನ್ನು ನಡೆಸಿವೆ.

ಉಕ್ರೇನ್ ಸಂಘರ್ಷದಲ್ಲಿ ಪಶ್ಚಿಮದ ರಾಷ್ಟ್ರಗಳು ಅಥವಾ ನ್ಯಾಟೊ ನೇರ ಪ್ರವೇಶಿಸಿದರೆ 'ಮಿಂಚಿನ ವೇಗದ ಪ್ರತೀಕಾರ'ದ ಎಚ್ಚರಿಕೆಯನ್ನೂ ರಷ್ಯಾ ಅಧ್ಯಕ್ಷ ಪುಟಿನ್ ನೀಡಿದ್ದರು.

'ರಷ್ಯಾದ ವಿಜಯ ತಡೆಯಲಾಗದು'

'ಅಮೆರಿಕ, ಬ್ರಿಟನ್ ಮತ್ತು ನ್ಯಾಟೊ ದೇಶಗಳು ಉಕ್ರೇನ್‌ಗೆ ಗುಪ್ತಚರ ಮಾಹಿತಿ ನಿರಂತರ ನೀಡುತ್ತಿವೆ. ಜತೆಗೆ ಉಕ್ರೇನ್‌ಗೆ ಶಸ್ತ್ರಾಸ್ತ್ರಗಳ ನೆರವು ನೀಡಿ, ಸೇನಾ ಕಾರ್ಯಾಚರಣೆಯ ವೇಗ ತಗ್ಗಿಸಿರಬಹುದು. ಆದರೆ, ಇದರಿಂದ ರಷ್ಯಾದ ವಿಜಯ ತಡೆಯಲು ಸಾಧ್ಯವಿಲ್ಲ' ಎಂದು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ಗುರುವಾರ ಹೇಳಿದೆ.

ರಷ್ಯಾದ ಸೇನಾ ಜನರಲ್‌ಗಳ ಹತ್ಯೆ ಮಾಡಲು ಉಕ್ರೇನ್ ಸೇನೆಗೆ ಅಮೆರಿಕ ಗುಪ್ತಚರ ಮಾಹಿತಿ ಒದಗಿಸಿ, ಸಹಾಯ ಮಾಡಿರುವ ಮಾಹಿತಿ ಉಲ್ಲೇಖಿಸಿ 'ರಾಯಿಟರ್ಸ್' ವರದಿ ಮಾಡಿದೆ.

ಕದನ ವಿರಾಮ ಉಲ್ಲಂಘನೆ

'ಮರಿಯುಪೋಲ್‌ನ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದಲ್ಲಿ ಸಿಲುಕಿರುವ ನಾಗರಿಕರ ಸ್ಥಳಾಂತರಕ್ಕೆ ಮಾಡಿಕೊಂಡಿದ್ದ ಕದನ ವಿರಾಮವನ್ನು ರಷ್ಯಾ ಉಲ್ಲಂಘಿಸಿದೆ. ಸ್ಥಾವರದ ಮೇಲೆ ರಷ್ಯಾ ನಿರಂತರ ಬಾಂಬ್ ದಾಳಿ ನಡೆಸುತ್ತಿದೆ' ಎಂದು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಆರೋಪಿಸಿದ್ದಾರೆ. ಆದರೆ, ಇದನ್ನು ಕ್ರೆಮ್ಲಿನ್ ನಿರಾಕರಿಸಿದೆ.

ಮರಿಯುಪೋಲ್ ರಂಗಮಂದಿರದ ಮೇಲೆ ರಷ್ಯಾದ ಕ್ಷಿಪಣಿ ದಾಳಿಗೆ 300 ನಾಗರಿಕರು ಮೃತಪಟ್ಟಿದ್ದರು ಎಂದು ಆರಂಭದಲ್ಲಿ ಉಕ್ರೇನ್ ಹೇಳಿತ್ತು. ಆದರೆ, ಅಲ್ಲಿ ಸತ್ತವರ ಸಂಖ್ಯೆ 600 ಆಗಿದೆ.

ಮಾತುಕತೆ ಅಸಾಧ್ಯ: 'ಉಕ್ರೇನ್ ನಿಯೋಗದ ಸದಸ್ಯರು ಒಪ್ಪಂದಗಳಿಂದ ಹಿಂದೆ ಸರಿದಿದ್ದಾರೆ. ಉಕ್ರೇನ್ ಜತೆಗೆ ಶಾಂತಿ ಮಾತುಕತೆ ಅಸಾಧ್ಯ' ಎಂದು ರಷ್ಯಾ ಹೇಳಿದೆ.

ಮುಸ್ಲಿಂ ಯುವತಿಯೊಂದಿಗೆ ವಿವಾಹ ಯುವಕನ 'ಮರ್ಯಾದೆಗೇಡು' ಹತ್ಯೆ?

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಂಗಿಯು ಹಿಂದೂ ಧರ್ಮದ ವ್ಯಕ್ತಿಯ ವಿವಾಹವಾಗಿದ್ದನ್ನು ವಿರೋಧಿಸಿ ಆಕೆಯ ಅಣ್ಣನೇ, ತಂಗಿಯ ಗಂಡನನ್ನು 'ಮರ್ಯಾದೆಗೇಡು ಹತ್ಯೆ' ಮಾಡಿದ್ದಾನೆ ಎಂದು ಪೊಲೀಸರು ಶಂಕಿಸಿದ್ದಾರೆ.

ಸರೂರ್‌ನಗರದಲ್ಲಿ ಈ ಘಟನೆ ಬುಧವಾರ ರಾತ್ರಿ ನಡೆದಿದ್ದು, ಇದರ ವಿಡಿಯೊ ವೈರಲ್ ಆಗಿದೆ. ದಲಿತ ಸಮುದಾಯದ ಬಿ.ನಾಗರಾಜು (25), ತನ್ನ ಪತ್ನಿ ಸೈಯದ್ ಆಶ್ರೀನ್ ಸುಲ್ತಾನಾ (23) ಜತೆ ಸ್ಕೂಟರ್‌ನಲ್ಲಿ ಹೋಗುತ್ತಿರುವಾಗ, ಆಕೆಯ ಅಣ್ಣ ಸೈಯದ್ ಮುಬಿನ್ ಮತ್ತು ಆತನ ಸ್ನೇಹಿತರು ಅಡ್ಡಗಟ್ಟಿ ನಾಗರಾಜುಗೆ ಚಾಕುವಿನಿಂದ ಇರಿದು, ಕಬ್ಬಿಣದ ಸರಳಿನಿಂದ ಹಲ್ಲೆ ನಡೆಸಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದರು.

ವಿಕಾರಾಬಾದ್ ಜಿಲ್ಲೆಯ ಮಾರ್ಪಲ್ಲೆಯಲ್ಲಿ ನಾಗರಾಜು ಕಾರು ಸೇಲ್ಸ್‌ಮನ್ ಆಗಿದ್ದರು. ತನ್ನ ನೆರೆಯ ಗ್ರಾಮದ ಸುಲ್ತಾನಾ ಅವರನ್ನು ಪ್ರೀತಿಸುತ್ತಿದ್ದರು. ಇದೇ ವರ್ಷದ ಜನವರಿ 31ರಂದು ಆರ್ಯ ಸಮಾಜದ ದೇವಸ್ಥಾನದಲ್ಲಿ ವಿವಾಹವಾಗಿದ್ದರು. ಮುಸ್ಲಿಂ ಯುವತಿಯ ಕುಟುಂಬಕ್ಕೆ ಹೆದರಿ ನಾಗರಾಜು ಮತ್ತು ಆಶ್ರೀನ್ ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಸ್ವಲ್ಪ ದಿನಗಳು ಆಶ್ರಯ ಪಡೆದಿದ್ದರು. ಕೆಲ ದಿನಗಳ ಹಿಂದಷ್ಟೇ ಸರೂರ್‌ನಗರದ ಬೃಂದಾವನ ಕಾಲೋನಿಗೆ ಬಂದು, ಬಾಡಿಗೆ ಮನೆಯಲ್ಲಿ ನೆಲೆಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

'ನಮ್ಮ ಮದುವೆ ವಿರೋಧಿಸಿ ನನ್ನ ಪತಿಯ ಮೇಲೆ ಐವರು ಭೀಕರ ದಾಳಿ ನಡೆಸಿದರು' ಎಂದು ಸುಲ್ತಾನಾ ಅವರು ಟಿ.ವಿ ವಾಹಿನಿಗೆ ತಿಳಿಸಿದ್ದಾರೆ.

ಆಶ್ರೀನ್ ಅವರ ಅಣ್ಣ ಮತ್ತು ಆತನ ಸಂಬಂಧಿಕರನ್ನು ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ.

ಜಮ್ಮು-ಕಾಶ್ಮೀರ ಕ್ಷೇತ್ರ ಪುನರ್‌ವಿಂಗಡಣೆ ವರದಿ ಸಿದ್ಧ, ಶೀಘ್ರ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಮ್ಮು-ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಕ್ಷೇತ್ರಗಳ ಪುನರ್‌ವಿಂಗಡಣೆಗೆ ಸಂಬಂಧಿಸಿದ ಆದೇಶಕ್ಕೆ ನಿವೃತ್ತ ನ್ಯಾಯಮೂರ್ತಿ ರಂಜನಾ ದೇಸಾಯಿ ನೇತೃತ್ವದ ಕ್ಷೇತ್ರ ಪುನರ್‌ವಿಂಗಡಣಾ ಆಯೋಗವು ಗುರುವಾರ ಅಂತಿಮ ಅಂಕಿತ ಹಾಕಿತು. ಮೂವರು ಸದಸ್ಯರಿರುವ ಆಯೋಗದ ಅವಧಿಯು ಶುಕ್ರವಾರ (ಮೇ 6) ಕೊನೆಗೊಳ್ಳಲಿದೆ.

ಜಮ್ಮು ಮತ್ತು ಕಾಶ್ಮೀರದ 90 ವಿಧಾನಸಭಾ ಕ್ಷೇತ್ರಗಳ ಗಡಿಗಳನ್ನು ಆಯೋಗವು ಪುನರ್ ರಚನೆ ಮಾಡಿದ್ದು, 46 ವಿಧಾನಸಭಾ ಕ್ಷೇತ್ರ ಹೊಂದಿದ್ದ ಕಾಶ್ಮೀರ ಕಣಿವೆಯು ಈಗ ಹೆಚ್ಚುವರಿಯಾಗಿ ಒಂದು ಮತಕ್ಷೇತ್ರವನ್ನು ಸೇರ್ಪಡೆ ಮಾಡಿದೆ. ಜಮ್ಮು ಪ್ರಾಂತ್ಯದಲ್ಲಿನ ವಿಧಾನಸಭಾ ಸ್ಥಾನಗಳ ಸಂಖ್ಯೆಯನ್ನು 37 ರಿಂದ 43 ಕ್ಕೆ ಹೆಚ್ಚಿಸಿದೆ.

'ಕುಪ್ವಾರ ಜಿಲ್ಲೆಗೆ ಒಂದು ಹೆಚ್ಚುವರಿ ಮತಕ್ಷೇತ್ರ ದಕ್ಕಿದ್ದು, ಇಲ್ಲಿ ವಿಧಾನಸಭಾ ಸಂಖ್ಯೆಗಳ ಸಂಖ್ಯೆ ಆರಕ್ಕೆ ಏರಿದೆ' ಎಂದು ಮೂವರ ಸದಸ್ಯರನ್ನು ನೇತೃತ್ವದ ಕ್ಷೇತ್ರ ಪುನರ್ ವಿಂಗಡಣಾ ಆಯೋಗವು ತನ್ನ ಅಂತಿಮ ವರದಿಯಲ್ಲಿ ಹೇಳಿದೆ.

ಅನಂತ ನಾಗ್ ಜಿಲ್ಲೆಯಲ್ಲಿ ಒಂದು ಕ್ಷೇತ್ರ ಹೆಚ್ಚಳವಾಗಿದ್ದು, ಒಟ್ಟು ಕ್ಷೇತ್ರಗಳ ಸಂಖ್ಯೆ 7ಕ್ಕೆ ಏರಿದ್ದು, ಕುಲ್ಗಾಂ ಜಿಲ್ಲೆಯಲ್ಲಿ ಒಂದು ಕ್ಷೇತ್ರ ರದ್ದುಗೊಂಡಿದೆ. ಶ್ರೀನಗರ ಜಿಲ್ಲೆಯಲ್ಲಿ ಹಬ್ಬಕದಲ್ ಕ್ಷೇತ್ರವನ್ನು ಹಾಗೆ ಉಳಿಸಿಕೊಳ್ಳಲಾಗಿದ್ದು, ಅಮಿರಕಡಲ್, ಸೋನಾವರ್, ಬಟಾಮಾಲೊ ಕ್ಷೇತ್ರಗಳನ್ನು ಪ್ರತ್ಯೇಕಿಸಲಾಗಿದೆ. ಬುಡ್ಗಾಂ ಮತ್ತು ಪುಲ್ವಾಮ ಜಿಲ್ಲೆಗಳು ತಲಾ ಒಂಬತ್ತು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದ್ದು, ಕ್ಷೇತ್ರದಲ್ಲಿ ಸಣ್ಣಪುಟ್ಟ ಬದಲಾವಣೆ ಮಾಡಲಾಗಿದೆ.

ಶೋಪಿಯಾನ್ ಜಿಲ್ಲೆಯಲ್ಲಿ ವಾಚಿ ವಿಧಾನಸಭಾ ಕ್ಷೇತ್ರವನ್ನು ಕೈಬಿಡಲಾಗಿದ್ದು, ನೂತನ ಝೈನ್‌ಪೋರಾ ಕ್ಷೇತ್ರವನ್ನು ಸೃಷ್ಟಿಸಲಾಗಿದೆ. ಕುಲ್ಗಾಂ ಜಿಲ್ಲೆಯು ಹೂಂಶಾಲಿಬುಗ್ ಕ್ಷೇತ್ರವನ್ನು ಕಳೆದುಕೊಂಡಿದ್ದು, ಅನಂತನಾಗ್ ಜಿಲ್ಲೆ ಒಂದು ಕ್ಷೇತ್ರವನ್ನು ಪಡೆದುಕೊಂಡಿದ್ದು, 6 ಕ್ಷೇತ್ರಗಳನ್ನು ಹೊಂದಿದ್ದ ಅನಂತನಾಗ್ ಜಿಲ್ಲೆಯು ಈಗ 7 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದಂತಾಗಿದೆ.

ಕಾಶ್ಮೀರದ ಎಲ್ಲ ಲೋಕಸಭಾ ಕ್ಷೇತ್ರಗಳನ್ನು ಪುನರ್ ರಚಿಸಲಾಗಿದ್ದು, ಉತ್ತರ ಕಾಶ್ಮೀರ ಬಾರಾಮುಲ್ಲ ಲೋಕಸಭಾ ಕ್ಷೇತ್ರದಲ್ಲಿನ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ 15ರಿಂದ 18ಕ್ಕೆ ಏರಿದೆ. ಬುಡ್ಗಾಂ ಜಿಲ್ಲೆಯ ಎರಡು ಕ್ಷೇತ್ರಗಳನ್ನು ಇಲ್ಲಿಗೆ ಸೇರ್ಪಡೆ ಮಾಡಲಾಗಿದ್ದು, ಕುಪ್ವಾರದ ಒಂದು ಕ್ಷೇತ್ರವನ್ನು ಬಾರಾಮುಲ್ಲ ಕ್ಷೇತ್ರಕ್ಕೆ ಸೇರ್ಪಡೆ ಮಾಡಲಾಗಿದೆ.

ಉಕ್ರೇನ್: ನಾಗರಿಕರ ಹತ್ಯೆಗೆ ಭಾರತ– ಫ್ರಾನ್ಸ್ ಖಂಡನೆ

ಪ್ಯಾರಿಸ್ (ಪಿಟಿಐ): ಉಕ್ರೇನ್‌ನಲ್ಲಿ ನಡೆಯುತ್ತಿರುವ ನಾಗರಿಕರ ಹತ್ಯೆಯನ್ನು ಖಂಡಿಸಿರುವ ಭಾರತ ಮತ್ತು ಫ್ರಾನ್ಸ್, ತಕ್ಷಣವೇ ಯುದ್ಧ ನಿಲ್ಲಿಸುವಂತೆ ಒತ್ತಾಯಿಸಿವೆ. ಈ ಸಂಘರ್ಷದಿಂದ ಜಾಗತಿಕವಾಗಿ ಎದುರಾಗಿರುವ ಆಹಾರ ಬಿಕ್ಕಟ್ಟು ಸೇರಿ ಇತರ ಸಮಸ್ಯೆಗಳನ್ನು ಎದುರಿಸಲು ಒಗ್ಗೂಡಿ ಕೆಲಸ ಮಾಡಲು ಉಭಯ ದೇಶಗಳು ಬದ್ಧತೆ ವ್ಯಕ್ತಪಡಿಸಿವೆ.

ಯುರೋಪ್ ಪ್ರವಾಸದ ಕೊನೆಯ ದಿನವಾದ ಬುಧವಾರ ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್‌ಗೆ ಭೇಟಿ ನೀಡಿ, ಅಲ್ಲಿನ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅವರೊಡನೆ ಮಾತುಕತೆ ನಡೆಸಿದರು. ಈ ಬಗ್ಗೆ ಎರಡೂ ದೇಶಗಳು ಜಂಟಿ ಹೇಳಿಕೆ ಬಿಡುಗಡೆ ಮಾಡಿವೆ.

'ಉಕ್ರೇನ್ ಸಂಘರ್ಷ ಮತ್ತು ಮಾನವೀಯ ಬಿಕ್ಕಟ್ಟಿನ ಬಗ್ಗೆ ಉಭಯ ದೇಶಗಳು ತೀವ್ರ ಕಳವಳ ವ್ಯಕ್ತಪಡಿಸಿವೆ. ಉಕ್ರೇನ್-ರಷ್ಯಾ ಬಿಕ್ಕಟ್ಟನ್ನು ರಾಜತಾಂತ್ರಿಕ ಚರ್ಚೆ ಮೂಲಕ ಬಗೆಹರಿಸಿಕೊಳ್ಳಬೇಕು' ಎಂದು ಸಲಹೆ ಕೊಟ್ಟಿವೆ.

'ವಿಶ್ವಸಂಸ್ಥೆಯ ಚಾರ್ಟರ್, ಅಂತರರಾಷ್ಟ್ರೀಯ ಕಾನೂನು ಮತ್ತು ರಾಷ್ಟ್ರಗಳ ಸಾರ್ವಭೌಮತೆಯನ್ನು ಪರಸ್ಪರ ಗೌರವಿಸುವ ಅಗತ್ಯವನ್ನು ಭಾರತ– ಫ್ರಾನ್ಸ್ ಒತ್ತಿಹೇಳಿವೆ' ಎಂದು ಅದು ಹೇಳಿದೆ.

'ರಕ್ಷಣಾ, ಬಾಹ್ಯಾಕಾಶ, ಸಾಗರ ಆಧಾರಿತ ಆರ್ಥಿಕತೆ, ನಾಗರಿಕ ಪರಮಾಣು ಬಳಕೆ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸುವ ಕುರಿತು ದ್ವಿಪಕ್ಷೀಯ ಮಾತುಕತೆ ನಡೆಸಿದರು' ಎಂದು ಭಾರತದ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಪರಿಸರ ಸ್ನೇಯಿ ತಂತ್ರಜ್ಞಾನ: ಹವಾಮಾನ ವೈಪರಿತ್ಯದ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಬದ್ಧತೆ ವ್ಯಕ್ತಪಡಿಸಿದ ಎರಡೂ ದೇಶಗಳು, ಪರಿಸರ ಸ್ನೇಹಿ ತಂತ್ರಜ್ಞಾನಗಳ ಅಭಿವೃದ್ಧಿಗೆ ಸಹಭಾಗಿತ್ವ ವಹಿಸಲು ಮಾತುಕತೆ ನಡೆಸಿವೆ. ಈ ಬಗ್ಗೆ ಟ್ವೀಟ್ ಮಾಡಿದ ಮೋದಿ, 'ಫ್ರಾನ್ಸ್ ಭೇಟಿಯು ಹೆಚ್ಚು ಫಲಪ್ರದವಾಗಿದೆ' ಎಂದಿದ್ದಾರೆ.

ಹಾಂಗ್‌ಕಾಂಗ್, ಬೀಜಿಂಗ್‌ನಲ್ಲಿ ಕೋವಿಡ್ ನಿಯಮ ಸಡಿಲಿಕೆ

ಹಾಂಗ್‌ಕಾಂಗ್ (ಎಪಿ): ಹಾಂಗ್ ಕಾಂಗ್‌ನಲ್ಲಿ ಕೋವಿಡ್ ಪ್ರಕರಣಗಳು ಇಳಿಕೆಯಾಗುತ್ತಿರುವ ಕಾರಣ ಗುರುವಾರ ಕೋವಿಡ್ ನಿರ್ಬಂಧಗಳನ್ನು ಸಡಿಲಗೊಳಿಸಲಾಗಿದ್ದು, ಬೀಚ್ ಮತ್ತು ಈಜುಕೊಳವನ್ನು ಜನರಿಗೆ ಮತ್ತೆ ಮುಕ್ತಗೊಳಿಸಲಾಗಿದೆ. ಚೀನಾ ರಾಜಧಾನಿ ಬೀಜಿಂಗ್‌ನಲ್ಲಿ ಹೊರಗಿನಿಂದ ಬರುವವರಿಗೆ ವಿಧಿಸಲಾಗಿದ್ದ ಕ್ವಾರಂಟೈನ್ ನಿಯಮವನ್ನು ತೆಗೆಯಲಾಗಿದೆ.

ಈ ಹಿಂದೆ ರೆಸ್ಟೋರೆಂಟ್‌ನಲ್ಲಿ ಒಂದು ಟೇಬಲ್‌ಗೆ ನಾಲ್ಕು ಜನ ಮಾತ್ರ ಕೂರಲು ಅವಕಾಶ ನೀಡಲಾಗಿತ್ತು. ಈ ಸಂಖ್ಯೆಯನ್ನು 8ಕ್ಕೆ ಏರಿಸಲಾಗಿದೆ. ಹೊರಾಂಗಣದಲ್ಲಿ ವ್ಯಾಯಾಮ ಅಥವಾ ಆಟವಾಡುವ ಕ್ರೀಡಾಪಟುಗಳು ಮಾಸ್ಕ್ ಧರಿಸುವ ಅಗತ್ಯವಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬೀಜಿಂಗ್‌ನಲ್ಲಿ ಗುರುವಾರ ಹೊಸದಾಗಿ 50 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಚೀನಾದ 2ನೇ ಅತಿದೊಡ್ಡ ನಗರ ಶಾಂಘೈನಲ್ಲಿ 4,651 ಹೊಸ ಪ್ರಕರಣಗಳು ವರದಿಯಾಗಿವೆ.

ಟಿಟಿ: ಹಂಸಿಣಿಗೆ 2 ಪದಕ

ನವದೆಹಲಿ (ಪಿಟಿಐ): ಭಾರತದ ಯುವ ಟೇಬಲ್ ಟೆನಿಸ್ ಆಟಗಾರ್ತಿ ಹಂಸಿಣಿ ಮಾಥನ್ ರಾಜನ್ ಅವರು ಆಸ್ಟ್ರಿಯಾದ ಲಿನ್ಸ್‌ನಲ್ಲಿ ನಡೆದ ವಿಶ್ವ ಟೇಬಲ್ ಟೆನಿಸ್ ಯೂತ್ ಕಂಟೆಂಡರ್ ಸ್ಪರ್ಧೆಯಲ್ಲಿ ಎರಡು ಪದಕ ಗೆದ್ದುಕೊಂಡಿದ್ದಾರೆ.

13 ವರ್ಷದೊಳಗಿನವರ ವಿಭಾಗದಲ್ಲಿ ಚಿನ್ನ ಗೆದ್ದುಕೊಂಡ ಅವರು 15 ವರ್ಷದೊಳಗಿನವರ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದರು.

13 ವರ್ಷದೊಳಗಿನವರ ವಿಭಾಗದ ರೋಚಕ ಫೈನಲ್ ಪಂದ್ಯದಲ್ಲಿ ರೊಮೇನಿಯಾದ ಆ್ಯಂಡ್ರಿಯಾ ಬೈಸು ವಿರುದ್ಧ ಹಂಸಿನಿ 11-3, 7-11, 9 -11 ,11-0, 11-8ರಲ್ಲಿ ಜಯ ಗಳಿಸಿದರು.

15 ವರ್ಷದೊಳಗಿನವರ ವಿಭಾಗದ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ದಕ್ಷಿಣ ಕೊರಿಯಾದ ಚೊಯಿ ಹೊಸಿ ವಿರುದ್ಧ 3–0ಯಿಂದ ಹಂಸಿಣಿ ಗೆದ್ದುಕೊಂಡರು.

ಆದರೆ ಸಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಯೂ ಯೆರಿನ್ ಎದುರು ಸೋತರು. ಫೈನಲ್‌ನಲ್ಲಿ ಯೂ ಯೆರಿನ್ ವಿರುದ್ಧ ಗೆದ್ದ ಲೀ ಸಿಗೆಂಗೆನ್ ಪ್ರಶಸ್ತಿ ತಮ್ಮದಾಗಿಸಿಕೊಂಡರು.



ಹಂಸಿಣಿ ಮಾಥನ್ ಅವರ ಆಟದ ಶೈಲಿ – ಟ್ವಿಟರ್ ಚಿತ್ರ

ಟಿಟಿ ಆಟಗಾರ ವಿಶ್ವ ಕುಟುಂಬಕ್ಕೆ ಶರತ್ ದೇಣಿಗೆ

ನವದೆಹಲಿ (ಪಿಟಿಐ): ಅಪಘಾತವೊಂದರಲ್ಲಿ ಈಚೆಗೆ ಮೃತರಾದ ಯುವ ಟೇಬಲ್ ಟೆನಿಸ್ ಆಟಗಾರ ವಿಶ್ವ ದೀನದಯಾಳ ಅವರ ಕುಟುಂಬಕ್ಕೆ ಒಲಿಂಪಿಯನ್ ಶರತ್ ಕಮಲ್ ತಮ್ಮ ಪ್ರಶಸ್ತಿ ಮೊತ್ತವನ್ನು ದೇಣಿಗೆ ನೀಡಿದ್ದಾರೆ.

18 ವರ್ಷದ ವಿಶ್ವ ಹೋದ ತಿಂಗಳು ಗುವಾಹಟಿಯಿಂದ ಶಿಲ್ಲಾಂಗ್ ನಗರಕ್ಕೆ ಪ್ರಯಾಣಿಸುತ್ತಿದ್ದಾಗ ಸಂಭವಿಸಿದ್ದ ಕಾರು ಅಪಘಾತದಲ್ಲಿ ಸಾವನ್ನಪ್ಪಿದ್ದರು. ಪ್ರತಿಭಾನ್ವಿತ ಆಟಗಾರರಾಗಿದ್ದ ವಿಶ್ವ,ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕಗಳನ್ನು ಜಯಿಸಿದ್ದರು. ಡೆಹ್ರಾಡೂನ್‌ನಲ್ಲಿ ನಡೆದಿದ್ದ 19 ವರ್ಷದೊಳಗಿನವರ ರಾಷ್ಟ್ರೀಯ ಟಿಟಿಯಲ್ಲಿ ಪ್ರಶಸ್ತಿ ಜಯಿಸಿದ್ದರು.

ಚೆನ್ನೈನಲ್ಲಿ ವಿಶ್ವನೊಂದಿಗೆ ಶರತ್ ಬಹಳ ಕಾಲ ಅಭ್ಯಾಸ ನಡೆಸಿದ್ದರು. ಶರತ್ 10ನೇ ಬಾರಿ ಗೆದ್ದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪಡೆದ ₹ 2.75 ಲಕ್ಷವನ್ನು ವಿಶ್ವ ಪಾಲಕರಿಗೆ ನೀಡಿದರು.

‘ಈಗ ನಾನು ಕೊಡುತ್ತಿರುವುದು ಕುಟುಂಬದ ಅಗತ್ಯಗಳಿಗೆ ಸಾಕಾಗುವುದೋ ಇಲ್ಲವೋ ಗೊತ್ತಿಲ್ಲ. ಅವರಿಗೆ ಗೌರವ ತೋರಿಸುವ ಮಾರ್ಗ ಇದು. ಮುಂದೆಯೂ ಆಸರೆಯಾಗಿ ನಿಲ್ಲುತ್ತೇನೆ. ಲಾಕ್‌ಡೌನ್ ಸಂದರ್ಭದಲ್ಲಿ ವಿಶ್ವನ ತಂದೆ ನೌಕರಿ ಕಳೆದುಕೊಂಡಿದ್ದರು. ನನ್ನ ಕೈಲಾದಷ್ಟು ಸಹಾಯ ನೀಡಲು ಬದ್ಧ. ಕೆಲವು ಕೋಚ್‌ಗಳು, ಸಹ ಆಟಗಾರರೊಂದಿಗೆ ಈ ಕುರಿತು ಚರ್ಚಿಸಿರುವೆ’ ಎಂದು ಶರತ್ ಕಮಲ್ ಅವರು ಹೇಳಿದರು.